was the incident in Ramanagaram because it was the most unfortunate incident. * * * *

MR. DEPUTY SPEAKER.—Order, order. The Reporters need not take down anything.

(As directed by the Deputy Speaker the rest of Sri S. S. Shettar's speech was not taken down.)

SRI M. S. KRISHNAN.—I have only one request to make to the Minister.

MR. DEPUTY SPEAKER.—I requst the member kindly to resume his seat. We have been spending time unnecessarily on this.

SRI M. S. KRISHNAN.—I want to requst the Minister to take steps to see that communal harmony is established. * * * *

MR. DEPUTY SPEAKER.—Order, order. The Reporters need not take down anything.

(As directed, what Sri M. S. Krishnan said further was not recorded.)

BUDGET ESTIMATES FOR 1968-69—DEMANDS FOR GRANTS

[Demand Nos. 2, 7, 8, 33, 33, 42, and 51]

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇಟ್ಟಿರತಕ್ಕ ಡಿಮ್ಯಾಂಡುಗಳು ಎಂದರೆ 2, 7, 8, 33, 38, 42 ಮತ್ತು 51 ಈ ಬೇಡಿಕೆಗಳ ಚರ್ಚೆ ನಡೆಯುತಕ್ಕ ಕಾಲದಲ್ಲಿ ಈ ಡಿಮ್ಯಾಂಡುಗಳಲ್ಲಿ ಅಳವಡಿಸಿರತಕ್ಕ ಹಣವನ್ನು ಮುಂದಿನ ಸಾಲಿನಲ್ಲಿ ಖರ್ಚು ಮಾಡತಕ್ಕ ಸನ್ನಿವೇಶದಲ್ಲಿ ಸರಕಾರದಲ್ಲಿರತಕ್ಕ ಧೋರಣೆ ಹಾಗೂ ಲೋಪದೋಷಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಇಷ್ಟಪಡುತ್ತೇನೆ.

[MRS. CHAIRMAN (SMT. NAGARATHNAMMA HIREMATH) in the Chair]

ಇದೇ ಸಭೆಯಲ್ಲಿ ಹಿಂದೆ ಈ ರಾಜ್ಯದಲ್ಲಿ ರೆವಿನ್ಯೂ ಮಂತ್ರಿಗಳಾಗಿದ್ದ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಈ ದೇಶದಲ್ಲಿರತಕ್ಕ ಕ್ಷಾಮದ ಒಂದು ಪ್ರದೇಶಗಳು ಎಲ್ಲೆಲ್ಲಿವೆ ಅವುಗಳಿಗಾಗಿ ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಮಾಡಿದಾಗ ಇದಕ್ಕೆ ಒಂದು ಫ್ಯಾಮಿನ್ ಸ್ಟ್ಯಾಟುಟರಿ ಬೋರ್ಡ್ ಒಂದನ್ನು ಸ್ಥಾಪನೆ ಮಾಡಿ ಅದಕ್ಕಾಗಿ ಹಣವನ್ನು ಬಡ್‌ಜೆಟ್ಟಿನಲ್ಲಿ ನಿಗದಿ ಮಾಡಿ ಇಂತಹ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಒಂದು ಭರವಸೆಯನ್ನು ಇಲ್ಲಿ ಕೊಟ್ಟಿದ್ದರು. ಪ್ರಾಯಶಃ ನಮ್ಮ ಈಗಿನ ರೆವಿನ್ಯೂ ಮಂತ್ರಿಗಳಿಗೆ ಇದರ ಕಡೆ ಗಮನ ಏಕೆ ಹರಿದಿಲ್ಲ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಇವೊತ್ತು ಕ್ಷಾಮ ಪರಿಹಾರ ಕಾರ್ಯಕ್ರಮಗಳಿಗಾಗಿ ಅಲ್ಲಿ ಇಲ್ಲಿ ತೇಪೆ ಹಾಕತಕ್ಕ ಕೆಲಸವನ್ನು ನಾವು ಮಾಡಿದರೆ ಅದರಿಂದ ನೈಜವಾದ ಪರಿಹಾರಗಳು ದೊರೆಯುವುದಿಲ್ಲ ಮತ್ತು ಸರ್ಕಾರಕ್ಕೇನೋ ಹಣ ಖರ್ಚಾಗುತ್ತದೆ. ಇವೆಲ್ಲಾ ತಾತ್ಕಾಲಿಕವಾದ ಪರಿಹಾರ ಕಾರ್ಯಗಳು. ಇದಕ್ಕಾಗಿ ಮಾನ್ಯ ಮಂತ್ರಿಗಳು ಇದರ ಬಗ್ಗೆ ಒಂದು ಶಾಶ್ವತವಾದ ಪರಿಹಾರ ಕಾರ್ಯಕ್ರಮವನ್ನು ಎಲ್ಲ ಪ್ರದೇಶಗಳಿಗೂ ಅನ್ವಯವಾಗುವಂತೆ ಇದರ ಬಗ್ಗೆ ಒಂದು ಬೋರ್ಡನ್ನು ರಚನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇನ್ನೊಂದು, ಕೇಂದ್ರ ಸರ್ಕಾರದವರು ಸುಮಾರು ನಲವತ್ತು ಕೋಟಿಯಷ್ಟು ಕ್ಷಾಮ ಪರಿಹಾರದ ಕೆಲಸಗಳಿಗಾಗಿ ಒಂದು ಪ್ರೋಗ್ರಾಂ ತಯಾರು ಮಾಡಿ ಅದರಂತೆ

**** Matter not recorded as indicated by the Chair.

(ಶ್ರೀ ಹೆಚ್. ಡಿ. ದೇವೇಗೌಡ)

ರಾಜ್ಯದಲ್ಲಿ ಎಲ್ಲೆಲ್ಲಿ ಬೆಂಗಾಡು ಪ್ರದೇಶಗಳಿವೆ ಅವನ್ನು ನೋಡಿಕೊಂಡು ಅಂತಹ ಕಡೆಗಳಿಗೆಲ್ಲಾ ಶಾಶ್ವತವಾದ ಪರಿಹಾರಗಳನ್ನು ಒದಗಿಸುತ್ತಾರೆಂದೂ ಹಿಂದೆ ಒಂದು ಸಾರಿ ಈ ಸಭೆಯಲ್ಲೇ ತಿಳಿಸಿದ್ದರು. ಸುಮಾರು ಎರಡು ತಿಂಗಳ ಹಿಂದೆ ನಾನು ಪತ್ರಿಕೆಯಲ್ಲಿ ಒಂದು ಪ್ರಕಟಣೆ ಬಂದದ್ದನ್ನು ಓದಿ ನೋಡಿದೆ. ಅದರಲ್ಲಿ ಸುಮಾರು ಏಳು ತಾಲ್ಲೂಕುಗಳ ಸ್ಕೀಂ ಒಂದನ್ನು ಮಾಡಿಫೈ ಮಾಡುತ್ತಿದ್ದಾರೆಂದು ಇತ್ತು. ಇದರ ಬಗ್ಗೆ ಮಾನ್ಯ ಮಂತ್ರಿಗಳಿಗೂ ಕೂಡ ಒಂದು ಪತ್ರವನ್ನು ಬರೆದಿದ್ದೆ. ಪತ್ರಿಕೆಗಳಲ್ಲಿ ಈ ರೀತಿಯಾಗಿ ಪುನರ್‌ಪರಿಶೀಲನೆ ಮಾಡಬೇಕೆಂದು ಹೇಳುತ್ತಿದ್ದೀರಿ. ಇದರ ಬಗ್ಗೆ ಮಾಡಲು ಕಾರಣವೇನು ಎಂದು ಕೇಳಿದರೆ ಅದಕ್ಕೆ ಇಲ್ಲಿಯವರೆಗೂ ನನಗೆ ಯಾವ ಜವಾಬೂ ಮಂತ್ರಿಗಳಿಂದ ಬರಲಿಲ್ಲ. ಸುಮ್ಮನೆ ಒಂದು ಎಂಡಾರ್ಸ್‌ಮೆಂಟು ಮಾತ್ರ ಬಂದಿದೆ. ಹೀಗೆ ರಾಜಕೀಯ ಪ್ರಭಾವಗಳಿಗೆ ಒಳಗಾಗಿ ಮತ್ತು ನಿಮ್ಮ ಪಕ್ಷದೊಳಗಿರುವ ಎಳೆತಗಳಿಗಾಗಿ ಕ್ಷಾಮದ ಪರಿಹಾರ ಕಾರ್ಯಗಳನ್ನು ಮಾಡುವುದರಲ್ಲಿ ನಿಧಾನ ಮಾಡಿದರೆ ಜನರ ಕಷ್ಟಗಳನ್ನು ಸುಧಾರಿಸಿದಂತಾಗುತ್ತದೆಯೇ ? ಯಾವ ಕೆಲಸಗಳನ್ನು ಮಾಡಬೇಕೆಂದು ತೆಗೆದುಕೊಳ್ಳಲಾಗಿತ್ತೋ ಅದನ್ನು ಕಾರ್ಯಗತ ಮಾಡಬೇಕು. ನಾನು ಇದರ ಬಗ್ಗೆ ಪತ್ರ ಬರೆದು ಸರ್ಕಾರದ ಮಂತ್ರಿಗಳಿಂದ ಮಾಹಿತಿಗಳನ್ನು ಕೇಳಿದ್ದರೂ ಅದು ನನಗೆ ದೊರೆಯಲಿಲ್ಲ. ಈ ಸಂದರ್ಭದಲ್ಲಿ ಮಾನ್ಯ ರೆವೆನ್ಯೂ ಮಂತ್ರಿಗಳಲ್ಲಿ ಒಂದು ಮಾತನ್ನು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ. ಮತ್ತು ಇದರ ಬಗ್ಗೆ ನಾನು ಪತ್ರಿಕೆಗಳಲ್ಲೂ ಕೂಡ ಓದಿದೆ. ಮಾನ್ಯ ರೆವೆನ್ಯೂ ಮಂತ್ರಿಗಳು ಹಾಗೂ ಮುಖ್ಯ ಮಂತ್ರಿಗಳು ಬೆಂಗಳೂರು ಡಿವಿಜನ್ನಿನಲ್ಲಿ ಮಾತ್ರ ಅನ್ವಯವಾಗುವ ರೀತಿಯಲ್ಲಿ ಬೆಂಗಳೂರು ಜಿಲ್ಲೆಯಲ್ಲಿರುವ ಎಲ್ಲ ಅಸೆಂಬ್ಲಿ ಮೆಂಬರುಗಳು ಹಾಗೂ ಪರಿಷತ್ತಿನ ಸದಸ್ಯರುಗಳು ಹಾಗೂ ಎಂ. ಪಿ. ಗಳು ಮಾತ್ರ ಇರುವಂತಹ ಒಂದು ಸಭೆಯನ್ನು ಕರೆದು ಅಲ್ಲಿ ಯಾವ ಯಾವ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ಆಲೋಚನೆ ಮಾಡುವುದಕ್ಕಾಗಿ ಅಲ್ಲಿಗೆ ಪಿ. ಡಬ್ಲ್ಯು. ಡಿ. ಮಂತ್ರಿಗಳು ಹಾಗೂ ಫೈನಾನ್ಸ್ ಮಿನಿಸ್ಟರು ಮತ್ತು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳೂ ಈ ಸಭೆಯಲ್ಲಿದ್ದರು ಎಂದು ಇಂತಹ ಒಂದು ಸಭೆಯನ್ನು ಮಾನ್ಯ ಮುಖ್ಯ ಮಂತ್ರಿಗಳ ಅಳಿಯಂದಿರು ಎಂ. ಪಿ. ಯಾಗಿದ್ದಾರೆಂದು ಅವರಿಗೆ ಅನುಕೂಲ ಮಾಡುವ ಉದ್ದೇಶದಿಂದ ಒಂದು ಪ್ರಭಾವಕ್ಕೆ ಒಳಗಾಗಿ ಇಂತಹ ಸಭೆಯನ್ನು ಕರೆದರು ಎಂದು ಗೊತ್ತಾಗುತ್ತದೆ. ಒಂದು ದೇಶದಲ್ಲಿ ಇಂತಹ ತಾರತಮ್ಯವಾದ ಭಾವನೆಯನ್ನು ಮಾಡಿಕೊಂಡು ಇಂತಹ ಸಭೆಯನ್ನು ಕರೆಯುವುದರ ಔಚಿತ್ಯವಾದರೂ ಏನಿತ್ತು ? ನನಗೇನೋ ಅರ್ಥವಾಗುತ್ತಿಲ್ಲ. ಬೆಂಗಳೂರು ಡಿವಿಜನ್ನಿನಲ್ಲಿ ಮುಖ್ಯ ಮಂತ್ರಿಗಳ ಅಳಿಯಂದಿರು ಎಂ. ಪಿ. ಆಗಿದ್ದಾರೆ ಎಂದು ಅವರ ಪ್ರಭಾವ ಪಡೆಯುವುದಕ್ಕಾಗಿ ಇಂತಹ ಒಂದು ಸಭೆಯನ್ನು ಕರೆದು ಬೇರೆ ಡಿವಿಜನ್ನುಗಳ ಬಗ್ಗೆ ಏನೂ ಮಾಡದೇ ಇಂತಹ ತಾರತಮ್ಯ ಭಾವನೆ ತೋರಿಸುವುದು ಸರಿಯಾದುದಲ್ಲ. ಇದರಿಂದ ಜನತೆಯ ಹಿತಕ್ಕೆ ಧಕ್ಕೆ ತಗಲುತ್ತದೆ. ಇಂತಹ ಕಾರ್ಯವನ್ನು ಸರ್ಕಾರ ಮಾಡುವುದು ತರವಲ್ಲ ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ. ರಾಜ್ಯದಲ್ಲಿ ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ಕ್ಷಾಮದ ಪರಿಸ್ಥಿತಿ ಇದೆ ಇತರ ಕಡೆಗಳಲ್ಲಿ ಇಲ್ಲವೇ, ಇದನ್ನೆಲ್ಲಾ ಸಮಗ್ರವಾಗಿ ತೆಗೆದುಕೊಂಡು ಒಂದು ಸಮನ್ವಯವಾದ ನೀತಿಯನ್ನು ಇದರಲ್ಲಿ ರೂಪಿಸುವುದು ಸರ್ಕಾರದ ಆದ್ಯ ಕರ್ತವ್ಯ. ಇದರಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಅಳಿಯಂದಿರು ಪಾರ್ಲಿಮೆಂಟಿನ ಮೆಂಬರಾಗಿದ್ದಾರೆ ಎಂದು ಅವರ ಪ್ರಭಾವಕ್ಕಾಗಿ ಇಂತಹ ಒಂದು ಸಭೆಯನ್ನು ಕರೆದು ಸರ್ಕಾರದ ಧೋರಣೆಗಳನ್ನು ರೂಪಿಸುವುದು ಸರಿಯಾದ ಮಾರ್ಗವಲ್ಲ. ಇಂತಹ ಕಾಲದಲ್ಲಿ ಸರ್ಕಾರದವರು ಎಲ್ಲ ಜನರಿಗೂ ನ್ಯಾಯ ದೊರಕಿಸಿಕೊಡುವ ರೀತಿಯಲ್ಲಿ ಎಲ್ಲ ಅನುಕೂಲಗಳನ್ನು ಎಲ್ಲರಿಗೂ ದೊರಕಿಸಿ ಕೊಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಲು ಇಚ್ಛಿಸುತ್ತೇನೆ. ಇದರಲ್ಲಿ ಯಾವುದೇ ರಾಜಕೀಯ ಪ್ರಭಾವಕ್ಕೆ ಒಳಗಾಗಬಾರದು. ಪರಿಹಾರ ಕಾರ್ಯಗಳನ್ನು ಮಾಡತಕ್ಕ ಕಾಲದಲ್ಲಿ ಯಾವ ಯಾವ ಕಡೆಗಳಲ್ಲಿ ಎಷ್ಟು ಕೆಲಸಗಳನ್ನು ತೆಗೆದುಕೊಳ್ಳಬೇಕು ಎನ್ನುವುದರಲ್ಲಿ ನ್ಯಾಯವಾದ ಒಂದು ಮಾರ್ಗವನ್ನು ರೂಪಿಸಬೇಕು ಎಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ. ಮೊನ್ನೆಯ ದಿನ ಇಲ್ಲಿ ಮಾನ್ಯ ರೆವೆನ್ಯೂ ಮಂತ್ರಿಗಳು ಶ್ರೀ ಭಾಸ್ಕರ ಶೆಟ್ಟರು ಕೇಳಿದ ಒಂದು ಪ್ರಶ್ನೆಗೆ (ಏಳನೇ ಕಟ್ಟಿನಲ್ಲಿರುವ 79ನೇ ಪ್ರಶ್ನೆ) ಉತ್ತರ ಕೊಡುವಾಗ ಕಂದಾಯವನ್ನು ಎಲ್ಲೆಲ್ಲಿ ಮನ್ನಾ ಮಾಡಲಾಗಿದೆ ಅಥವಾ ಮಾಫಿ ಮಾಡಲಾಗಿದೆ ಎಂದು ಕೇಳಿದುದಕ್ಕೆ ಅವರ ಪಟ್ಟಿಯಲ್ಲಿ ನೋಡಿದರೆ ಹಾಸನ ಜಿಲ್ಲೆಗೆ 63–64 ಹಾಗೂ 64–65ನೇ ಸಾಲುಗಳಲ್ಲಿ 552 ರೂಪಾಯಿಗಳಷ್ಟು ರಿಯಾಯಿತಿಗಳನ್ನು ಕೊಡಲಾಗಿದೆ ಎಂದು ಹೇಳಿದ್ದಾರೆ. ಇದನ್ನು ಉಪಸಚಿವರು ಇಲ್ಲಿ ಹೇಳಿದರು. ಅವರು ಹೇಳುವಾಗ ನಮಗೆ ಒಂದು ಕಾನೂನು ಚೌಕಟ್ಟಿನಲ್ಲಿ ಬರುವ ಭಾಗಗಳಿಗೆ ಮಾತ್ರ ರಿಯಾಯತಿ ಕೊಡಲಾಗಿದೆ, ಹಳೆಯ ಮೈಸೂರಿನಲ್ಲಿ ಇದು ಬರಲಿಲ್ಲ ಎನ್ನುವಂತೆ ಇಲ್ಲ ಹೇಳಿದರು. ತಮ್ಮ ಉತ್ತರದಲ್ಲಿ ಹೇಳಿದಂತೆ ಕಾನೂನಿನ ಚೌಕಟ್ಟಿನ ಒಳಗೆ ಹಳೆಯ

ಮೈಸೂರಿನ ಚಿಕ್ಕಮಗಳೂರು ಜಿಲ್ಲೆ ಬರುವುದಿಲ್ಲವೆ? ಮಂಡ್ಯ ಜಿಲ್ಲೆ ಬರುವುದಿಲ್ಲವೇ? ಇಲ್ಲೆಲ್ಲ ಕಂದಾಯವನ್ನು ಮಾಫಿ ಮಾಡಿ ಬೇರೆ ಕಡೆ ಮಾಡುವುದಕ್ಕೆ ಅವಕಾಶ ಇರಲಿಲ್ಲವೇ? ಹಾಸನ ಜಿಲ್ಲೆಗೆ ಮಾತ್ರ 552 ರೂಪಾಯಿಗಳಷ್ಟು ರಿಯಾಯಿತಿಗಳನ್ನು ಕೊಡುವಾಗ ಇತರ ಭಾಗಗಳಲ್ಲೂ ನೋಡಿ ಕೊಂಡು ಅದರಂತೆ ರಿಯಾಯಿತಿಗಳನ್ನು ಕೊಡಬೇಕಾಗಿತ್ತು. ಇದರ ಬಗ್ಗೆ ಸರ್ಕಾರಕ್ಕೆ ಅಲ್ಲಿನ ಜಿಲ್ಲಾಧಿಕಾರಿಗಳು ಸುಮಾರು ಎಳೆಂಟು ಲಕ್ಷ ರೂಪಾಯಿಗಳಷ್ಟು ರಿಯಾಯಿತಿಗಳನ್ನು ಕೊಡಲು ಅವಕಾಶ ಇದೆ ಎಂದು ಪಟ್ಟಿ ಮಾಡಿ ಕಳುಹಿಸಿದ್ದರೂ ಸರ್ಕಾರದವರು ಆ ಅಂಕಿ ಅಂಶಗಳಂತೆ ಕಾರ್ಯಗತ ಮಾಡಲು ಒಂದು ರಿಯಾಯಿತಿ ಮಾಡಬಹುದು ಎಂದು ಸರ್ಕಾರದವರನ್ನು ಕೇಳಿದ್ದರೂ ಅದಕ್ಕೆ ಸರ್ಕಾರ ಅನುಕೂಲ ಮಾಡಿಕೊಡಲಿಲ್ಲ. ಹೀಗಾದರೆ ಹಳ್ಳಿಗಾಡಿನ ಜನರಿಗೆ ಉದ್ಧಾರ ಮಾಡುತ್ತೇವೆ ಎಂದು ಹೇಳುವ ಸರ್ಕಾರ ಅವರಿಗೆ ಯಾವ ರೀತಿ ರಿಯಾಯಿತಿಗಳನ್ನು ಒದಗಿಸುತ್ತಿದೆ ಎಂದು ಇಲ್ಲಿ ಕೇಳಬೇಕಾಗಿದೆ.

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಕಂದಾಯ ಮಂತ್ರಿಗಳು).—ಎಲ್ಲೆಲ್ಲಿ ಕ್ಷಾಮ ಪರಿಹಾರದ ಕಾರ್ಯಗಳನ್ನು ಮಾಡಬೇಕು ಮತ್ತು ಅದನ್ನು ಯಾವ ರೀತಿಯಾಗಿ ಮಾಡಬೇಕು ಎನ್ನುವುದಕ್ಕೆ ಸಂಬಂಧಪಟ್ಟ ರೂಲ್ಸುಗಳು ತಯಾರು ಮಾಡಲಾಗಿದೆ. ಇದರಂತೆ ಸುಮಾರು 61ನೇ ಇಸವಿಯಿಂದಲೂ ರೆಟ್ರಾಸ್‌ಪೆಕ್ಟೀವ್ ಆಗಿ ಜಾರಿಗೆ ಕೊಡಬೇಕು ಎಂದು ಮಾಡುತ್ತಿದ್ದೇವೆ. ಡ್ರಾಫ್ಟ್ ರೂಲ್ಸುಗಳು ತಯಾರಾಗಿವೆ. ಇದರಂತೆ ಹಾಸನ ಹಾಗೂ ಇನ್ನಿತರ ಜಿಲ್ಲೆಗಳಲ್ಲಿ ಎಷ್ಟೆಷ್ಟು ರಿಯಾಯಿತಿಗಳನ್ನು ಕೊಡಬಹುದು ಎನ್ನುವುದನ್ನೆಲ್ಲಾ ಪರಿಶೀಲನೆ ಮಾಡಿಕೊಡಲು ಪ್ರಯತ್ನ ಮಾಡುತ್ತಿದ್ದೇವೆ ಎಂದು ಇಷ್ಟು ಮಾತ್ರ ಈ ಸಂದರ್ಭದಲ್ಲಿ ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದಕ್ಕಾಗಿ ನಾನು ಮಂತ್ರಿಗಳಿಗೆ ಆಭಾರಿಯಾಗಿದ್ದೇನೆ.

ನಾನು ಕೇಳಿದ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರದಿಂದ ಹಾಸನ ಜಿಲ್ಲೆಗೆ ಕೊಡಬೇಕಾದ ರಿಯಾಯಿತಿ ಬಗ್ಗೆ ಆಶ್ವಾಸನ ಕೊಟ್ಟಿರುವುದರಿಂದ ಈ ಬಗ್ಗೆ ಹೆಚ್ಚು ಹೇಳಲು ಬಯಸುವುದಿಲ್ಲ

3-30 P.M.

ಮಾನ್ಯ ಅಧ್ಯಕ್ಷರೇ, ಕಳೆದ ಆರು ವರ್ಷಗಳಿಂದ ಒಂದೇ ಸಮನೇ ಡಿವಿಜನಲ್ ಕಮಿಷನರ್ ಆಫೀಸ್ ತೆಗೆಯ ಬೇಕು ಎಂದು ಈ ಸಭೆಯಲ್ಲಿ ಹೇಳುತ್ತಾ ಬಂದಿದ್ದೇವೆ, ಚರ್ಚೆ ಮಾಡಿದ್ದೇವೆ. ಈ ಬಗ್ಗೆ ಸದಸ್ಯರು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ಈ ಸಂದರ್ಭದಲ್ಲಿ ಸಚಿವರಿಗೆ ಒಂದು ಪ್ರಶ್ನೆ ಕೇಳಲು ಇಚ್ಛೆಪಡುತ್ತೇನೆ. ವಿಲೇಜ್ ಆಫೀಸಸ್ ಅಬಾಲಿಷನ್ ಆಕ್ಟ್ ಜಾರಿಗೆ ತಂದಿದ್ದೀರಾ? ಅದನ್ನು ಕಾರ್ಯಗತ ಮಾಡಿದ್ದೀರಾ? ಪಂಚಾಯಿತಿ ಸೆಕ್ರಟರೀಜ್ ಅಪಾಯಿಂಟ್‌ಮೆಂಟ್ ಮಾಡಿ ರೈತರಿಗೆ ಬಹಳ ಅನಾಹುತವಾಗುತ್ತಿದೆ, ಅದನ್ನು ತಪ್ಪಿಸಬೇಕು ಎಂದು ತೀರ್ಮಾನವಾಗಿದೆ. ಜಾರಿಗೆ ಕೊಡತಕ್ಕಂಥ ವಿಷಯ ಏನು ಅಂದರೆ, ನಾಲ್ಕು ಡಿವಿಜನ್ನಿನಲ್ಲಿ ನಾಲ್ಕು ಜನ ಡಿವಿಜನಲ್ ಕಮಿಷನರ್ಸ್ ವಿರೋಧಿಸಿದ್ದಾರೆ. ಬ್ಲಡ್ ಈಜ್ ಥಿಕರ್ ದ್ಯಾನ್ ವಾಟರ್ ಎಂದು ಹೇಳುವ ಹಾಗೆ ಆಗಿದೆ. ನಾನು ಯಾವ ಜಾತೀಯ ಭಾವನೆಯಿಂದ ಇದನ್ನು ಮಾತನಾಡುವುದಿಲ್ಲ. ಹಳ್ಳಿಗಳ ಬಗ್ಗೆ ನಿಮಗೆ ಕನಿಕರ ಇದ್ದರೆ, ರೈತರ ಕಷ್ಟ ಪರಿಹರಿಸಬೇಕು ಎಂದು ಇದ್ದರೆ ಮೊದಲು ಇದಕ್ಕೆ ಸರಕಾರ ಗಮನ ಕೊಡಬೇಕು. ಮೊನ್ನೆ ಒಂದು ಕಡೆ ನಾನು ಬಹಳ ರೊಚ್ಚಿಗೆದ್ದು ಈ ಬಗ್ಗೆ ಮಾತನಾಡಬೇಕಾಯಿತು. ಒಬ್ಬ ಶಾನುಭೋಗ ಒಂದು ಅರ್ಜಿ ಬರೆದು ಕೊಡಬೇಕಾದರೆ 25—40 ರೂಪಾಯಿ ಹಣಕೊಡ ಬೇಕಾಗುತ್ತದೆ. 1971 ರ ವರೆಗೆ ಎಕ್ಸ್‌ಟೆನ್‌ಷನ್ ಕೊಡುತ್ತೀರಿ ಸ್ಟೇಜ್ ಬೈಸ್ಟೇಜ್ ಇಂಪ್ಲಿಮೆಂಟ್ ಮಾಡತಕ್ಕಂಥ ನೀತಿ ಕಾರ್ಯಕ್ರಮ ಸರಕಾರ ಹಾಕಿಕೊಂಡಿದೆ ಎಂದು ಕೇಳಿದ್ದೇನೆ. ಈ ಮಾನ್ಯ ಸಭೆಯಲ್ಲಿ ಪಾಸಾದಂಥ ಆಕ್ಟ್ ಜಾರಿಗೆ ತರತಕ್ಕಂಥ ಯೋಗ್ಯತೆ ಇಲ್ಲದೇ ಇದ್ದರೆ ಈ ದ್ವಂದ್ವ ನೀತಿ ಯಿಂದ ರೈತರಿಗೆ ಆಗತಕ್ಕಂಥ ಹಿಂಸೆಗೆ ನೀವೇ ಭಾಗಿಗಳು. ಶ್ರೀಮಾನ್ ರಾಚಯ್ಯನವರು ಈ ಪೋರ್ಟ್‌ಫೋಲಿಯೋ ಹೊಂದಿದ್ದಾರೆ ಆದ್ದರಿಂದ ಅವರನ್ನೇ ಕೇಳ ಬೇಕಾಗುತ್ತದೆ. ಒಬ್ಬ ಹರಿಜನ ತನಗೆ ಪೋಟಿಗಿ ಬರತಕ್ಕಂಥ ಪರಿಹಾರದ ಬಗ್ಗೆ ಅರ್ಜಿ ಬರೆಯುವುದಕ್ಕೆ ಒಬ್ಬನು ಇಪ್ಪತ್ತು ರೂಪಾಯಿ ತೆಗೆದುಕೊಂಡನು. ನಾನು ಇದನ್ನು ಅಧಿಕಾರಿಗಳ ಹತ್ತಿರ ಹೋಗಿ ಚರ್ಚೆ ಮಾಡಿದೆ. ಈ ಕೇಸನ್ನು ಆಂಟಿ ಕರಪ್ಷನ್ ಅವರ ಕಡೆಗೆ ತೆಗೆದುಕೊಂಡು ಹೋಗಿ ಅಂಥವನನ್ನು ಟ್ರಾಪ್ ಮಾಡುವುದು ಒಳ್ಳೆಯದು ಎಂದು ಹೇಳುತ್ತಾರೆ. ಇದು ಸಾಧ್ಯವೇ? ಈ ದ್ವಂದ್ವ ನೀತಿ ಸರಕಾರ ಕೈ ಬಿಡಬೇಕು. ಸರಕಾರ ಪ್ರಜೆಗಳಿಗೆ ನಿಜವಾಗಿಯೂ ಅನುಕೂಲತೆ ಮಾಡಿ ಕೊಡಬೇಕು ಎಂದು ಇದ್ದರೆ ಇಲ್ಲಿ ಪಾಸು ಮಾಡಿದಂಥ ಕಾನೂನನ್ನು ಕಾರ್ಯಗತ ಮಾಡುವುದಕ್ಕೆ ಹಿಂದು ಮುಂದು ನೋಡಬಾರದು ಎಂದು ಸರಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಆಕ್ಟ್ ಕೂಡಲೇ ಜಾರಿಗೆ

(ಶ್ರೀ ಎಚ್. ಡಿ. ದೇವೇಗೌಡ)

ತರಬೇಕು. ಗ್ರಾಮಾಧಿಕಾರಿಗಳಿಗೆ ಪರಿಹಾರ ಕೊಡತಕ್ಕಂಥಾದ್ದಕ್ಕೆ ಯಾವ ಅಡ್ಡಿಯಿಲ್ಲ. ಅದನ್ನು ಸ್ವಾಗತ ಮಾಡುತ್ತೇವೆ. ಈಗ ಇರತಕ್ಕಂಥ ದ್ವಂದ್ವ ನೀತಿಯಿಂದ ಆಗತಕ್ಕಂಥ ಅನಾಹುತ ತಪ್ಪಿಸಬೇಕು ಎಂದು ಸೂಚಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಲ್ಯಾಂಡ್ ರೆವೆನ್ಯೂ ಬಗ್ಗೆ ಸಾಕಷ್ಟು ಚರ್ಚೆ ಮಾಡಿದೆ. ಕಾಂಗ್ರೆಸ್ ಪಕ್ಷದ ಕೆಲವು ಮಿತ್ರರು ಹೇಳಿದ ಹಾಗೆ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ತಂದರೆ ತನ್ಮೂಲಕ ಶೋಷಣೆ ಯಾಗುತ್ತದೆ ಎನ್ನುವ ಧೋರಣೆಯನ್ನು ಪ್ರಾಯಶಃ ನಾವು ಒಪ್ಪುವುದಿಲ್ಲ. ಅನೇಕ ಜನ ಎಗ್ಸಿಸ್ಟಿಂಗ್ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಪರಿಮಿತಿಯಲ್ಲಿ ಬರತಕ್ಕಂಥ ಜನ ಕೆಲವು ಅಧಿಕಾರಿಗಳಿಗೆ ಲಂಚ ಕೊಟ್ಟು ಬೇರೆ ರೀತಿಯಲ್ಲಿ ಟ್ಯಾಕ್ಸ್ ಕೊಡದೆ ತಪ್ಪಿಸಿಕೊಂಡಿರುವುದು ಗೊತ್ತಾಗಿದೆ. ಶ್ರೀಮಂತ ವ್ಯವಸಾಯಗಾರರು ಪ್ರಭಾವ ಬೀರಿ ಕೊಡತಕ್ಕಂಥ ಟ್ಯಾಕ್ಸ್ ತಪ್ಪಿಸಿಕೊಂಡಿದ್ದಾರೆ. ಒಂದು ವಿಷಯ ಸರಕಾರಕ್ಕೆ ಸೂಚನೆ ಮಾಡಲು ಇಚ್ಛಿಸುತ್ತೇನೆ. ಲ್ಯಾಂಡ್ ರಿಫಾರ್ಮ್ಸ್ ಸಂಬಂಧದಲ್ಲಿ ಜತ್ತಿ ಕಮಿಟಿ ರಿಪೋರ್ಟ್ ಇದೆ. 100ಕ್ಕೆ 60 ಪರ್ಸೆಂಟ್ ಐದು ಎಕರೆ ಒಳಗೆ ಇರತಕ್ಕಂಥ ಜನರು ಇದ್ದಾರೆ ಎಂದು ಅದರಲ್ಲಿ ಹೇಳಿದೆ. ಅದುದರಿಂದ ಲ್ಯಾಂಡ್ ರೆವನ್ಯೂ ಎಗ್ಜೆಂಪ್ಷನ್ ಕೊಡ ತಕ್ಕಂಥಾದ್ದಕ್ಕೆ ತೊಂದರೆಯಾಗಲಾರದು ಎಂದು ಹೇಳುತ್ತೇನೆ. ಹೆಚ್ಚು ಜಮೀನು ಇದ್ದವರಿಗೆ ಕಂದಾಯ ಜಾಸ್ತಿ ಮಾಡಬಹುದು.

ಶ್ರೀ ಡಿ. ದೇವರಾಜ ಅರಸ್ (ಪಶುಪಾಲನೆ, ಮೀನುಗಾರಿಕೆ, ವಾರ್ತೆ ಮತ್ತು ಪ್ರಚಾರ ಶಾಖೆಗಳ ಮಂತ್ರಿಗಳು).--60 ಪರ್ಸೆಂಟ್ ಜನ ಇರುವವರಲ್ಲಿ ಟೋಟಲ್ ಲ್ಯಾಂಡ್ ಎಷ್ಟು ಇದೆ ಅದನ್ನು ಹೇಳಿ.

ಶ್ರೀ ಎಚ್. ಡಿ. ದೇವೇಗೌಡ.—ಈ ಒಂದು ವಿಷಯದ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯಲು ಇಚ್ಛಿಸುತ್ತೇನೆ. ಟೋಟಲ್ ಏರಿಯಾ ಎಷ್ಟು ಈಗ ಹೇಳಲು ಬರುವುದಿಲ್ಲ. ಆದರೆ ರಿಪೋರ್ಟ್‌ನಲ್ಲಿ ಹೇಳಿರುವ ಹಾಗೆ ಐದು ಎಕರೆಯೊಳಗೆ ಇರತಕ್ಕಂಥವರು ಬಹುತೇಕಜನ ಇದ್ದಾರೆ. ಅವರು ಹೆಚ್ಚು ಜನ ಇದ್ದಾರೆ. ಆದುದರಿಂದ ಎಗ್ಜೆಂಪ್‌ಷನ್ ಕೊಡುವುದಕ್ಕೆ ತೊಂದರೆಯಿಲ್ಲ.

ಶ್ರೀ. ಡಿ. ದೇವರಾಜ ಅರಸ್.—ಐದು ಎಕರೆಯೊಳಗೆ ಗಾರ್ಡನ್ ಲ್ಯಾಂಡ್ ಇದೆ, ತರೀ ಜಮೀನು ಇದೆ, ಖುಷ್ಕಿ ಜಮೀನು ಇದೆ.

ಶ್ರೀ ಎಚ್. ಡಿ. ದೇವೇಗೌಡ.—5 ಎಕರೆಯೊಳಗೆ ಇಂತಕ್ಕಂಥ ಸ್ಮಾಲ್ ಹೋಲ್ಡಿಂಗ್ಸ್ ನವರಿಗೆ ಕೊಡಿ.

ಶ್ರೀ ಡಿ. ದೇವರಾಜ ಅರಸ್.—ಸ್ಮಾಲ್ ಹೋಲ್ಡಿಂಗ್ಸ್‌ನಲ್ಲಿ ಕೂಡ ಖುಷ್ಕಿ ತರೀ ಬಾಗಾಯಿತ ಜಮೀನು ಬರುತ್ತವೆ.

ಶ್ರೀ ಎಚ್. ಡಿ. ದೇವೇಗೌಡ.—ಅವರು ಹೇಳುವುದು ನನಗೆ ಅರ್ಥವಾಗುತ್ತದೆ. ಐದು ಎಕರೆ ಒಳಗೆ ಇಂತಕ್ಕಂಥ ಖುಷ್ಕಿ ಜಮೀನುಗಳಿಗೆ ಇದನ್ನು ಕೊಡಿ ಎಂದು ನನ್ನ ಅಭಿಪ್ರಾಯ. ಒಂದು ಎಕರೆ, ಎರಡು ಎಕರೆ ಇರತಕ್ಕಂಥವರಿಗೆ ವಿನಾಯಿತಿ ಕೊಡಬೇಕು. ಇನ್ನೊಂದು ವಾದ ಇದೆ. ಐದು ಎಕರೆ ಜಮೀನಿನಲ್ಲಿ ಉತ್ಪತ್ತಿ ಬರತಕ್ಕಂಥ ಸನ್ನಿವೇಶ ಗಣನೆಗೆ ತೆಗೆದುಕೊಳ್ಳಬೇಕು ಮತ್ತು ಬೆನಿಫಿಟ್ ಕೊಡಬೇಕು ಎನ್ನುವುದನ್ನು ಸರಕಾರ ಯೋಚನೆ ಮಾಡಬೇಕು.

ಸ್ಟಾಂಪ್ಸ್ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. 1962 ರಿಂದ 1967ರವರೆಗೆ ಸ್ಟಾಂಪ್ಸ್ ಡ್ಯೂಟಿ ಎಷ್ಟು ಆಗಿದೆ ಎನ್ನುವುದನ್ನು ನೋಡಿದರೆ ಒಂದಕ್ಕೆ ಮೂರು ಪಟ್ಟು ಹೆಚ್ಚು ಮಾಡಿದ್ದೀರಿ. ರೈತನ ಶೋಷಣೆ ಮಾಡತಕ್ಕಂಥ ಹಲವಾರು ಮಾರ್ಗಗಳಲ್ಲಿ ಇದೊಂದು. ಒಂದಕ್ಕೆ ಮೂರು ಪಟ್ಟು ಆಗಿದೆ. ಅಲ್ಲದೆ ಗ್ರಾಮಾಂತರ ಪ್ರದೇಶದಲ್ಲಿ ಸ್ಟಾಂಪ್ಸ್ ಇರುವುದಿಲ್ಲ. ಒಂದು ದರಖಾಸ್ತು ಅರ್ಜಿಗೆ ನಾಲ್ಕು ಆಣೆ ಸ್ಟಾಂಪ್ ಸಿಕ್ಕುವುದಿಲ್ಲ. ನಾಲ್ಕಾಣೆಯ ಸ್ಟಾಂಪ್ ಸಲುವಾಗಿ ಒಂದು ರೂಪಾಯಿ ಇಲ್ಲವೆ ಒಂದೂವರೆ ರೂಪಾಯಿ ಸ್ಟಾಂಪ್ ಕೊಂಡು ಹಾಕ ಬೇಕಾಗುತ್ತದೆ. ಸರಕಾರ ಸರಿಯಾದ ಸ್ಟಾಂಪ್ಸ್ ಒದಗಿಸಲು ಇರುವ ಅಡ್ಡಿ ಏನು? ಈ ರೀತಿ ಪರಿಸ್ಥಿತಿ ಇರುವುದು ಸರಿಯಲ್ಲ. ಸಕಾಲದಲ್ಲಿ ಎಲ್ಲ ಸ್ಥಳಗಳಿಗೆ ಸ್ಟಾಂಪು ದೊರೆಯುವ ಹಾಗೆ ಅಲ್ಲಿಯ ಅಧಿಕಾರಿಗಳು ಇಂಡೆಂಟ್ ಮಾಡುವುದಕ್ಕೆ ಅಡಚಣೆ ಏನು ಇದೆ? ಇದು ಬಹಳ ಅನ್ಯಾಯ. ಅನಾವಶ್ಯಕವಾಗಿ ರೈತನ ಮೇಲೆ ಹೊರೆ ಹಾಕತಕ್ಕಂಥಾದ್ದು ಸರಿಯಲ್ಲ.

ಶ್ರೀ ಜಿ. ಬಿ. ಶಂಕರರಾವ್ (ಕಂದಾಯಶಾಖೆಯ ಉಪ ಮಂತ್ರಿಗಳು).—ಕೇಂದ್ರ ಸರಕಾರ ರಾಜ್ಯ ಸರಕಾರಗಳಿಗೆ ಸ್ಟ್ಯಾಂಪ್ಸ್ ಸಪ್ಲೈ ಮಾಡುತ್ತದೆ. ಅವು ನಾಸಿಕದಲ್ಲಿ ಪ್ರಿಂಟ್ ಆಗುತ್ತವೆ. ರಾಜ್ಯ ಸರಕಾರ ಅವುಗಳನ್ನು ತರಿಸಿ ಹಂಚುತ್ತದೆ. ಆದರೆ ಅಲ್ಲಿಯೇ ಸ್ಟ್ಯಾಂಪ್ಸ್ ಕಡಿಮೆಯಾಗಿವೆ. ಸಾಕಷ್ಟು ಸ್ಟ್ಯಾಂಪ್ಸ್ ತರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಉಪಮಂತ್ರಿಗಳು ಕೊಟ್ಟಂಥ ಹೇಳಿಕೆ ಏನಿದೆ ಅದು ಭಾಗಶ: ಸತ್ಯವಾದರೂ ಪೂರ್ತಿ ಸರಿಯಲ್ಲ. ಡಿಸ್ಟ್ರಿಕ್ಟ್ ಟ್ರೆಜರಿಯಲ್ಲಿ ಸ್ಟ್ಯಾಂಪುಗಳಿದ್ದರೂ ಕೂಡ ಇಂಡೆಂಟ್ ಹಾಕಿದಾಗ ಅಲಾಟ್ ಮಾಡುವುದರಲ್ಲಿ ಭ್ರಷ್ಟಾಚಾರವಿದೆ ಎಂದು ನಾನು ಕೇಳಿದ್ದೇನೆ. ಇದು ಸರಿಯಾದ್ದಲ್ಲ. ಇದರ ಬಗ್ಗೆ ಗಮನ ಹರಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಅಕ್ವಿಜಿಷನ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಮಾನ್ಯ ಸಚಿವರು ಇದರ ಕಡೆಗೆ ಗಮನ ಕೊಡಬೇಕು. 1960 ನೇ ಇಸವಿಯಲ್ಲಿ ಒಂದು ಅಕ್ವಿಜಿಷನ್ ರಿಕಾರ್ಡ್ ಪ್ರಾರಂಭವಾದರೆ 1968ರವರೆಗೂ ಅದು ಬಗೆಹರಿಯುವುದಿಲ್ಲ. 1960ನೇ ಇಸವಿಯಲ್ಲಿ ಜಮೀನಿನ ಬೆಲೆ ಏನಿರುತ್ತದೆ ಅದನ್ನು ಅಧಿಕಾರಿ ತಿಳಿಸಿರುತ್ತಾನೆ ಮತ್ತು ಅಕ್ವಿಜಿಷನ್ ಮಾಡಲು ಯಾರು ಕೋರಿರುತ್ತಾರೆ ಆ ಪಂಚಾಯಿತಿಯವರು ದುಡ್ಡು ಕಟ್ಟಿರುತ್ತಾರೆ. 1968ನೇ ಇಸವಿಯವರೆಗೂ ರಿಕಾರ್ಡ ತೀರ್ಮಾನ ವಾಗದೆ ಹೋದರೆ, 1968ರಲ್ಲಿ ಆ ಜಮೀನಿನ ಬೆಲೆ ಏನಿರುತ್ತದೆ ಆ ಪ್ರಕಾರ ಪಂಚಾಯಿತಿಯವರು ದುಡ್ಡು ಕಟ್ಟಬೇಕೆಂದು ನೋಟೀಸ್ ಕೊಡುತ್ತಾರೆ. ಈ ಹೆಚ್ಚುವರಿ ಹಣವನ್ನು ಯಾರು ಕೊಡ ಬೇಕು? ಅಸಿಸ್ಟೆಂಟ್ ಕಮಿಷನರ್ ಆಫೀಸು, ಡೆಪ್ಯುಟಿ ಕಮಿಷನರ ಆಫೀಸು ಹೀಗೆ ಪ್ರತಿಯೊಂದು ಆಫೀಸಿನಲ್ಲಿಯೂ ಆರಾರು ತಿಂಗಳು, ಒಂದೊಂದು ವರ್ಷ ಎರಡೆರಡು ವರ್ಷ ಅಕ್ವಿಜಿಷನ್ ನಿಂತಿರುವ ಸನ್ನಿವೇಶಗಳಿರುತ್ತವೆ. ಇದು ಸಂಬಂಧಪಟ್ಟ ಪಂಚಾಯಿತಿಯ ತಪ್ಪೋ ಅಥವಾ ರೈತರ ತಪ್ಪೋ? ಜಮೀನಿನ ಬೆಲೆಯಲ್ಲಿ ಆಗುವಂಥ ವ್ಯತ್ಯಾಸವನ್ನು ಯಾರು ತಮ್ಮ ಆಫೀಸುಗಳಲ್ಲಿ ರಿಕಾಡ್ ತಡೆಹಿಡಿ ದಿರುತ್ತಾರೆ ಲಂಚರುಷುವತ್ತುಗಳ ಆಸೆಗಾಗಿ ತಡೆಹಿಡಿದಿರುತ್ತಾರೆ ಅಂಥವರ ಮೇಲೆ ಸರ್‌ಚಾರ್ಜ್ ಹಾಕಿ ಹಣ ವಸೂಲ್ಮಾಡಬೇಕೆಂದು ಹೇಳುತ್ತೇನೆ. ಅಕ್ವಿಜಿಷನ್ ರಿಕಾರ್ಡಗಳನ್ನು ಪ್ರತಿಯೊಬ್ಬರೂ ಬೇಗ ಕಳಿಸಿಕೊಡಬೇಕು, ಇಲ್ಲವಾದರೆ ರಿಕಾರ್ಡ್ ಪ್ರಾರಂಭವಾದುದಕ್ಕೂ ಅದು ಅಂತಿಮವಾಗಿ ತೀರ್ಮಾನವಾಗುವುದಕ್ಕೂ ಇರುವ ಕಾಲದ ಅಂತರದಲ್ಲಿ ಆಗುವ ಬೆಲೆಗಳ ವ್ಯತ್ಯಾಸವನ್ನು ಅಂಥ ಅಧಿಕಾರಿಗಳಿಂದ ಸರ್ಚಾರ್ಜ ಮಾಡಿ ವಸೂಲು ಮಾಡಲಾಗುವುದು ಎಂದು ಜಿಲ್ಲಾಧಿಕಾರಿಗಳಿಗೆ ಒಂದು ಸರ್ಕ್ಯುಲರ್ ಕಳಿಸಿಕೊಟ್ಟರೆ ಅಕ್ವಿಜಿಷನ್ ರಿಕಾರ್ಡ್‌ಗಳು ನಿಧಾನವಾಗುವುದು ನಿಂತು ಹೋಗುತ್ತದೆ.

ಕ್ಷಾಮ ಪರಿಹಾರ ಕಾರ್ಯಗಳಿಗೆ ಕೊಡುವ ಹಣದಲ್ಲಿ ಕೂಡ ದುರುಪಯೋಗ ಮಾಡುತ್ತಾರೆ. ಜನಗಳಿಗೆ ಉಪಕಾರವಾಗಲಿ, ರೈತರಿಗೆ ಅನುಕೂಲವಾಗಲಿ ಎನ್ನುವ ಆಸೆಯಿಂದ ತಾವು ಕೊಟ್ಟಿರತಕ್ಕ ಹಣವನ್ನು ಕೆರೆಗಳಲ್ಲಿ ಪಿಟ್‌ವೆಲ್ಸ್ ತೆಗೆಸಿ ಕುಡಿಯುವುದಕ್ಕೆ ನೀರನ್ನು ಒದಗಿಸಲು ಕೊಟ್ಟು ಸಹಾಯ ಮಾಡಿದ್ದರೂ ಕೂಡ ಅದನ್ನು ದುರುಪಯೋಗ ಮಾಡತಕ್ಕ ಸನ್ನಿವೇಶಗಳಿವೆ. ಕೆರೆ ಅಂಗಳದಲ್ಲಿ ಕಬ್ಬಿನ ಬೆಳೆಗೆ ನೀರು ಹಾಯಿಸಲು ತೆಗೆದಿರುವ ಬಾವಿಗಳ ಲೆಕ್ಕವನ್ನು ಕೊಟ್ಟು ಈ ಹಣವನ್ನು ದುರುಪಯೋಗ ಮಾಡುತ್ತ ಇದ್ದಾರೆ. ಇಂಥವು ನಡೆಯದ ಹಾಗೆ ಸರ್ಕಾರ ನೋಡಿ ಕೊಳ್ಳಬೇಕು. ಅಲ್ಲದೆ ರಾಜ್ಯದಲ್ಲಿ ಶಾಶ್ವತವಾದ ಪರಿಹಾರ ಕೊಡುವುದಕ್ಕೆ ತೆಗೆದುಕೊಳ್ಳಬೇಕಾದ ಕಾರ್ಯಗಳ ಪ್ರೋಗ್ರಾಂ ಹಾಕಿದ್ದಾರೆ. ಅದನ್ನು ಕಾರ್ಯಗತ ಮಾಡುವುದರಲ್ಲಿ ಯಾವ ರೀತಿಯ ರಾಜಕೀಯ ಪ್ರಭಾವಕ್ಕೂ ಒಳಗಾಗಬಾರದು, ನ್ಯಾಯ ರೀತಿಯಲ್ಲಿ ಕಾರ್ಯಗತ ಮಾಡಬೇಕು ಎಂದು ಹೇಳುತ್ತೇನೆ.

ಮಾನ್ಯ ಉಪಮಂತ್ರಿಗಳಾದ ಶಂಕರ ರಾಯರು ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಅವರು ಪ್ರವಾಸ ಹೋದಾಗ ತಾಲ್ಲೂಕು ಆಫೀಸುಗಳಿಗೆ ಹೋಗಿ ಮ್ಯುಟೇಷನ್ ರಿಕಾರ್ಡ್ ಮತ್ತು ಇತರ ಅರಿಯರ್ಸ್ ಬಗ್ಗೆ ತನಿಖೆ ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳು ತಮ್ಮ ಪ್ರವಾಸದ ಕಾಲದಲ್ಲಿ ಮೊದಲೇ ತಮ್ಮ ಗುಮಾಸ್ತರನ್ನು ಕಳಿಸಿ ಒಂದು ಪಟ್ಟಿಯನ್ನು ತಯಾರು ಮಾಡಿ ದಫ್ತರಕ್ಕೆ ರುಜು ಹಾಕಿ ಬರುವುದು ಪದ್ಧತಿ. ಆದರೆ ಮಂತ್ರಿಗಳಾದವರು ತಾಲ್ಲೂಕು ಆಫೀಸುಗಳಲ್ಲಿ ಚೆಕ್ ಮಾಡುವು ದಾದರೆ ಅದರಿಂದ ಒಳ್ಳೆಯ ಪರಿಣಾಮವಾಗುತ್ತದೆ. ಇದೇ ರೀತಿ ಎಲ್ಲ ಮಂತ್ರಿಗಳೂ ತಮ್ಮ ಪ್ರವಾಸ ಕಾಲದಲ್ಲಿ ಮಾಡುವುದು ಸೂಕ್ತವೆಂದು ಹೇಳುತ್ತೇನೆ.

ನಾನು ಮೊದಲೇ ತಿಳಿಸಿದ ಹಾಗೆ ಖಾಯಂ ಪರಿಹಾರ ಮಂಡಲಿಯನ್ನು ನೇಮಕ ಮಾಡಿ ಶಾಶ್ವತವಾದ ಪರಿಹಾರ ಕಾರ್ಯಗಳನ್ನು ರಾಜ್ಯದಲ್ಲಿ ಎಲ್ಲೆಲ್ಲಿ ಕ್ಷಾಮ ಆಗಾಗ್ಗೆ ಬರುತ್ತದೆ ಅಲ್ಲೆಲ್ಲ ತೆಗೆದುಕೊಳ್ಳಬೇಕು. ಹಣವಿಲ್ಲ ಎಂದು ಏಳು ತಾಲ್ಲೂಕುಗಳಿಗೆ ಮಾತ್ರ ಕೊಡುತ್ತೇವೆನ್ನುವುದ

(ಶ್ರೀ ಹೆಚ್. ಡಿ. ದೇವೇಗೌಡ)

ಸರಿಯಲ್ಲ. ಹಳೇ ಮೈಸೂರನ್ನು ಶಾಶ್ವತ ಪರಿಹಾರ ಕೊಡುವ ಕಾರ್ಯಕ್ರಮದಲ್ಲಿ ಸೇರಿಸಿದ್ದರೂ ಕೂಡ ಅದನ್ನು ತಪ್ಪಿಸದೆ, ಸೂಕ್ತಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವ ನಂಬಿಕೆ ನನಗೆ ಇದೆ. ತಮ್ಮ ಕಾಲದಲ್ಲಿ ಆದರೂ ಇದನ್ನೆಲ್ಲ ಮಾಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಆರ್. ಬದರೀ ನಾರಾಯಣ್ (ಶಿವಮೊಗ್ಗ).--ಸನ್ಮಾನ್ಯ ಅಧ್ಯಕ್ಷಿಣಿಯವರೇ, 1968-69ಕ್ಕೆ ಸಂಬಂಧಪಟ್ಟ ಬೇಡಿಕೆಗಳನ್ನು ಮಾನ್ಯ ಕಂದಾಯ ಮತ್ತು ಅರಣ್ಯ ಸಚಿವರು ಈ ಸಭೆಯ ಮುಂದೆ ಇಟ್ಟಿರುವುದನ್ನು ಅನುಮೋದಿಸುತ್ತ ನಾಲ್ಕು ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ.

ಅನೇಕ ಸದಸ್ಯರು ಲಂಚ ಮತ್ತು ಭ್ರಷ್ಟಾಚಾರದ ವಿಚಾರವಾಗಿ ಬಹಳವಾಗಿ ಮಾತನಾಡಿದ್ದಾರೆ. ಆದರೆ ನನಗೆ ಒಂದು ಅನ್ನಿಸುತ್ತದೆ. ಲಂಚ ಮತ್ತು ಭ್ರಷ್ಟಾಚಾರ ಅನೇಕ ಮಟ್ಟಗಳಲ್ಲಿ ಆಗುತ್ತದೆ. ಕೆಳಗಿನ ಮಟ್ಟದಲ್ಲಿ ಬಹಳ ಕೆಳಗಿನ ದರ್ಜೆ ನೌಕರರಲ್ಲಿ ಆಗ ಬಹುದು ಅಥವಾ ದೊಡ್ಡ ದರ್ಜೆಯಲ್ಲಿರುವ ನೌಕರರಲ್ಲ ಆಗಬಹುದು. ದೊಡ್ಡ ದರ್ಜೆಯ ನೌಕರರಲ್ಲಿ ಭ್ರಷ್ಟಾಚಾರ ಮತ್ತು ಲಂಚ ಇರುವುದಾದರೆ ಅದು ಅಕ್ಷಮ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಕೆಳಗಿನ ನೌಕರರಲ್ಲಿ ಕಡಮೆ ಸಂಬಳ ಬರುವ ನೌಕರರಲ್ಲಿ ಏನಾದರೂ ಲಂಚ ತೆಗೆದುಕೊಳ್ಳುವುದು ಇದೆ ಎನ್ನುವುದು ಹೆಚ್ಚಾಗಿ ಕಂಡು ಬಂದರೆ ಅದಕ್ಕೆ ಏನು ಕಾರಣ ಎನ್ನುವುದನ್ನು, ಅದಕ್ಕೆ ಮೂಲಭೂತವಾದ ಕಾರಣ ವೇನು ಎನ್ನುವುದನ್ನು ನಾವು ಪರಿಶೀಲನೆ ಮಾಡಬೇಕಾದ್ದು ಬಹಳ ಅವಶ್ಯಕ. ಬಹುಶಃ ಅವರಿಗೆ ಸಂಸಾರವನ್ನು ಸಾಗಿಸುವುದಕ್ಕೆ ಸಾಕಾದಷ್ಟು ಹಣವಿಲ್ಲದೆ ಇರುವ ಕಾರಣದಿಂದಲೋ ಅಥವಾ ಅವರ ಬಡತನದ ಕಾರಣದಿಂದಲೋ ಆ ರೀತಿ ಮಾಡುತ್ತಿರಬಹುದು. ಆದುದರಿಂದ ಈ ಸಮಸ್ಯೆಯನ್ನು ಹೇಗೆ ನಿವಾರಣೆಮಾಡಬೇಕು, ಅವರಿಗೆ ಸಾಕಾದಷ್ಟು ಸಂಬಳವನ್ನು ಕೊಡಬೇಕೇ, ಹೇಗೆ ಮಾಡಬೇಕು ಎನ್ನುವ ಪ್ರಶ್ನೆ ಬರುತ್ತದೆ. ಹಾಗೆ ಬಂದಾಗ ಎಲ್ಲರಿಗೂ ಸಂಬಳವನ್ನು ಜಾಸ್ತಿ ಮಾಡುತ್ತ ಹೋದರೆ ಹಣವನ್ನು ಎಲ್ಲಿಂದ ತರುವುದು ಎನ್ನುವ ಪ್ರಶ್ನೆಯೂ ಬರುತ್ತದೆ. ಅದಕ್ಕೆ ನಾನು ಒಂದು ಸಲಹೆಯನ್ನು ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇನೆ. ನಮ್ಮ ಸರ್ಕಾರದ ಬೊಕ್ಕಸ ಬಹಳ ಹೆಚ್ಚಿನ ಪ್ರಮಾಣದಲ್ಲಿ ಸಂಬಳವನ್ನು ಕೊಡುತ್ತಿದೆ ಎನ್ನುವುದನ್ನು ನೋಡುತ್ತಿದ್ದೇವೆ. ಅದಕ್ಕೆ ಬಹುಶಃ ಎಂಟು ಗಂಟೆಗಳ ಕಾಲ ಅಧಿಕಾರಿಗಳು ಮತ್ತು ಕೆಳಗಿನ ನೌಕರರು ನಿಸ್ಪೃಹತೆಯಿಂದ ದುಡಿದರೆ ಅವರಿಗೆ ಹೆಚ್ಚು ಸಂಬಳವನ್ನು ಕೊಡಬಹುದು ಎಂದು ನನಗನ್ನಿಸುತ್ತದೆ. 8 ಗಂಟೆಗಳ ಕಾಲ ಕೆಲಸ ಮಾಡಬೇಕಾಗಿದ್ದರೂ ನಾಲ್ಕು ಗಂಟೆ ಕೂಡ ಕೆಲಸ ಮಾಡುವುದಿಲ್ಲ ಎನ್ನುವುದನ್ನು ನಾವು ನೋಡುತ್ತಿದ್ದೇವೆ. ಎಷ್ಟೋ ಸಂದರ್ಭಗಳಲ್ಲಿ ಆಫೀಸುಗಳಿಗೆ ಹೋಗಿ ನೋಡಿದರೆ ಕಾಫಿಗೆ ಹೋಗಿದ್ದಾರೆ, ತಿಂಡಿಗೆ ಹೋಗಿದಾರೆ, ಊಟಕ್ಕೆ ಹೋಗಿದ್ದಾರೆ, ರಜ ಹಾಕಿದ್ದಾರೆ ಎನ್ನುವ ಜವಾಬು ಸಿಕ್ಕುತ್ತದೆ. ಸರ್ಕಾರಿ ನೌಕರರು ಕೆಲಸ ಮಾಡುವಾಗ ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಸರ್ವ ಶಕ್ತಿಯನ್ನೂ ಉಪಯೋಗಿಸಿ ಕೆಲಸ ಮಾಡುವುದೂ ಇಲ್ಲ. ಇದರಿಂದ ಏನಾಗುತ್ತದೆ ಎಂದರೆ ಅನೇಕ ಫೈಲುಗಳು ಇತ್ಯರ್ಥವಾಗದೆ ಹಾಗೆಯೇ ಉಳಿದುಕೊಂಡಿರುವುದರಿಂದ ಜನಗಳಿಗೆ ಬೇಕಾದ ಸೌಲಭ್ಯಗಳು ದೊರೆಯದೆ ಇರುವುದೂ, ಫೈಲುಗಳು ಬಾಕಿನಿಂತು ಕೂಡಿಕೊಳ್ಳುವುದೂ ಕಂಡು ಬರುತ್ತಿದೆ. ಇದರಿಂದ ಜನಗಳಿಗೆ ಬಹಳ ತೊಂದರೆಯಾಗುತ್ತಿದೆ. ಇದರ ಜೊತೆಗೆ ಲಂಚ, ಭ್ರಷ್ಟಾಚಾರ ಮತ್ತು ಕೆಲಸ ಆಗುವುದಿಲ್ಲ ಎನ್ನುವ ಕೂಗು ಕೇಳಿಬರುತ್ತಿದೆ. ಆದ್ದರಿಂದ ಅಧಿಕಾರಿಗಳ ಸಂಖ್ಯೆಯನ್ನು ಕಡಿಮೆ ಮಾಡಿ, ಇರತಕ್ಕ ಅಧಿಕಾರಿಗಳಿಗೆ ಹೆಚ್ಚು ಸಂಬಳಗಳನ್ನು ಕೊಟ್ಟು ಅವರಿಂದ ಹೆಚ್ಚಿನ ಪ್ರಮಾಣದಲ್ಲಿ ಕೆಲಸವನ್ನು ತೆಗೆದುಕೊಂಡರೆ, ಅದಕ್ಕೆ ಸರಿಯಾದ ಮೇಲ್ವಿಚಾರಣೆ ವ್ಯವಸ್ಥೆ ಮಾಡಿದರೆ ಬಹುಶಃ ಲಂಚ ಮತ್ತು ಭ್ರಷ್ಟಾಚಾರ ಇವುಗಳನ್ನು ಪರಿಹರಿಸಬಹುದು ಎಂದು ನನಗನ್ನಿಸುತ್ತದೆ. ಆಗ ನಮ್ಮ ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಖರ್ಚು ಎನಿದೆ ಅದನ್ನೂ ತಪ್ಪಿಸಬಹುದು. ಈ ಸಂದರ್ಭದಲ್ಲಿ ನಮ್ಮ ಊರಿಗೆ ಸಂಬಂಧಪಟ್ಟಂತೆ ಒಂದು ಮಾತನ್ನು ಹೇಳಬೇಕಾಗಿದೆ. ಅಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನವರು ಒಬ್ಬರೇ ಅಧಿಕಾರಿ ಇರುವ ಬ್ಯಾಂಕನ್ನು ತೆರೆದಿದ್ದಾರೆ. ಆಳು ಕೂಡ ಅಲ್ಲಿಲ್ಲ, ಅಲ್ಲಿನ ಮ್ಯಾನೇಜರಿಗೆ ಕುಳಿತುಕೊಳ್ಳುವುದಕ್ಕೆ ಚಾಪೆ ಹಾಕಿದೆ, ಒಂದು ಗದ್ದುಗೆ ಇದೆ. ಆತ ಯೂರೋಪಿಯನ್ ಸ್ಟೈಲಿನಲ್ಲಿ ಬಟ್ಟೆ ಹಾಕಿಕೊಳ್ಳುವುದಿಲ್ಲ, ರೈತನ ಹಾಗೆ ಬಟ್ಟೆ ಹಾಕಿಕೊಂಡು ರೈತರು ಬಂದರೆ ಅವರನ್ನು ಪಕ್ಕದಲ್ಲಿ ಕೂಡಿಸಿಕೊಂಡು ಮಳೆ ಆಯಿತೇ, ಏಕೆ ಬಂದಿರಿ ನಿಮಗೆಷ್ಟು ವರಮಾನವಿದೆ ಅದರಲ್ಲಿ ಸ್ವಲ್ಪ ಉಳಿತಾಯಮಾಡಿ ನಮ್ಮ ಬ್ಯಾಂಕಿನಲ್ಲಿಡಿ. ಸಾಲ ಬೇಕಾದರೆ ಕೊಡುತ್ತೇವೆ ಎಂದು ಹೇಳುತ್ತಾನೆ. ರೈತಬಾಂಧವರು ಬ್ಯಾಂಕಿಗೆ ಬಂದರೆ

ಅವರನ್ನು ಸ್ನೇಹಿತರಂತೆ ಕಂಡು, ಫ್ರೆಂಡ್, ಫಿಲಾಸಫರ್ ಮತ್ತು ಗೈಡ್‌ನಂತೆ ಅವರೊಡನೆ ಕಲೆತು ಸ್ನೇಹ ಬೆಳೆಸಿ ತಾನು ಅಧಿಕಾರಿಯಲ್ಲಿ ಜನ ಸೇವಕ ಎಂಬ ಭಾವನೆ ರೈತರಲ್ಲಿ ಬರುವಂತೆ ಮಾಡಿ ಅವರಿಗೆ ಸಹಾಯಮಾಡುತ್ತಾನೆ. ಇದರಂತೆ ಈ ಪ್ರಜಾಪ್ರಭುತ್ವದಲ್ಲಿ ಮಾರ್ಪಾಡಾಗಬೇಕು. ಸರಕಾರಿ ಅಧಿಕಾರಿಗಳು ಜನಸೇವಕರು ಎಂಬ ಭಾವನೆ ಜನರಿಗೆ ಬರುವಂತೆ ದರ್ಪ ತೋರಿಸದಂತೆ, ಜನರ ಸೇವೆ ಮಾಡುವುದಕ್ಕೆ ತಾವಿರುವುದು ಎಂಬ ಮನೋಭಾವನೆ ಅಧಿಕಾರಿಗಳಲ್ಲಿ ಬರುವಂತೆ ಒಂದು ವ್ಯವಸ್ಥೆ ಮಾಡದಿದ್ದರೆ ಬಹುಶಃ ಇಷ್ಟು ಆಕ್ಷೇಪಣೆ ಅಧಿಕಾರಿಗಳ ಮೇಲೆ ಬರುತ್ತಿರಲಿಲ್ಲ, ಬರುವುದು ಕಡಮೆಯಾಗುತ್ತಿತ್ತು ಎಂದು ಸೂಚಿಸುತ್ತೇನೆ.

ಇನ್ನು ಲಂಚವಿದೆ ಎಂದು ಹೇಳುತ್ತಾರೆ. ಅಧಿಕಾರಿಗಳು ಸಣ್ಣಪುಟ್ಟವರು ಪ್ರವಾಸಮಾಡುವುದುಂಟು, ಆಗ ಪುಷ್ಕಳವಾದ ಊಟಮಾಡುತ್ತಾರೆ, ಖರ್ಚು ಬಹಳ ಮಾಡುತ್ತಾರೆ, ಅದನ್ನು ಹೇಗೆ ಸರಿದೂಗಿಸುತ್ತಾರೆ, ಯಾರು ಕೊಡುತ್ತಾರೆ ಅವರ ಸಂಬಳ ಅದಕ್ಕೆ ಸಾಕೇ ಎಂಬ ಪ್ರಶ್ನೆ ಸಾಮಾನ್ಯವಾಗಿ ಬರುವುದುಂಟು. ಬಹುಶಃ ಇಂಥ ಸಂದರ್ಭಗಳಿರುವುದರಿಂದ ಅನಿವಾರ್ಯವಾಗಿ ಲಂಚಕ್ಕೆ ಕೈ ಒಡ್ಡುತ್ತಾರೆ ಎಂಬ ಭಾವನೆಯಿದೆ. ಇದಕ್ಕೆ ಅವಕಾಶವಿರದಂತೆ ಮಾಡಬೇಕು.

ಎರಡನೆಯದಾಗಿ ಜಮೀನು ಕಂದಾಯದ ವಿಚಾರ. ಜಮೀನು ಕಂದಾಯ ಇರಬೇಕು ಎಂಬುದು ನನ್ನ ಅಭಿಪ್ರಾಯ, ಯಾವ ಒಬ್ಬ ಸಣ್ಣ ರೈತನೇ ಆಗಲಿ, ಒಂದು ಎಕರೆಯಿದ್ದರೂ ರೆವೆನ್ಯೂ ಕೊಡಬೇಕು, ಸರಕಾರ ಬೇಕಾದರೆ ಸಣ್ಣ ರೈತರಿಗೆ ಹೆಚ್ಚು ಸೌಕರ್ಯ ಕಲ್ಪಿಸಬಹುದು. ಕಂದಾಯ ವಜಾಮಾಡುವುದರಿಂದ 5 ರೂಪಾಯಿ ಉಳಿದರೆ ಅದರಿಂದ ಬೇಕಾದಷ್ಟು ರೈತನಿಗೆ ಅನುಕೂಲವಾಯಿತೆಂದು ಭಾವಿಸುವುದಕ್ಕಾಗುವುದಿಲ್ಲ. ಆದುದರಿಂದ ಜಮೀನು ಕಂದಾಯ ಕೊಡಲಿ. ರೈತನಿಗೆ ಒಂದು ರಿಕಾರ್ಡು ಬೇಕು, ಪಟ್ಟೆ ಬೇಕು. ಅನೂಚಾನವಾಗಿ ಹಿಂದಿನಿಂದ ಬಂದಿರುವ ಒಂದು ಪದ್ಧತಿ ಹೋಗಬಾರದು, ಕಂದಾಯ ಬೇಕಾದರೆ ಒಂದು ಸ್ಲ್ಯಾಬ್ ಮೇಲೆ ಹಾಕಲಿ, ದೊಡ್ಡ ಜಮೀನುದಾರರಿಗೆ ಹೆಚ್ಚು ಹಾಕಿ ಸಣ್ಣವರಿಗೆ ಕಡಮೆ ಹಾಕಲಿ. ಇದರಲ್ಲಿ ಅಭ್ಯಂತರವಿಲ್ಲ. ದೊಡ್ಡವರಿಗೆ ಕಡಮೆ ಮಾಡಬೇಕೆಂದು ಹೇಳಬಾರದು. ಈಗ ಸರ್ವೆ ಮತ್ತು ಸೆಟ್ಲ್‌ಮೆಂಟ್ ಮಾಡಿರುವುದು ಶಾಸ್ತ್ರೀಯವಾಗಿಲ್ಲ, ಯಾರಿಗೂ ಸಮರ್ಪಕವಾಗಿಲ್ಲ. ಆದುದರಿಂದ ಸರಕಾರ ಕಾನೂನು ಮೂಲಕ ಅಧಿಕಾರ ಪಡೆದು ಈಗಿರುವುದನ್ನು ಮಾರ್ಪಾಡುಮಾಡಿ ಶಾಸ್ತ್ರೀಯವಾಗಿ ನಿಗದಿಮಾಡಬೇಕು. List of cultivable lands ಇದರಲ್ಲಿ ಆಕಾರ ಕಂಡ ಜಮೀನು, ಗ್ರಾಮ ಠಾಣ, ಗೋಮಾಳ, ಫಾರೆಸ್ಟ್—ಮೇಜರ್ ಮತ್ತು ಮೈನರ್, ಇದೆಲ್ಲಾ ಸೇರಿದೆ. ರಿಲೀಸ್ ಮಾಡಿರುವ ಜಮೀನೂ ಇದೆ. ಇದನ್ನು ಪಟ್ಟಿ ಮಾಡಬೇಕು. ಶ್ರೀ ಬಂಗಾರಪ್ಪನವರು ಹೇಳಿದಹಾಗೆ ಮಾಡಿ ಭೂಹೀನರಿಗೆ ಕ್ಷಿಪ್ರವಾಗಿ ಜಮೀನು ಕೊಡುವಂತೆ ಮಾಡಿದರೆ ಬಹಳ ಅನುಕೂಲ, ಆದರೆ ಕೆಲವು unauthorised occupations ಇವೆ.

ಕೇಳುವವರಿಗೆ ಜಮೀನು ಕೊಡುವುದಿಲ್ಲ, ಬಲಾತ್ಕಾರವಾಗಿ ತೆಗೆದುಕೊಂಡು ವ್ಯವಸಾಯ ಮಾಡುತ್ತಿರುವವರಿಗೆ ಸಿಕ್ಕುತ್ತದೆ. ಇದಕ್ಕೆ ಅವಕಾಶವಿರಬಾರದು. ಆದುದರಿಂದ ದಯೆಯಿಟ್ಟು ಕ್ಷಿಪ್ರವಾಗಿ ನಾನು ಹೇಳಿದಂತೆ ಜಮೀನಿನ ಒಂದು ಪಟ್ಟಿ ಮಾಡಿ ಇಷ್ಟು ಜಮೀನಿದೆ, ಇಷ್ಟು ಕೊಡಬಹುದು ಅಥವಾ ಕೊಡುವುದಕ್ಕೆ ಜಮೀನಿಲ್ಲ ಎಂದು ಹೇಳಬೇಕು. ಜಮೀನನ್ನು ಹಂಚಬೇಕೆಂದು ಹೇಳುತ್ತಾರೆ. ದೇಶದಲ್ಲಿರುವ ಎಲ್ಲಾ ಜಮೀನನ್ನೂ ಹಂಚಿದರೆ ಅಗ್ರಿಕಲ್ಚರಲ್ ಲೇಬರರ್ಸ್ ಇರುತ್ತಾರೆ ಅವರಿಗೆ ಎಲ್ಲಿಂದ ಜಮೀನು ತರುವುದು ? ಸರ್ಪ್ಲಸ್ ಜಮೀನಿದ್ದರೆ ಉಳಿಯುತ್ತದೆ. ಆದುದರಿಂದ ಪ್ಲಾಂಟೇಷನ್‌ಗಳಲ್ಲಿ ಮಾಡಿರುವ ಹಾಗೆ ಲೇಬರರ್ಸ್‌ಗೆ ವಸತಿ ಸೌಕರ್ಯ ಮುಂತಾದುವನ್ನೊದಗಿಸಲು ಒಂದು ಕಾನೂನನ್ನು ಮಾಡಿ ಬೇಕಾದ ಸೌಕರ್ಯವನ್ನೊದಗಿಸಬೇಕಾದ್ದು ಬಹಳ ಅವಶ್ಯವಾಗಿದೆ.

ಆಮೇಲೆ ಲ್ಯಾಂಡ್ ರೆವೆನ್ಯೂ ಆಕ್ಟ್ ಬಹಳ ನಿಧಾನವಾಗಿ ಕೆಲಸಮಾಡುತ್ತಿದೆ. ಇದನ್ನು ಪರಿಶೀಲಿಸಬೇಕು. ಮೊದಲು ಸರ್ಪ್ಲಸ್ ಲ್ಯಾಂಡನ್ನು ರಿಲೀಸ್ ಮಾಡಿ ಜಮೀನಿಲ್ಲದಿರುವವರಿಗೆ ಹಂಚಬೇಕು. ಈಗಿರುವ ಪದ್ಧತಿ ಪ್ರಕಾರ ಈ ಕೆಲಸ ಮಾಡಲು 8–10 ವರ್ಷವಾಗಬಹುದು. ಅಭಾವವಿರುವ ಕಡೆ ರೆಮಿಷನ್ ಮಾಡುವ ಪದ್ಧತಿ ಇದೆ. ಆದರೆ 3 ವರ್ಷ ಒಂದೇ ಸಮನಾಗಿ ಅಭಾವ ಪರಿಸ್ಥಿತಿ ಉಂಟಾದರೆ ಮಾತ್ರ ಜಮೀನು ಕಂದಾಯ ರಿಮಿಷನ್ ಮಾಡುತ್ತಾರೆ. ಹಾಗೆ ಮಾಡದೆ ಒಂದೇ ವರ್ಷ ಅಭಾವ ಪರಿಸ್ಥಿತಿ ತಲೆದೋರಿದರೂ ಕೂಡ ರಿಮಿಷನ್ ಕೊಡಬೇಕು. 'ಕ್ರಾನಿಕಲಿ ಡ್ರಾಫ್ಟ್ ಅಫೆಕ್ಟೆಡ್ ಏರಿಯಾ'ಕ್ಕೆ ಅನುಕೂಲವಾಗುವಂತೆ ಒಂದು 'ಮಾಸ್ಟರ್ ಪ್ಲಾನ್' ಮಾಡಬೇಕು, ಬೋರ್ ವೆಲ್ಸ್, ಟ್ಯಾಂಕ್ಸ್ ಮುಂತಾದುವುಗಳ ಕೆಲಸವನ್ನು ಕೈಕೊಳ್ಳಬೇಕು.

(ಶ್ರೀ ಎ. ಆರ್. ಬದರೀನಾರಾಯಣ್)

Accidental fires. ಹೆಂಚಿನ ಮನೆಗಳಿರುವ ಕಡೆ ಪರವಾಗಿಲ್ಲ, ಮಲೆನಾಡಿನಲ್ಲಿ ಹುಲ್ಲು ಜೋಪಡಿಗಳು ಬಹಳವಾಗಿವೆ. ಆದುದರಿಂದ ಹೆಂಚಿನ ಮನೆಗಳನ್ನು ಅಲ್ಲಿ ಕಟ್ಟಿಕೊಳ್ಳಲು ಅವಕಾಶ ಮಾಡಿ ಹುಲ್ಲು ಮನೆಗಳನ್ನು ತೆಗೆಸಬೇಕು.

ಈಗ ಪೋಲೀಸ್ ಪಟೇಲರಿದ್ದಾರೆ. ಅವರನ್ನು ನೇಮಕಮಾಡುವಾಗ ಸರಿಯಾದವರನ್ನು, ಯೋಗ್ಯರಾದವರನ್ನು ಆರಿಸಬೇಕು. ಸಮಾಜಕಂಟಕ ಶಕ್ತಿಗಳು, ವ್ಯಕ್ತಿಗಳು ಈಗ ಹೆಚ್ಚಾಗಿ ಜನರಿಗೆ ಕಿರುಕುಳ ಕೊಡುತ್ತಿದ್ದಾರೆ, ಅದಕ್ಕೆ ಅವಕಾಶ ಇರಬಾರದು, ಒಳ್ಳೆಯವರನ್ನು ನೇಮಕಮಾಡಬೇಕು.

ಇನ್ನು ಅರಣ್ಯಗಳ ವಿಷಯ. ಮೂರನೆಯ ಒಂದು ಭಾಗ ಅರಣ್ಯ ದೇಶದಲ್ಲಿರಬೇಕು. ಈಗ ಇಂಡಿಯಾ ದೇಶದಲ್ಲಿ ಸೇಕಡ 22 ರಷ್ಟು ಮತ್ತು ಮೈಸೂರು ದೇಶದಲ್ಲಿ ಸೇಕಡ 18 ರಷ್ಟಿದೆ. ಇದರಲ್ಲಿ ಸ್ಟೇಟ್ ಫಾರೆಸ್ಟ್, ಮೈನರ್ ಫಾರೆಸ್ಟ್, ಡಿಸ್ಟ್ರಿಕ್ಟ್ ಫಾರೆಸ್ಟ್, ವಿಲೇಜ್ ಫಾರೆಸ್ಟ್ ಇದೆಲ್ಲಾ ಸೇರಿದೆ. ಆದರೆ ಈಗಿರುವ ಕಾಡು ಒಳ್ಳೆಯ ಮಟ್ಟದಲ್ಲಿಲ್ಲ, ಹಾಳಾಗುತ್ತಿದೆ. ಇದಕ್ಕೆ ಕಾರಣ ಅನೇಕ ಇರಬಹುದು. ತಕ್ಷಣ ಕಾಡನ್ನು ಅಭಿವೃದ್ಧಿಮಾಡಲು ತಕ್ಕ ಕ್ರಮ ಕೈಕೊಳ್ಳಬೇಕು. ಅರಣ್ಯದ ಜಮೀನನ್ನು ರಿಲೀಸ್ ಮಾಡುವುದನ್ನು ಅಥವಾ ಬೇರೆ ಅವಶ್ಯಕತೆಗಳಿಗಾಗಿ ಕೊಡುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಅರಣ್ಯ ನಾಶವಾಗಿ ಮಳೆಯೇ ಬರುವುದಿಲ್ಲ. ಕಳೆದ 10 ವರ್ಷದ ಅಂಕಿಅಂಶ ನೋಡಬಹುದು, ಎಲ್ಲೂ ಕಾಡೇ ಇಲ್ಲದೆ ಮಳೆ ಕಡಿಮೆಯಾಗುತ್ತಿದೆ. ದೊಡ್ಡ ನೀರಾವರಿ ಯೋಜನೆ ಮಾಡಿದರೂ ಕೂಡ ಮಳೆ ಬರದಿದ್ದರೆ ಪ್ರಯೋಜನವಾಗುವುದಿಲ್ಲ. ಆದುದರಿಂದ ಕಾಡು ಹೆಚ್ಚಾಗಿ ಹಾಳಾಗದಹಾಗೆ ನೋಡಿಕೊಳ್ಳಬೇಕು. ಫಾರೆಸ್ಟ್ ಭೂಮಿಯನ್ನು ರಿಲೀಸ್ ಮಾಡುವುದನ್ನು ಕಡ್ಡಾಯ ಮಾಡಬಾರದು. ಈಗ ದೊಡ್ಡ ದೊಡ್ಡ ಯೋಜನೆಗಳಾಗುತ್ತಿವೆ, ಟ್ರಾನ್ಸ್‌ಮಿಷನ್ ಲೈನು ಹಾಕುತ್ತಿದ್ದಾರೆ, ರೀಹ್ಯಾಬಿಲಿಟೇಷನ್ ನಡೆಯುತ್ತಿದೆ. ಇದರ ಜೊತೆಗೆ ರಿಲೀಸ್‌ಮಾಡಿದರೆ ಬಹಳ ಕಷ್ಟವಾಗುವುದು. ಶಿವಮೊಗ್ಗಾ ಜಿಲ್ಲೆಯಲ್ಲಿ 32 ಸಾವಿರ ಎಕರೆ ಸಬ್‌ಮರ್ಷನ್ ಆಗುವುದಿದೆ, ಲ್ಯಾಂಡ್ ಗ್ರ್ಯಾಂಟ್ 9,300 ಎಕರೆ ಕೊಟ್ಟಿದೆ, ಉತ್ಪತ್ತಿ ಅರಣ್ಯ ಇಲಾಖೆಯಲ್ಲಿ 50 ವರ್ಷಗಳ ಹಿಂದೆ ಇದ್ದಷ್ಟೇ ಇದೆ. ಆದುದರಿಂದ ಬೆಲೆಬಾಳುವ ನಾಟಾ ಕಾಪಾಡಬೇಕು, ಅದನ್ನು ಈಗಿರುವುದರ ಎರಡರಷ್ಟಾದರೂ ಮಾಡಬೇಕು ಮತ್ತು ಸ್ಕ್ವಾಡ್ ಜಾಸ್ತಿ ಮಾಡಬೇಕು. ಫಾರೆಸ್ಟ್ ಗಾರ್ಡ್, ಫಾರೆಸ್ಟರ್ ಮುಂತಾದವರ ಕೈಕೆಳಗೆ ಲಕ್ಷಾಂತರ ರೂಪಾಯಿಗಳ ಆಸ್ತಿ ಇದೆ. ರೇಂಜು ಆಫೀಸರಿಗಾದರೂ ತಕ್ಷಣ ತಪ್ಪಿತಸ್ತರನ್ನು ಶಿಕ್ಷೆ ಮಾಡುವುದಕ್ಕೆ ಪೋಲೀಸು ಇಲಾಖೆಯಲ್ಲಿರುವ ಹಾಗೆ ಅಧಿಕಾರ ಕೊಡಬೇಕು. ಐದಾರು ಮೈಲಿಗಳವರೆಗೆ ಒಬ್ಬ ಫಾರೆಸ್ಟ್ ಗಾರ್ಡ್ ನೋಡಿಕೊಳ್ಳುವಂತಾದರೂ ವ್ಯವಸ್ಥೆ ಮಾಡಬೇಕು, ಇಲ್ಲದಿದ್ದರೆ ನಾಟಾ ಕಳವು ಹೆಚ್ಚುತ್ತದೆ.

ಶ್ರೀ ಬಿ. ರಾಚಯ್ಯ.—ಹೈಕೋರ್ಟ್ ಫಾರೆಸ್ಟ್ ಗಾರ್ಡ್‌ನ್ನು ಹಾಕಬಾರದೆಂದು ತಿಳಿಸಿದೆ, ಆದುದರಿಂದ ಹಾಕುವುದಕ್ಕಾಗಿಲ್ಲ.

4-00 P.M.

ಶ್ರೀ ಎ. ಆರ್. ಬದರೀನಾರಾಯಣ್.—ಫ್ರೀ ಲೈಸೆನ್ಸ್ ಆಫ್ ಡೆಡ್ ಫ್ಯೂಯಲ್. ಪಟ್ಟಣದಿಂದ 6 ಮೈಲಿ ದೂರದಲ್ಲಿ ಇಷ್ಟು ಪ್ರದೇಶ ಅಂತ ಇರುತ್ತದೆ, ಬಹಳ ದೂರ ಹೋಗಿ ತರುವುದಕ್ಕಾಗುವುದಿಲ್ಲ. ಈ ಹಸಿ ಸೌದೆಯನ್ನು ಕಡಿದು ತರುತ್ತಾ ಇರುವುದರಿಂದ ಕಾಡು ಹೋಗುತ್ತಾ ಇದೆ. ಇದರಿಂದ ಸ್ಮಗ್ಲರ್ಸ್ ಸೌದೆಯನ್ನು ತೆಗೆದುಕೊಂಡು ಹೋಗಿ ಪಟ್ಟಣಗಳಲ್ಲಿ ಮಾರುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಇದನ್ನು ಸ್ಟ್ರಿಕ್ಟ್ ಆಗಿ ಕೂಪ್‌ಗಳನ್ನಾಗಿ ಮಾಡಿ ಅಲ್ಲಿಂದಲೇ ತೆಗೆದುಕೊಂಡು ಬರುವ ಹಾಗೆ ವ್ಯವಸ್ಥೆ ಮಾಡಬೇಕು.

ಅರಣ್ಯದಲ್ಲಿ ಒಬ್ಬ ಯಜಮಾನ ಇರಬೇಕು. ಎಲ್ಲರೂ ಕೂಡ ಯಜಮಾನರು ಅಂತ ಅರಣ್ಯದಲ್ಲಿ ಪ್ರವೇಶ ಮಾಡಿದರೆ ಬಹಳ ನಷ್ಟವಾಗುತ್ತದೆ. ಫ್ಯೂಯಲ್ ಲೋಡ್ಸ್ ತರಲು ಫಾರೆಸ್ಟ್ ರೇಂಜರು ಲೈಸೆನ್ಸು ಕೊಡುತ್ತಾರೆ, ಇದು ಸರಿಯಲ್ಲ. ಕೂಪುಗಳನ್ನು ಮಾಡದಿದ್ದರೆ ಗಿಡಗಳು ಉಳಿಯುವುದಿಲ್ಲ. ಗ್ರೇಜಿಂಗ್ ಫೀ 25 ನಯಾ ಪೈಸೆ ಹಾಕುತ್ತಾ ಇದ್ದರು, ಈಗ ಅದು ಇಲ್ಲ. ಇದರಿಂದ ಪ್ಲಾಂಟೇಷನ್ ಎಲ್ಲಾ ಹಾಳಾಗಿ ಹೋಗುತ್ತಿದೆ. ಆದ್ದರಿಂದ ಪುನಃ ಗ್ರೇಜಿಂಗ್ ಫೀಜನ್ನು ಇಂಟ್ರೊಡ್ಯೂಸ್ ಮಾಡಬೇಕು. ಆ ರೀತಿ ಮಾಡಿ ಅದರಿಂದ ಬರತಕ್ಕ ವರಮಾನವನ್ನು ಹುಲ್ಲು ಬೆಳೆಸುವುದಕ್ಕೆ ಉಪಯೋಗ ಮಾಡಬಹುದು ಎಂದು ಹೇಳುತ್ತೇನೆ. ಎಂ. ಆರ್. ಪಿ. ಬಹಳ ದುರುಪಯೋಗ

ವಾಗುತ್ತಾ ಇದೆ. ಯಾರಿಗಾದರೂ ಹಕ್ಕು ಇದ್ದರೆ ಅದು ಡಿಪೋದಲ್ಲಿ ಸಿಕ್ಕಬೇಕೇ ಹೊರತು, ಕಾಡಿನಲ್ಲಿ ಕಿತ್ತುಕೊಂಡು ಬರುವ ಹಾಗೆ ಅಪ್ಪಣೆ ಮಾಡಬಾರದು ಎಂದು ಪ್ರಾರ್ಥನೆ ಮಾಡುತ್ತೇನೆ. ಇಷ್ಟು ಹೇಳಿ ಮಾನ್ಯ ಅರಣ್ಯ ಮಂತ್ರಿಗಳು ಮಳೆ ಹೆಚ್ಚಾಗಿ ಬರಲು ಅವಕಾಶವಾಗುವಂತೆ ಅರಣ್ಯದಲ್ಲಿ ಗಿಡಗಳನ್ನು ಬೆಳೆಸಿ ಒಂದು ಒಳ್ಳೆಯ ಕೀರ್ತಿಯನ್ನು ಪಡೆಯಬೇಕೆಂದು ವಿನಂತಿ ಮಾಡಿಕೊಂಡು ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ಮಾನ್ಯ ಸಭಾಪತಿಗಳವರೇ, ಈಗ ಸಾಧ್ಯವಾದಷ್ಟೂ ತಾಲ್ಲೂಕು ಮಟ್ಟದಲ್ಲಿ ಕನ್ನಡವನ್ನು ಅಧಿಕಾರಿ ಭಾಷೆಯನ್ನಾಗಿ ಮಾಡುವುದು, ಸಕಾಲದಲ್ಲಿ ಸಾಮಾನ್ಯ ರೈತರಿಗೆ ಸಾಲವನ್ನು ದೊರಕಿಸಿ ಕೊಡುವುದು ಮತ್ತು ಎನ್. ಜಿ. ಓ. ಗಳಿಗೆ ತುಟ್ಟಿಭತ್ಯವನ್ನು ಹೆಚ್ಚು ಮಾಡುವುದು ಹಾಗೂ ಪೆನ್‌ಷನ್‌ದಾರರಿಗೂ ಕೂಡ ಸಹಾನುಭೂತಿಯಿಂದ ತುಟ್ಟಿಭತ್ಯವನ್ನು ಹೆಚ್ಚು ಮಾಡಿರುವುದು ಮತ್ತು ಈ ಸಾರಿ ಹೊಸದಾಗಿ ಕನ್ನಡದಲ್ಲಿ ಬಡ್ಜೆಟನ್ನು ಪ್ರಿಂಟ್ ಮಾಡಿರುವುದು ಹಾಗೂ ಕನ್ನಡ ಸ್ಟೆನೋ ಟೈಪಿಸ್ಟುಗಳಿಗೆ ಹೆಚ್ಚಿನ ಪ್ರೋತ್ಸಾಹ ಧನ ಕೊಟ್ಟಿರುವುದು ಇಷ್ಟನ್ನೂ ಮಾಡಿದಂತಹ ಸರ್ಕಾರಕ್ಕೆ ಪ್ರಥಮವಾಗಿ ನನ್ನ ಅಭಿನಂದನೆಯನ್ನು ಸಲ್ಲಿಸಿ ರೆವಿನ್ಯೂ ಡಿಮ್ಯಾಂಡಿನ ಮೇಲೆ ಒಂದೆರಡು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಚುನಾವಣೆಗಿಂತ ಮುನ್ನ ಈಗಿರತಕ್ಕ ರೆವಿನ್ಯೂ ಪದ್ಧತಿ ಏನಿದೆ ಅದನ್ನು ತೆಗೆದು ಬೇರೆ ಒಂದು ಪದ್ಧತಿಯನ್ನು ಮಾಡುತ್ತೇವೆ ಎಂಬ ಮಾತನ್ನು ಸರ್ಕಾರದವತಿಯಿಂದ ಹೇಳಲಾಯಿತು. ಚುನಾವಣೆ ಆದನಂತರ ಈ ಒಂದು ಕಂದಾಯದ ಪದ್ಧತಿ ಏನಿದೆ ಇದನ್ನು ತೆಗೆದು ಹಾಕಿದ್ದೇ ಆದರೆ ದೇಶದಲ್ಲಿ ಅಲ್ಲೋಲ ಕಲ್ಲೋಲ ಆಗುತ್ತದೆ, ರೈತರಿಗೆ ತುಂಬಾ ಅನ್ಯಾಯವಾಗುತ್ತದೆ, ಗೊಂದಲವಾಗುತ್ತದೆ ಎಂಬ ಮಾತಿಗೆ ಪ್ರತಿಯಾಗಿ ಸರ್ಕಾರದ ವತಿಯಿಂದ ಬರುತ್ತಾ ಇದೆ. ಈ ವಿಷಯದಲ್ಲಿ ಹಲವಾರು ದಿವಸಗಳಿಂದ ಗೊಂದಲ ಉಂಟಾಗಿದೆ. ಈಗಿರತಕ್ಕ ಕಂದಾಯವನ್ನು ತೆಗೆದುಬಿಟ್ಟರೆ ಆಗತಕ್ಕ ತೊಂದರೆ ಯಾರಿಗೆ ಎಂಬುದನ್ನು ನಾವು ಯೋಚನೆ ಮಾಡಬಹುದು. ಇದನ್ನು ನಾನು ಬಹಳ ಸಂಕಟದಿಂದ ಹೇಳಬೇಕಾಗಿದೆ. ಏಕೆಂದರೆ, 1956 ನೇ ಇಸವಿಯಿಂದ ನಮ್ಮ ದೇಶದ ನಮ್ಮ ರಾಜ್ಯದ ಸರ್ಕಾರ ಯಾವ ಸಮಾಜವಾದದ ಧೋರಣೆಯನ್ನು ಅನುಸರಿಸುತ್ತಾ ಬಂದಿದೆ ಆ ಧೋರಣೆಯಿಂದ ಯಾರಿಗೆ ಸಹಾಯವಾಗಬೇಕೋ ಅಂತಹವರಿಗೆ ಸಹಾಯವಾಗತಕ್ಕ ನೀತಿಯನ್ನು ಅನುಸರಿಸಿದೆ ಈ ಸರ್ಕಾರ ಹಲವಾರು ಕಾರಣಗಳನ್ನು ಮುಂದೆಡಿದ್ದಿ ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳುತ್ತಾ ಇದ್ದಾರೆ. ಅದೇ ರೀತಿ ಇದನ್ನೂ ಮಾಡುತ್ತಾ ಇದ್ದಾರೆಯಲ್ಲಾ ಎಂದು ಹೇಳಿ ಯೋಚನೆ ಮಾಡುತ್ತಾ ಇರಬೇಕಾದರೆ ಇದಕ್ಕೆ ನಿಜವಾದ ಕಾರಣವೇನೆಂಬುದು ನನ್ನ ಗಮನಕ್ಕೆ ಬಂತು. ಇದಕ್ಕೆ ಕಾರಣ ಹೀಗೆ ಇದೆ. ಅದೇನೆಂದರೆ, ಯಾವ ದಲಿತ ವರ್ಗದ ಉದ್ಧಾರಕ್ಕಾಗಿ ಯಾರ ಅನುಕೂಲತೆಗಾಗಿ ಕಳೆದ 60 ವರ್ಷದಿಂದ ಯಾವ ರೈತ ದೇಶದ ಬೆನ್ನುಮೂಳೆ ಅಂತ ಭಾವನೆ ಮಾಡಿಕೊಂಡಿದ್ದೇವೋ ಆತನ ವಿರುದ್ಧವಾಗಿ ನಮ್ಮ ಸರ್ಕಾರ ಒಂದು ನೀತಿಯನ್ನು ಅನುಸರಿಸಿಕೊಂಡು ಬಂದು ವರ್ಗದಿಂದ ಕೂಡಿದ ಸಮಾಜವನ್ನು ಕ್ಲಾಸ್ ಕ್ಯಾರಕ್ಟರ್‌ನ್ನು ಮುಂದುವರಿಸಿಕೊಂಡು ಬಂದಿದೆ. ವಾಸ್ತವವಾಗಿ ಯಾವ ರೀತಿಯಲ್ಲಿ ಸರ್ಕಾರ ಕೆಲಸ ಮಾಡಿಕೊಂಡು ಬಂದಿದೆ ಅನ್ನುವುದಕ್ಕೆ ಇದು ನನ್ನ ಅಂಕಿ ಅಂಶ ಅಲ್ಲ ಸರ್ಕಾರದ ಅಂಕಿ ಅಂಶದಿಂದಲೇ ಸಿದ್ಧಪಡಿಸಲಿಕ್ಕೆ ಪ್ರಯತ್ನ ಪಡುತ್ತೇನೆ. ಈಗ ಒಂದು ಗುಂಟೆಯಿಂದ ಹಿಡಿದು ಎರಡೂವರೆ ಎಕರೆಯವರೆಗೂ ಪಡೆದಿರುವ ರೈತರು ನಮ್ಮ ದೇಶದಲ್ಲಿ ಎಷ್ಟು ಜನ ಇದ್ದಾರೆ ಎಂದರೆ ಒಂದು ಕೋಟಿ 26 ಲಕ್ಷದ 76 ಸಾವಿರ ಜನ ಇದ್ದಾರೆ. 2 ಲಕ್ಷದ 25 ಸಾವಿರ ಜನಕ್ಕೆ ಕೇವಲ 4.7 ಎಕರೆ ಭೂಮಿ ಇದೆ. 10 ಎಕರೆಯಿಂದ ಹಿಡಿದು 50 ಎಕರೆಯವರೆಗೆ ಮತ್ತು ಅದಕ್ಕಿಂತ ಮೇಲ್‌ಪಟ್ಟು ಇರುವುದು 19.5 ಒಟ್ಟು ಹಿಡುವಳಿ ಭೂಮಿ ಎಷ್ಟಿದೆ ಎಂದರೆ 55.4 ಇದೆ. ಅಂದರೆ ನಮ್ಮ ಸರ್ಕಾರದ ಈ ಧೋರಣೆಯಿಂದ ಯಾರನ್ನು ಸಾಕಲಿಕ್ಕೆ ಹೊರಟಿದೆ ಎಂದರೆ ಇಂಗ್ಲೀಷರನ್ನು ಓಡಿಸಿ ಮೂರು ಶತಮಾನದಿಂದ ಕಳೆದುಹೋಗಿದ್ದ ಸ್ವಾತಂತ್ರ್ಯವನ್ನು ಗಳಿಸಿ ಯಾರನ್ನು ಒಂದು ಮಿತಿಯಲ್ಲಿ ಇಟ್ಟು ಇನ್ನೂ ಹೆಚ್ಚು ಐಶ್ವರ್ಯವಂತರಾಗದ ಹಾಗೆ ಮಾಡಿ ಸಮತಾವಾದ ಸಮಾಜವನ್ನು ತರಬೇಕೆಂದು ಜನತೆಗೆ ಆಶ್ವಾಸನವನ್ನು ಕೊಟ್ಟಿದ್ದರೋ ಅವರನ್ನು ಕಡೆಗಣಿಸಿ, ಹಳ್ಳಿಗಾಡಿನಲ್ಲಿರತಕ್ಕವರನ್ನು ಶೋಷಣೆ ಮಾಡತಕ್ಕವರು ಯಾರಿದ್ದಾರೆ ಅವರಿಗೆ ಹಿತ ಮಾಡತಕ್ಕ ರೀತಿಯಲ್ಲಿ ಈ ಧೋರಣೆ ನಡೆದುಕೊಂಡು ಬಂದಿದೆ. ಈ ಧೋರಣೆ ಖಂಡಿತವಾಗಿಯೂ ನ್ಯಾಯವಾದದ್ದಲ್ಲ. ಧಾರಣೆವಾಸಿಗಳು ಹೆಚ್ಚಾಗಿರತಕ್ಕ ಈ ಸಂದರ್ಭದಲ್ಲಿ ತಾವು ಕಂದಾಯ ಹಾಕತಕ್ಕ ಪದ್ಧತಿ ಖಂಡಿತವಾಗಿಯೂ ಸರಿಯಲ್ಲ. ಎರಡೂವರೆ ಎಕರೆಯಿಂದ 5 ಎಕರೆಯವರೆಗೂ ಇರತಕ್ಕ ಜಮೀನು ಏನಿದೆ ಅಂತಹ ಜಮೀನುಗಳಿಗೆ ಪೂರ್ಣವಾಗಿ ಕಂದಾಯದ ವಿನಾಯಿತಿ ಕೊಡಬೇಕು. ಒಟ್ಟು ಹಿಡುವಳಿಯಲ್ಲಿ 4.7 ಭಾಗ ಮಾತ್ರ ಅಷ್ಟು ಜನರು ಇದ್ದಾರೆ. ಅದರಿಂದ ಸರ್ಕಾರಕ್ಕೆ ಲಾಭವಾಗಲಿಕ್ಕೆ ಇಲ್ಲ, 4 7 ರ ಮೇಲೆ ಏನು ಒಂದು ರೆವಿನ್ಯೂ ಬರುತ್ತದೆ ಅದನ್ನು ಭರ್ತಿ

(ಶ್ರೀ ಎಂ. ಬಸವರಾಜು)

ಮಾಡಲಿಕ್ಕೆ 5 ಎಕರೆಗೆ ಮೇಲ್ಪಟ್ಟು 10, 25 ಎಕರೆ ಇರುವುದಕ್ಕೆ ಮತ್ತು ತೋಟಗಳಿಗೆ ಹೆಚ್ಚಿನ ಕಂದಾಯವನ್ನು ಹಾಕಬಹುದು. ಆ ರೀತಿ ಭರ್ತಿ ಮಾಡಬಹುದು ಎಂಬ ಅಭಿಪ್ರಾಯವನ್ನು ಸ್ಪಷ್ಟವಾಗಿ ಇವತ್ತು ಸರ್ಕಾರದ ಮುಂದೆ ಇಡುತ್ತಾ ಇದ್ದೇನೆ.

ಎರಡನೆಯದಾಗಿ ನಮ್ಮ ಫೈನಾನ್ಸ್ ಮಿನಿಸ್ಟರು ಅವರ ಬಡ್ಜೆಟ್ ಭಾಷಣದ 16 ನೇ ಪುಟದಲ್ಲಿ ಅಗ್ರಿಕಲ್ಚರಲ್ ಸೆಕ್ಟರ್‌ನಿಂದ ಫೈನಾನ್ಷಿಯಲ್ ರಿಸೋರ್ಸಸ್‌ಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿದ್ದಾರೆ. ಇದು ಬಹಳ ನಿರಾಶೆಯಾಗುತ್ತಾ ಇದೆ. ಏಕೆಂದರೆ ಓಷಿಮಾ ಅಂತ ಹೇಳಿ ಜಪಾನ್‌ನ ಒಂದು ಇಂಡಸ್ಟ್ರಿಯಲ್ ಕನ್‌ಸರ್ನ್ ಇದೆ, ಅವರು ಲೈಟ್ ವರ್ಕ್ ಮಾಡತಕ್ಕ ಮನುಷ್ಯನಿಗೆ 3000 ಕ್ಯಾಲೋರೀಸ್ ಆಫ್ ಫುಡ್ ಬೇಕು ಅಂತ ಹೇಳುತ್ತಾರೆ. ಹೆವಿ ವರ್ಕ್ ಮಾಡತಕ್ಕವನಿಗೆ 5,500 ಕ್ಯಾಲೋರೀಸ್ ಬೇಕು ಅಂತ ಹೇಳುತ್ತಾರೆ. ಇವತ್ತು ಭಾರತದಲ್ಲಿ ನಾವು ತೆಗೆದುಕೊಳ್ಳತಕ್ಕ ಆಹಾರದಲ್ಲಿ 2000 ಕ್ಯಾಲೋರಿಸ್ ಕೂಡ ಒದಗಿಸಲಿಕ್ಕೆ ಸಾಧ್ಯವಿಲ್ಲ. ಕಳೆದ ಮೂರು ವರ್ಷದಿಂದ ಮಳೆ ಬೆಳೆ ಇಲ್ಲದೆ ನಮ್ಮ ಹಳ್ಳಿಗಳ ಕಡೆ ತಿನ್ನಲಿಕ್ಕೆ ಜನರಿಗೆ ಕೂಳು ಇಲ್ಲ ಅಂದ ಮೇಲೆ ಇನ್ನೂ ಹೆಚ್ಚು ಕಂದಾಯವನ್ನು ಹಾಕಬೇಕು ಎಂದರೆ ಹೇಗೆ ಸಾಧ್ಯವಾಗುತ್ತದೆ? ಈ ದಿವಸ ನಾನು ಈ ಸರ್ಕಾರದವರನ್ನು ಒಂದು ಮಾತು ಕೇಳುವುದಕ್ಕೆ ಇಷ್ಟಪಡುತ್ತೇನೆ — ಹಿಂದೆ ನಮ್ಮ ಜವಹರಲಾಲ್ ನೆಹ್ರೂರವರೇ ಪ್ರಾಪರ್ಟಿ ಟ್ಯಾಕ್ಸ್‌ನ್ನು ಹಾಕಬೇಕೆಂದು ಬಹಳವಾಗಿ ಹೇಳುತ್ತಿದ್ದರು. ಈ ದಿವಸ ಸರ್ಕಾರ ಏಕೆ ಇನ್ನೂ ಆ ಟ್ಯಾಕ್ಸ್‌ನ್ನು ಹಾಕಲಿಲ್ಲ? ಸಿಟಿಗಳಲ್ಲಿ ಮತ್ತು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಾಸಮಾಡತಕ್ಕ ಜನರ ಸಂಖ್ಯೆ ಸುಮಾರು ಇಪ್ಪತ್ತೆರಡೂವರೆ ಲಕ್ಷ ಇರಬಹುದು. ಆದರೆ ಹಳ್ಳಿಗಳಲ್ಲಿರತಕ್ಕ ಜನಸಂಖ್ಯೆ ಎಷ್ಟು? ನಮ್ಮಲ್ಲಿ ಒಂದು ಕೋಟಿ 83 ಲಕ್ಷ ಜನರು ಹಳ್ಳಿಗಳಲ್ಲಿ ವಾಸಮಾಡುತ್ತಾರೆ. ಇಲ್ಲಿ ವಾಸಮಾಡುವ ಜನರಿಗೆ ಸಕಲ ಸೌಕರ್ಯಗಳನ್ನು ಒದಗಿಸಿಕೊಡುತ್ತಿದ್ದಾರೆ ಅಂಥವರ ಮೇಲೆ ಇವರೇಕೆ ಟ್ಯಾಕ್ಸ್‌ನ್ನು ಹಾಕಬಾರದು? ಪೇಟೆಯಲ್ಲಿ ಇರತಕ್ಕ ಜನರ ಮೇಲೆ ತೆರಿಗೆಯನ್ನು ಧೈರ್ಯವಾಗಿ ಹಾಕತಕ್ಕ ಶಕ್ತಿ ಈ ಸರ್ಕಾರಕ್ಕಿಲ್ಲ ಎಂದು ಕಾಣುತ್ತಿದೆ. 15-16 ಲಕ್ಷ ಜನಸಂಖ್ಯೆ ಇರತಕ್ಕ ಬೆಂಗಳೂರು ನಗರದಲ್ಲಿರತಕ್ಕ ಜನರಿಗೆ ಪ್ರತಿಯೊಂದು ಸಾಮಾನುಗಳನ್ನೂ ಒಂದು ನಿಯಂತ್ರಣ ದರದಲ್ಲಿ ಸಿಕ್ಕುವಂತೆ ಮಾಡುವುದಕ್ಕಾಗಿ ಒಂದು ಜನತಾ ಬಜಾರನ್ನು ಮಾಡಿದ್ದಾರೆ. ಇದೇ ಜನತಾ ಬಜಾರಿನ ಅನುಕೂಲವನ್ನು ಯಾವ ಹಳ್ಳಿಯಲ್ಲಿ ಮಾಡಿದ್ದಾರೆ? ಮಾತಿನಲ್ಲಿ ಮಾತ್ರ ಹಳ್ಳಿಯವರನ್ನು ಸರ್ಕಾರದವರು ಉದ್ಧಾರ ಮಾಡುತ್ತಾರೆಂದು ಹೇಳಿದರೆ ಯಾರು ಅದನ್ನು ನಂಬುತ್ತಾರೆ? ಅದೇ ರೀತಿ ಗ್ರಾಮಾಂತರ ಪ್ರದೇಶದಲ್ಲಿ ವ್ಯವಸಾಯದ ಕೂಲಿಗಾರರಿಗೂ ಮತ್ತು ಪ್ಲಾಂಟೇಷನ್‌ಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕ ವರ್ಗಕ್ಕೂ ಏನು ಸಹಾಯ ಮಾಡಿದ್ದಾರೆ? ನಗರಗಳಲ್ಲಿ ಕೆಲಸ ಮಾಡತಕ್ಕ ಜನರಿಗೆ ಅಂದರೆ ಕಾರ್ಮಿಕರಿಗೆ ಇಲ್ಲಿ ಮಿನಿಮಂ ವೇಜಸ್ ಆಕ್ಟ್ ಎಂಬ ಕಾನೂನನ್ನು ಮಾಡಿದ್ದಾರೆ. ಹೀಗೆ ಒಂದು ಕಾನೂನನ್ನು ಆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕಾರ್ಮಿಕ ವರ್ಗಕ್ಕೆ ಏಕೆ ಮಾಡಲಿಲ್ಲ ಎಂದು ಕೇಳುತ್ತೇನೆ. ಆ ಬಡ ಹಳ್ಳಿ ಜನರ ಒಂದು ಜೀವನದ ವಿಚಾರದಲ್ಲಿ ಸರ್ಕಾರದವರ ಖಚಿತವಾದ ಧೋರಣೆಯೇನೆಂಬುದು ಇಂದಿಗೂ ತಿಳಿಯದಾಗಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ 12.7 ಭಾಗದಷ್ಟು ಇರತಕ್ಕ ಕಾರ್ಮಿಕ ವರ್ಗಕ್ಕೆ ಅದರಲ್ಲೂ ಮುಖ್ಯವಾಗಿ ಹಳ್ಳಿಗಳಲ್ಲಿರತಕ್ಕ ಕಾರ್ಮಿಕರಿಗೆ ಒಂದು ನಿಗದಿಯಾದ ಕೂಲಿಯನ್ನು ಗೊತ್ತುಮಾಡುವುದಕ್ಕೆ ಒಂದು ಶಾಸನವನ್ನು ಮಾಡದಿರುವುದು ತುಂಬಾ ಅನ್ಯಾಯ. ನಾವು ಈ ವಿಚಾರವನ್ನು ಕಳೆದ ಐದು ವರ್ಷಗಳಿಂದಲೂ ಹೇಳುತ್ತಿದ್ದೇವೆ. ಬಡ ಬೋರೇಗೌಡನು ದೇಶದ ಬೆನ್ನು ಮೂಳೆ ಎಂದೇನು ಎಲ್ಲರೂ ಹೇಳುತ್ತಿದ್ದಾರೋ ಅವನ ಬೆನ್ನು ಈ ದಿವಸ ಮುರಿದು ಹೋಗಿದೆ. ಸರ್ಕಾರದವರು ಈಗಲಾದರೂ ಆ ಹಳ್ಳಿ ಜನರ ಕಡೆಗೆ ತಮ್ಮ ಗಮನವನ್ನು ತಿರುಗಿಸುತ್ತಾರೆಂದು ನಂಬಿದ್ದೇನೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡಿನ ಅನುಕೂಲ ಮಾಡಿದ್ದಾರೆ. ಆ ಹಳ್ಳಿಯ ಕಾರ್ಮಿಕರಿಗೇನು ಅನುಕೂಲ ಮಾಡಿಕೊಟ್ಟಿದ್ದಾರೆ? ಇನ್ನು ಸರ್ಕಾರಿ ಕೆಲಸದಲ್ಲಿದ್ದು 30 ವರ್ಷ ಸರ್ಕಾರಕ್ಕೆ ಸೇವೆಯನ್ನು ಸಲ್ಲಿಸಿದ ಜನರಿಗೆ ಅವರು ತಮ್ಮ ಕೆಲಸವನ್ನು ಬಿಟ್ಟು ಮನೆಗೆ ಹೋಗತಕ್ಕ ಕಾಲದಲ್ಲಿ ಪೆನ್‌ಷನ್ ವಗೈರೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇಷ್ಟೆಲ್ಲಾ ಸೌಕರ್ಯವನ್ನು ಕೇವಲ ನಗರದಲ್ಲಿರತಕ್ಕ 29 ಲಕ್ಷ ಜನರಿಗೆ ಒದಗಿಸುತ್ತಿದ್ದಾರೆ, ಇದರ ಜೊತೆಗೆ ಆ ವೈದ್ಯಕೀಯ ಸೌಲಭ್ಯ ಬೇರೆ ಇರುತ್ತೆ. ಇಂಥ ಯಾವ ಒಂದು ಅನುಕೂಲವನ್ನೂ ಆ ಹಳ್ಳಿಯ ಜನರಿಗಾಗಲೀ ಅಥವಾ ಕಾರ್ಮಿಕರಿಗಾಗಲಿ ಒದಗಿಸದಿರುವುದು ಬಹಳ ದುಃಖಕರವಾದ ವಿಷಯ.

ಇನ್ನು ಆ ರೈತರಿಗೆ ಅಗತ್ಯವಾಗಿ ಬೇಕಾಗಿರತಕ್ಕ ಸಾಲದ ವಿಚಾರಕ್ಕೆ ಬಂದರೆ ಮೂರನೆ ಎರಡು ಭಾಗದ ಜನರಿರತಕ್ಕ ಪ್ರದೇಶಕ್ಕೆ ಅಂದರೆ ನಮ್ಮ ಹಳ್ಳಿಗಾಡಿನ ಜನರಿಗೆ 1952 ನೇ ಇಸವಿಯಿಂದಲೂ ನಾವು ಇಲ್ಲಿ ಪಂಚವಾರ್ಷಿಕ ಯೋಜನೆಗಳಿಗಾಗಿ ಅನೇಕ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ, ಅವರಿಗೇನೂ ಅನುಕೂಲವಾಗಲಿಲ್ಲ. ಆದರೆ ಅವರಮೇಲೆ ಸಾಲದ ಹೊರೆ ಬೀಳುತ್ತಿರುವುದು ದಿನ ದಿನಕ್ಕೂ ಹೆಚ್ಚುತ್ತಿದೆ. ಅವರಿಗೆ ಮಾತ್ರ ಸರ್ಕಾರದಲ್ಲಿ ಸಾಲ ಸಿಕ್ಕುತ್ತಿಲ್ಲ. ನಮ್ಮಲ್ಲಿರತಕ್ಕ ಆಲ್ ಇಂಡಿಯಾ ಮನಿ ಲೆಂಡರ್ಸ್ ಆಕ್ಟ್ ಪ್ರಕಾರ ನಮ್ಮ ಹಳ್ಳಿಗಳಲ್ಲಿರತಕ್ಕ ರೈತರೇನಿದ್ದಾರೆ ಅವರಿಗೆ ಅಗತ್ಯವಾಗಿ ಬೇಕಾಗತಕ್ಕ ಸಾಲದಲ್ಲಿ ಶೇಕಡ 70 ರಷ್ಟು ಹಣದ ಸೌಲಭ್ಯ ಈ ಮನೀ ಲೆಂಡರ್ಸ್‌ಗಳಿಂದ ದೊರೆಯುತ್ತಿದೆ. ಇನ್ನು ಶೇ. 23 ರಷ್ಟು ಅವರ ಸಂಬಂಧೀಕರಿಂದ ದೊರೆಯುತ್ತಿದೆ ಮತ್ತು ಸಾಹುಕಾರರಿಂದ ದೊರೆಯುತ್ತಿದೆ. ಇನ್ನು ಶೇಕಡ ಮೂರು ಭಾಗದ ಆರ್ಥಿಕ ಸೌಕರ್ಯ ಸರ್ಕಾರದಿಂದ ದೊರೆಯುತ್ತಿದೆ. ಇನ್ನು ಶೇಕಡ 3 ಭಾಗ ಸಹಕಾರ ಸಂಘಗಳಿಂದ ಸಿಕ್ಕುತ್ತಿದೆ. ಇನ್ನುಳಿದ ಒಂದು ಭಾಗ ಕಮರ್ಷಿಯಲ್ ಬ್ಯಾಂಕುಗಳಿಂದ ದೊರೆಯುತ್ತಿದೆ. ಕೋಟ್ಯಾಂತರ ರೂಪಾಯಿಗಳ ಲೇವಾದೇವಿ ನಡೆಸತಕ್ಕ ಕಮರ್ಷಿಯಲ್ ಬ್ಯಾಂಕುಗಳು ರೈತನಿಗೆ ಕೇವಲ ಒಂದು ಪರ್ಸೆಂಟಿನಷ್ಟು ಹಣವನ್ನು ಸಾಲದ ರೂಪದಲ್ಲಿ ಕೊಡುತ್ತಿರುವುದು ತುಂಬಾ ನಾಚಿಗೆಗೇಡಿನ ಪ್ರಸಂಗ. ಆದುದರಿಂದ ನಮ್ಮ ಇಂಡಿಯಾ ದೇಶದಲ್ಲಿ ಹಿಮಾಚಲದಿಂದ ಕನ್ಯಾಕುಮಾರಿಯವರೆಗೂ ಇರತಕ್ಕ ಬ್ಯಾಂಕುಗಳನ್ನು ಕೂಡಲೆ ರಾಷ್ಟ್ರೀಕರಣ ಮಾಡುವುದಕ್ಕೆ ಪರಿಶೀಲನೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದನ್ನು ಸರ್ಕಾರದವರು ಸುದೀರ್ಘವಾಗಿ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಸ್ವಾಮಿ ನಮ್ಮ ಹಳ್ಳಿಗಳಲ್ಲಿರತಕ್ಕ ಜನರಿಗೆ ಅಂದರೆ ಬೇಸಾಯ ಕಾರ್ಮಿಕ ವರ್ಗದವರಿಗೆ ಮತ್ತು ರೈತರಿಗೆ ಒಂದು ವರ್ಷದಲ್ಲಿ ಅಂದರೆ 365 ದಿವಸಗಳಲ್ಲಿ 154 ದಿನಗಳು ಹೋದರೆ ಇನ್ನುಳಿದ ದಿನಗಳಲ್ಲಿ ಅವರಿಗೆ ಒಂದು ನಯಾ ಪೈಸೆ ಕೂಡ ಸಂಪಾದನೆ ಮಾಡುವುದಕ್ಕಾಗುವುದಿಲ್ಲ. ಈ ವಿಚಾರದಲ್ಲಿ ಸರ್ಕಾರದವರ ನಿಲುವೇನೆಂದು ಪ್ರಶ್ನಿಸುತ್ತೇನೆ ?

ನಾನಿನ್ನು ಮತ್ತೊಂದು ಬಹಳ ತ್ರಾಸದಾಯಕವಾದಂಥ ವಿಷಯವನ್ನು ಹೇಳಬೇಕಾಗಿದೆ. ಅದು ನಮ್ಮ ಸ್ತ್ರೀವರ್ಗಕ್ಕೆ ಸಂಬಂಧಪಟ್ಟ ವಿಷಯ. ನಾವು ನಮ್ಮ ಸ್ತ್ರೀಯರನ್ನು ಲಕ್ಷ್ಮೀದೇವಿಯರು, ಅವರು ಪರಮೇಶ್ವರನಿಗೆ ಪಾರ್ವತಿ ಇದ್ದ ಹಾಗೆ ಎಂದು ಏನೇನೊ ಹೇಳುತ್ತೇವೆ. ಅಂಥ ಸ್ತ್ರೀಯರಿಂದ ದುಡಿಸಿಕೊಂಡು ನಾವು ಈ ದಿವಸ ಹೊಟ್ಟೆ ಹೊರೆಯಬೇಕಾಗಿದೆ. ಅವರಿಂದ ದುಡಿಸಿಕೊಂಡು ನಾವು ಜೀವನ ಮಾಡಬೇಕಾಗಿದೆ. ನಮ್ಮಲ್ಲಿ ದುಡಿಮೆ ಮಾಡತಕ್ಕ ಗಂಡಸರ ಸಂಖ್ಯೆ ನೂರಕ್ಕೆ 45 ಇದ್ದರೆ, ದುಡಿಮೆ ಮಾಡತಕ್ಕ ಸ್ತ್ರೀಯರ ಸಂಖ್ಯೆ ನೂರಕ್ಕೆ 50 ಇದೆ. ಹೀಗೆ ಹೆಂಗಸರಿಂದ ದುಡಿಸಿಕೊಂಡು ಜೀವನ ಮಾಡತಕ್ಕ ಸಂಪ್ರದಾಯವೇನಿದೆ ಇದು ನಮ್ಮ ಭಾರತೀಯ ನಾಗರೀಕತೆಗೂ ಮತ್ತು ಸಂಸ್ಕೃತಿಗೂ ತದ್ವಿರುದ್ಧವಾದ್ದು ಎಂದು ಹೇಳುತ್ತೇನೆ.

ಇನ್ನು ಈ ರಾಜ್ಯ ಕಾಂಗ್ರೆಸ್ಸಿನವರ ಕೈಗೆ ಬಂದ ನಂತರ ಹಿಂದೆ ಇದ್ದ ಸ್ಥಿತಿಗಿಂತ ಯಾವುದನ್ನೂ ಉತ್ತಮಮಾಡಿಲ್ಲ. ನಾವಿನ್ನೂ ಹಿಂದಕ್ಕೆ ಹೋಗುತ್ತಿದ್ದೇವೆ. ಜನರ ಸ್ಥಿತಿಗತಿಗಳು ಇನ್ನೂ ಉಲ್ಬಣವಾಗುತ್ತಿವೆ. 1956-57ರಲ್ಲಿ ಒಂದು ಸಂಸಾರದ ಖರ್ಚು, ಒಂದು ಸಂಸಾರ ಎಂದರೆ ಒಬ್ಬ ಹೆಂಗಸು, ಒಬ್ಬ ಗಂಡಸು ಮತ್ತು ಇಬ್ಬರು ಮಕ್ಕಳು ಇರತಕ್ಕಂಥ ಒಂದು ಸಂಸಾರಕ್ಕೆ 437 ರೂಪಾಯಿಗಳು ಬೇಕಾಗುತ್ತಿತ್ತು. ಈ ದಿವಸ ಆ ವೆಚ್ಚ 617 ರೂಪಾಯಿಗಳಿಗೇರಿದೆ. ಅಂದಾಗ ಇನ್ನು ಉಳಿದ ಆ 180 ರೂಪಾಯಿಗಳನ್ನು ಎಲ್ಲಿಂದ ತರುವುದು ? ಹೀಗಾಗಿ ಆ ಜನರು ಬಹಳ ಪೇಚಿನಲ್ಲಿ ಸಿಕ್ಕಿಬಿದ್ದಿದ್ದಾರೆ. ನಗರದಲ್ಲಿರತಕ್ಕ ನೌಕರರಿಗೆ ಅನೇಕ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಆ ಹಳ್ಳಿಯ ಜನರನ್ನು ಕೇಳತಕ್ಕವರು ಯಾರು ಇದ್ದಾರೆ ? ಇದೇ ವಿಚಾರದಲ್ಲಿ ನಮ್ಮ ಪಂಡಿತ ನೆಹ್ರು ಅವರು ಒಂದು ವಾಕ್ಯವನ್ನು ಹೇಳಿದ್ದಾರೆ—ಆ ದಿವಸ ಅವರು ಹೇಳಿರತಕ್ಕ ಮಾತು ಇಂದಿಗೂ ಸತ್ಯವಾದುದೆಂಬುದನ್ನು ನಾವು ಮರೆಯುವುದಕ್ಕಾಗುವುದಿಲ್ಲ. ಇದನ್ನು ಸರ್ಕಾರದವರು ಸುದೀರ್ಘವಾಗಿ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರದವರು ಜಮೀನ್ದಾರರ ಬಗ್ಗೆ ಏನೊಂದು ಸ್ಪಷ್ಟವಾದ ನೀತಿ ಇರಬೇಕು ಎಂಬುದರ ಬಗ್ಗೆ ಅವರು ಹೀಗೆ ಹೇಳಿದ್ದಾರೆ—

> "The present conflicts in society, national as well as economic, can never be resolved except by coercion."

ಸರ್ಕಾರದವರು ಅಂಥ coercive measures ತೆಗೆದುಕೊಂಡರೆ ದೇಶದಲ್ಲಿ ದೊಡ್ಡ ಅನಾಹುತವೇ ಆದೀತೆಂದು ಎಚ್ಚರಿಕೆ ನೀಡಿದ್ದಾರೆ. ಈ ವಿಚಾರವನ್ನು ಸರ್ಕಾರದವರು ತಮ್ಮ ಗಮನದಲ್ಲಿ ಇಟ್ಟುಕೊಂಡು ತಮ್ಮ ಭೂಮಿ ಹಂಚಿಕೆಯ ನೀತಿಯನ್ನು ಮಾರ್ಪಾಡು ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಇಷ್ಟನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷಣಿಯವರೇ, ಈ ದಿವಸ ಚರ್ಚೆಯಾಗುತ್ತಿರುವ ಡಿಮ್ಯಾಂಡುಗಳಿಗೆ ನಾನು ನನ್ನ ಬೆಂಬಲವನ್ನು ಕೊಡುತ್ತ ನಾನು ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕಂದಾಯದ ವಿಚಾರದಲ್ಲಿ ನಾನು ಈ ಹಿಂದೆ ಬಡ್ಜೆಟ್ಟಿನ ಮೇಲೆ ಚರ್ಚೆ ನಡೆಯುತ್ತಿದ್ದ ಕಾಲದಲ್ಲಿ ನಾನು ನನ್ನ ಖಚಿತವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಆದುದರಿಂದ ನಾನೀಗ ಅದರ ವಿಚಾರವನ್ನು ಪ್ರಸ್ತಾಪಮಾಡುವುದಕ್ಕೆ ಹೋಗುವುದಿಲ್ಲ. ಎಲ್ಲರೂ ಕಂದಾಯವನ್ನು ಕೊಡಲೇಬೇಕು. ರೈತರು ಕಂದಾಯ ಕೊಡಬೇಕು— ಇಲ್ಲಿ ಸರ್ಕಾರ ನಡೆಯಬೇಕು. ಭೂಮಿಯಿಂದ ರೈತರು ಎಷ್ಟೆಷ್ಟರ ಮಟ್ಟಿಗೆ ಉತ್ಪನ್ನವನ್ನು ರೂಢಿಸುತ್ತಾರೋ ಅಷ್ಟರಮಟ್ಟಿಗೆ ಸರ್ಕಾರ ಅವರಿಂದ ಕಂದಾಯವನ್ನು ವಸೂಲ್ಮಾಡಲೇ ಬೇಕು. ಆದರೆ ಬೆಳೆಗಳು ಎಲ್ಲೆಲ್ಲಿ ಆಗಿಲ್ಲವೋ ಅಂಥ ಕಡೆಗಳಲ್ಲಿ ಎಷ್ಟೆಷ್ಟು ರಿಯಾಯಿತಿಯನ್ನು ರೈತರಿಗೆ ಕೊಡಬೇಕೊ ಅಷ್ಟಷ್ಟು ರಿಯಾಯಿತಿಯನ್ನು ಸರ್ಕಾರ ಕೊಡಲೇಬೇಕು. ಇಷ್ಟನ್ನು ಇದರ ಬಗ್ಗೆ ಹೇಳಿ ಈ ವಿಚಾರವನ್ನು ಇಷ್ಟಕ್ಕೇ ಮುಗಿಸುತ್ತೇನೆ.

ನಾನು ಇನ್ನು ಈ ದಿವಸ ಏನು ಮಾತನಾಡಬೇಕಾಗಿದೆ ಎಂದರೆ, ನಮ್ಮ ಲ್ಯಾಂಡ್ ಅಕ್ವಿಜೆಷನ್ ಆಕ್ಟ್ ಮತ್ತು ಆ ಲ್ಯಾಂಡ್ ಆಕ್ವಿಜೆಷನ್ ಆಫೀಸರ ವಿಚಾರದಲ್ಲಿ ಕೆಲವು ಮಾತುಗಳನ್ನಾಡಬೇಕಾಗಿದೆ. ಲ್ಯಾಂಡ್ ಅಕ್ವಿಜಿಷನ್ ಆಫೀಸರೆಂದು ಯಾರು ಇದ್ದಾರೋ ಅವರೇನು ದೇವರೋ ದೇವತೆಗಳೋ ಅಥವಾ ದೆವ್ವಗಳೋ ಏನೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಮೊನ್ನೆ ದಿವಸ ಇಲ್ಲಿ ಒಂದು ಪ್ರಶ್ನೆ ಚರ್ಚೆಗೆ ಬಂದಿದ್ದ ಕಾಲದಲ್ಲಿ ಪಿ.ಡಬ್ಲ್ಯೂ. ಮಂತ್ರಿಗಳು ತಮ್ಮ ನಿಸ್ಸಹಾಯಕತೆಯನ್ನು ವ್ಯಕ್ತಪಡಿಸಿದರು. ಅವರು ಉತ್ತರವನ್ನು ಕೊಡುತ್ತಾ ಆ ಕೆಲಸ ನನ್ನ ಕೈಯಿಂದ ಸಾಧ್ಯವಿಲ್ಲ, ನಮ್ಮ ರೆವಿನ್ಯೂ ಮಂತ್ರಿಗಳನ್ನು ಕೇಳಬೇಕೆಂದು ಹೇಳುತ್ತಿದ್ದರು ; ಅವರಿಗೆ ಸ್ವಲ್ಪ ಸಹಾಯ ಮಾಡಬೇಕೆಂದು ಹೇಳುತ್ತೇನೆಂದು ಹೇಳಿದರು. ಅವರಿಗೇಕೆ ಅಂಥ ಒಂದು ಕಷ್ಟ ಬಂದಿತು ಎಂಬುದನ್ನು ನಾವು ಪರಿಶೀಲನೆ ಮಾಡಬೇಕಾಗಿದೆ. ನಮ್ಮ ನಂಜನಗೂಡಿನ ತಾಲ್ಲೂಕಿನಲ್ಲಿ ಒಂದು ಲ್ಯಾಂಡ್ ಅಕ್ವಿಜೆಷನ್ ಆಫೀಸನ್ನು ಮಾಡಿದ್ದಾರೆ. ಅವರು ಕಷ್ಟಪಟ್ಟು ಕೆಲಸಮಾಡಬೇಕು, ಸ್ಥಳಕ್ಕೆ ಹೋಗಿ ಎಗ್ಸಾಮಿನ್ ಮಾಡಬೇಕು. ಇದು ಬಹಳ ಕಠಿಣವಾದ ಬದುಕು. ಈ ಹುದ್ದೆಗಳಿಗೆ ಯಾರನ್ನು ಹಾಕಬೇಕೆಂಬುದನ್ನು ನಮ್ಮ ಸರ್ಕಾರದವರು ಮೊದಲು ಯೋಚನೆಮಾಡಬೇಕು. ಮುದುಕರು, ಕುಂಟರು, ಮೋಟರು, ಕೆಲಸ ತಿಳಿಯದೆ ಇರುವವರನ್ನು, ನಾಳೆ ರಿಟೈರು ಆಗುವವರನ್ನು ಇಲ್ಲಿ ಹಾಕುತ್ತಿರುವುದರಿಂದ ರೈತರಿಗೆ ಸಹಾಯ ಸಿಗುತ್ತಾ ಇಲ್ಲ. ಯಾರು ನೋಡಿದರೂ ತಮಗೆ ಬರಬೇಕಾದ ಕಾಂಪನ್ಸೇಷನ್ ಸಿಗುತ್ತಾ ಇಲ್ಲವೆಂದು ಹೇಳುತ್ತಾರೆ. ಕ್ರಾಪ್ ಕಂಪನ್ಸೇಷನ್ ಸಹ ಸಿಗುತ್ತಾ ಇಲ್ಲ. ನನಗಂತೂ ಯಾವ ಅಧಿಕಾರಿಗಳ ಮನೆ ಬಾಗಿಲಿಗೆ ಹೋಗುವ ಪರಿಪಾಟು ಏನೂ ಇಲ್ಲ. ರೈತರ ಕಷ್ಟ ನಿವಾರಣೆ ಗೋಸ್ಕರ ಹೋಗಿ ಕೇಳಬೇಕಾಗಿದೆ. ಇಷ್ಟೊಂದು ಫೈಲುಗಳಿವೆ ಎಂಬುದಾಗಿ ನಾನು ಅವರ ಮನೆ ಬಾಗಿಲಿಗೆ ಹೋಗುವುದಕ್ಕೆ ಮುಂಚೆಯೇ ಹೇಳುತ್ತಾರೆ. ರೈತರಿಗೆ ಹೇಗಾದರೂ ಮಾಡಿ ಸಹಾಯ ಮಾಡಿಕೊಡಬೇಕೆಂದು ಹೇಳುವ ಧೈರ್ಯ ಈ ಸರ್ಕಾರದಲ್ಲಿ ಅಧಿಕಾರಿಗಳಿಗೆ ಇದೆಯೇ ಎಂದು ಕೇಳುತ್ತೇನೆ. ನಿಜವಾಗಿ ರೈತರಿಗೆ ಹೊಟ್ಟೆಮೇಲೆ ಹೊಡೆಯಬೇಡಿ. ಅಂತಹ ಅಧಿಕಾರಿಗಳನ್ನು ನಿಮಗೆ ಬೇಕಾದರೆ ಈ ಸರ್ಕಾರದಲ್ಲಿ ಇಟ್ಟುಕೊಂಡರೆ ಇಟ್ಟುಕೊಳ್ಳಿ. ಆದರೆ ನನ್ನ ಅಭಿಪ್ರಾಯದಲ್ಲಿ ಅಂತಹ ಅಧಿಕಾರಿಗಳನ್ನು ಮೊದಲು ರಿಟೈರ್ ಮಾಡಿ ಮನೆಗೆ ಕಳುಹಿಸಿ, ಸರಿಯಾದಂಥ ಅಧಿಕಾರಿಗಳನ್ನು ಆ ಹುದ್ದೆಗಳಿಗೆ ಕೂಡಲೇ ನೇಮಕ ಮಾಡಬೇಕೆಂದು ನಾನು ಬಹಳ ಕಟುವಾಗಿ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ನಮ್ಮ ರೆವಿನ್ಯೂ ಅಧಿಕಾರಿಗಳ ಮನೋಭಾವ ಹಿಂದಿನಿಂದಲೂ ಬೆಳೆದು ಬಂದಿದೆ ಎಂದು ನನಗೆ ಕಾಣುತ್ತದೆ. ಇದು ಮೊದಲಿನಿಂದಲೂ ಒಂದು ತಾಯಿ ಡಿಪಾರ್ಟ್‌ಮೆಂಟ್‌ನಂತೆ ಇತ್ತು. ಈಗ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ಬಂದಮೇಲೆ ಒಂದು ಪ್ರಿಜುಡಿಷಿಯಲ್ ಆಟಿಟ್ಯೂಡ್ ಬಂದಿದೆಯೋ ಏನೋ ಗೊತ್ತಿಲ್ಲ. ಇಲ್ಲಿ ಯಾವ ಅಧಿಕಾರಿ ಆಗಲೀ ಮೇಲಿನ ಅಧಿಕಾರಿಗಳನ್ನು ತೋರಿಸುತ್ತಿದ್ದಾರೆ. ಯಾರೂ ತಮ್ಮ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಇಷ್ಟವಿಲ್ಲ. ಅವರಿಗೆ ಹೇಳಿದರೆ ಇವರಿಗೆ ಹೇಳಿ ಎಂದು ಹೇಳುತ್ತಾರೆ, ಇವರಿಗೆ ಹೇಳಿದರೆ ಅವರಿಗೆ ಹೇಳಿ ಎಂದು ಹೇಳುತ್ತಾರೆ. ಅಮಲ್ದಾರರನ್ನು ಕೇಳಿದರೆ ಸಬ್ ಡಿವಿಜನ್ ಆಫೀಸರಿಗೆ ಹೇಳಿ ಎಂದು ಹೇಳುತ್ತಾರೆ, ಸಬ್ ಡಿವಿಜನ್ ಆಫೀಸರನ್ನು ಕೇಳಿದರೆ ಡಿವಿಜನಲ್ ಕಮಿಷನರ್ ಅಥವಾ ಡೆಪ್ಯುಟಿ ಕಮಿಷನರನ್ನು ಕೇಳಿ ಎಂದು ಹೇಳುತ್ತಾರೆ. ಹೀಗಾಗಿ ಅಲ್ಲಿ ಹೈರಾರ್ಕಿ ಬಹಳ ಜಾಸ್ತಿಯಾಗಿದೆ. ತಂತಮ್ಮ ಕೆಲಸಗಳನ್ನು ಅಧಿಕಾರಿಗಳು ಸರಿಯಾಗಿ ಮಾಡುತ್ತಿಲ್ಲ. ಸುಮ್ಮನೆ ಇನ್ನೊಬ್ಬರನ್ನು ತೋರಿಸುತ್ತಾರೆ. ಆದ್ದರಿಂದ ಈ ಎರಡು ಸರಪಣಿಗಳ ಮಧ್ಯೆ ಕಟ್ ಮಾಡಬೇಕು. ಒಂದು ಸಬ್ ಡಿವಿಜನ್ ಆಫೀಸು ಹೋಗುವುದು, ಇನ್ನೊಂದು ಡಿವಿಷನಲ್ ಕಮಿ

ಷನರ್ ಆಫೀಸು ಹೋಗುವುದು. ಅದರಿಂದ ಸರ್ಕಾರದ ವೆಚ್ಚ ಕಡಿಮೆಯಾಗುತ್ತದೆ. ರೈತರ ಕೆಲಸಗಳೂ ಸಹ ಬೇಗನೆ ಆಗುತ್ತವೆ. ನೇರವಾಗಿ ತಹಸೀಲ್ದಾರ್‌ರಿಂದ ಡೆಪ್ಯುಟಿ ಕಮಿಷನರ್‌ವರೆಗೆ ಮಾತ್ರ ಕನಕ್ಷನ್ ಇಟ್ಟುಕೊಂಡರೆ ಕೆಲಸಗಳು ಬಹಳ ಚೆನ್ನಾಗಿ ಆಗುತ್ತದೆ. ಈ ಮಧ್ಯದಲ್ಲಿ ರೈಲ್ವೆ ಸ್ಟೇಷನ್‌ಗಳು ಬಹಳ ಜಾಸ್ತಿಯಾಗಿ ಕೆಲಸಗಳು ಅಲ್ಲಲ್ಲಿಯೇ ನಿಂತುಹೋಗಲು ಕಾರಣವಾಗಿವೆ. ಅದಕ್ಕೋಸ್ಕರ ಜಂಕ್ಷನ್‌ಗಳನ್ನು ಆದಷ್ಟುಮಟ್ಟಿಗೆ ಸ್ವಲ್ಪ ಹತ್ತಿರ ಮಾಡಿಕೊಳ್ಳಬೇಕು.

ಇನ್ನು ತಹಸೀಲ್ದಾರ್ ಅವರಿಗೆ ಮತ್ತು ಸಬ್ ಡಿವಿಜನ್ ಆಫೀಸರ್ ಅವರಿಗೆ ಒಂದು ಅನುಕೂಲ ಮಾಡಿಕೊಡಬೇಕು. ಅವರ ಮನೆಗಳಿಗೆ ಟೆಲಿಫೋನ್ ಇಲ್ಲ. ಅವರ ಮನೆಗಳಿಗೆ ಆ ಸೌಕರ್ಯವನ್ನು ಕೊಡಬೇಕು. ಆಗನಾದರೂ ಜಾಗ್ರತೆಯಾಗಿ ಕೆಲಸಗಳು ನಡೆಯುತ್ತವೋ ಇಲ್ಲವೋ ನೋಡೋಣ. ಅವರ ಆಫೀಸಿಗೆ ಹೋಗಿ ವಿಚಾರಮಾಡೋಣವೆಂದು ಅಲ್ಲಿಗೆ ಹೋದರೆ ಮನೆಗೆ ಹೋಗಿದ್ದಾರೆಂದು ಹೇಳುತ್ತಾರೆ ಇದರಿಂದ ಅವರನ್ನು ಫೋನಿನಲ್ಲಿ ಕಾಂಟಾಕ್ಟ್ ಮಾಡೋಣವೆಂದರೆ ಅವರ ಮನೆಗಳಿಗೆ ಫೋನಿನ ಸೌಕರ್ಯ ಕೊಟ್ಟಿಲ್ಲ. ಆದ್ದರಿಂದ ಕೂಡಲೇ ಅವರ ಮನೆಗಳಿಗೆ ಟೆಲಿಫೋನಿನ ಸೌಕರ್ಯಗಳನ್ನು ಕೊಡಬೇಕೆಂದು ನಾನು ಸರ್ಕಾರದವರಲ್ಲಿ ಸೂಚನೆ ಕೊಡುತ್ತೇನೆ.

ಇನ್ನು ಅರಣ್ಯ ಶಾಖೆಯ ಬಗ್ಗೆ ಹೇಳುವುದಾದರೆ, ನಮ್ಮ ಗೋಪಾಲಸ್ವಾಮಿ ಬೆಟ್ಟ ಬಂಡೀಪುರಕ್ಕೆ ಸಮೀಪದಲ್ಲಿದ್ದು ಅದು ಗೇಮ್ ಸ್ಯಾಂಕ್ಚುಯರಿ ಆಗಿದೆ. ಬಹಳ ಶ್ರೇಷ್ಠವಾದ ಸ್ಥಳವಾಗಿದೆ. ಅದರ ಭೂಮಿ ಒಳ್ಳೆಯ ಫಲವತ್ತಾದುದು. ಕೆಲವು ಪ್ಲಾಂಟೇಷನ್ಸ್ ಆಗುತ್ತವೆ. ಹಿಂದೆ ಈ ಪ್ರದೇಶವನ್ನು ಕಾಫಿ ಬೆಳೆಗೋಸ್ಕರ ನೋಡಿ ನಿಗದಿಮಾಡಿದ್ದರು. ಆದರೆ ಅದು ಒಂದು ಸ್ಯಾಂಕ್ಚುಯರಿ ಆಗಿದ್ದುದರಿಂದ ಅಲ್ಲಿ ಈಗ ಕಾಫಿ, ಟೀ ಬೆಳೆಗಳನ್ನು ಬೆಳೆಯುವುದಕ್ಕಾಗುವುದಿಲ್ಲ. ಡಾಲರ್ ಎಕ್ಸ್‌ಚೇಂಜ್ ಅರ್ನ್ ಮಾಡುವ ಬೆಳೆಗಳನ್ನು ಬೆಳೆಯಬಹುದು. ಅವು ಯಾವುವೆಂದರೆ, ಲವಂಗ, ಲವಂಗಪಟ್ಟೆ, ಗೇರುಪೊಪ್ಪು, ದಾಲ್ಚಿನ್ನಿ, ಮರಾಠಮೊಗ್ಗು, ಇಂತಹುಗಳನ್ನು ಅಲ್ಲಿ ಬೆಳೆದರೆ ಖಂಡಿತವಾಗಿ ಅರಣ್ಯ ಸಂಪತ್ತು ಅಭಿವೃದ್ಧಿಯಾಗುತ್ತದೆ. ಜನಗಳಿಗೂ ಹೆಚ್ಚು ಕೆಲಸಗಳು ಸಿಗುತ್ತವೆ. ನಿಮ್ಮ ಗೇಮ್ ಸ್ಯಾಂಕ್ಚುಯರಿಗೇನೂ ತೊಂದರೆಯಾಗುವುದಿಲ್ಲ.

ಇನ್ನು ನಮ್ಮ ಗುಂಡ್ಲುಪೇಟೆ ವಿಷಯವನ್ನು ಇಲ್ಲಿ ಹೇಳುವುದಕ್ಕೆ ನಾಚಿಕೆಯಾಗಿದೆ. ಅದು ಅಭಾವಪ್ರದೇಶವೆಂದು ಹೇಳಲು ನಾನು ಬಹಳವಾಗಿ ನಾಚಿಕೆಪಟ್ಟುಕೊಳ್ಳುತ್ತೇನೆ. ದೇವರು ನಮಗೆ ಮಳೆಯಾದರೂ ಕೊಟ್ಟರೆ ಇಲ್ಲಿ ಆ ರೀತಿ ಹೇಳುವುದನ್ನೇ ನಿಲ್ಲಿಸುತ್ತಿದ್ದೆನು. ನಮಗೆ ದೇವರೂ ಸಹ ವರ ಕೊಡುತ್ತಾ ಇಲ್ಲ. ಆದ್ದರಿಂದ ಇಲ್ಲಿ ಅದನ್ನು ಹೇಳುವುದನ್ನು ಬಿಟ್ಟರೆ ನನ್ನ ಕರ್ತವ್ಯದಲ್ಲಿ ಲೋಪಮಾಡಿದಂತಾಗುತ್ತದೆ. ನಮ್ಮಲ್ಲಿ ಸುಮಾರಾಗಿ ಜೋಳ ಫಸಲು ಆಯಿತು. ಈ ವರ್ಷ ಕುಡಿಯುವುದಕ್ಕೆ ನೀರೇ ಇಲ್ಲ. ಯಾವ ಗ್ರಾಮದಲ್ಲಿ ಹೋಗಿ ನೋಡಿದರೂ ದನಕರುಗಳಿಗೆ ನೀರೇ ಇಲ್ಲದೆ ಬಹಳ ತೊಂದರೆಯಾಗಿದೆ. ಮೊನ್ನೆ ಇದ್ದಕ್ಕಿದ್ದಹಾಗೆಯೇ ರಿಲೀಫ್ ವರ್ಕ್ಸ್ ತೆಗೆದುಕೊಳ್ಳುವುದಕ್ಕೋಸ್ಕರ ಒಂದು ಸರ್ಕ್ಯುಲರನ್ನು ಹೊರಡಿಸಿ ಗೋಕಟ್ಟೆಗಳನ್ನು ಮಾಡಬಾರದು, ಕುಡಿಯುವ ನೀರಿನ ಬಾವಿಗಳನ್ನು ಜಾಗ್ರತೆಯಾಗಿ ತೆಗೆಯಬೇಕು ಎಂಬುದಾಗಿ ಸೂಚನೆ ಕೊಟ್ಟಿದ್ದಾರೆ. ಸರ್ಕಾರದವರು ಮಾರ್ಚ್ ಮೊದಲನೆಯವಾರದಲ್ಲಿ ದುಡ್ಡು ಕೊಟ್ಟು ಮಾರ್ಚ್ 31 ರೊಳಗೆ ಬಾವಿ ಅಗೆದು ನೀರು ತರಿಸುವುದಕ್ಕಾಗುತ್ತದೆಯೇ? ಇವರಿಗೆ ಇದೇನು, ಅಲ್ಲಾವುದ್ದೀನ್ ದೀಪವೇ? ಮಾರ್ಚ್ ಮೊದಲನೆಯ ವಾರದಲ್ಲಿ ದುಡ್ಡು ಕೊಟ್ಟು ಮಾರ್ಚ್ 31 ರೊಳಗೆ ಬಾವಿ ಅಗೆದು ನೀರು ಕಾಣಿಸಿ ಎಂದರೆ ಹೇಗೆ? 3-4 ವರ್ಷಗಳು ಬಾವಿಗಾಗಿ ಅಗೆದರೂ ಅನೇಕ ಕಡೆಗಳಲ್ಲಿ ನೀರು ಬರುವುದಿಲ್ಲ. ಮಾರ್ಚ್ ಮೊದಲನೆ ವಾರದಲ್ಲಿ ದುಡ್ಡು ಕೊಟ್ಟು 31 ರೊಳಗೆ ಬಾವಿ ಕೆಲಸವನ್ನು ಮುಗಿಸಿ ಎಂದರೆ ಅದು ಮನುಷ್ಯನ ಕೈಲಿ ಸಾಧ್ಯವಾಗುವುದಿಲ್ಲ. ಆದ್ದರಿಂದ ರಿಲೀಫ್ ವರ್ಕ್ಸ್ ಬಗ್ಗೆ ಜನಗಳಿಗೆ ಅನುಕೂಲವಾಗಬೇಕಾದರೆ ನಮ್ಮ ಕಣ್ಣಿಗೆ ಮಣ್ಣು ಎರಚುವುದಕ್ಕೆ ಬದಲಾಗಿ ರಸ್ತೆಗಳಿಗೆ ಚೆನ್ನಾಗಿ ಮಣ್ಣು ಎರಚಿ ರಸ್ತೆಗಳನ್ನು ಸರಿಮಾಡಿ. ಅದರಿಂದಾಗಿ ಬಡವರಿಗೆ ಕೂಲಿಯಾದರೂ ಸಿಗುವ ವ್ಯವಸ್ಥೆ ಒದಗಿಸಬೇಕೆಂದು ನಾನು ಹೇಳಲು ಇಷ್ಟಪಡುತ್ತೇನೆ. ಇತ್ತೀಚೆಗೆ ಸರ್ಕಾರದವರು ಬಾವಿ ತೆಗೆಸುವುದಕ್ಕಾಗಿ ರೈತರಿಗೆ 3-4 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಮಾಡಿದ್ದಾರೆ. ಯಾರಾದರೂ ಸರ್ಕಾರದವರನ್ನೆ ಬಾವಿ ತೆಗೆಸಿಕೊಡಿ, ಬೋರ್‌ವೆಲ್ ಹಾಕಿಸಿಕೊಡಿ ಎಂದು ಕೇಳಿದರೆ ಸರ್ಕಾರದವರು ಸಬ್ಸಿಡೈಸ್ಡ್ ರೇಟಿನಲ್ಲಿ ಅವರಿಗೆ ಬಾವಿ ತೆಗೆಸಿಕೊಡಬೇಕು. ತುತ್ತು ತೂಕ ಕೆಡಿಸಿತು ಎನ್ನುವ ಹಾಗೆ ಅವರ ಸ್ಥಿತಿಯಾಗಿದೆ. ಆದ್ದರಿಂದ ಬಡ ಜನಗಳ ಅನಿಷ್ಟ ಬಾಳನ್ನು ತಪ್ಪಿಸುವುದಕ್ಕಾಗಿ, ಆ ಜನಗಳು ಬೆಳೆಗಳನ್ನು ಚೆನ್ನಾಗಿ ಬೆಳೆಯುವುದಕ್ಕೆ ತಕ್ಕ ಅನುಕೂಲಗಳನ್ನು ಮಾಡಿಕೊಡಬೇಕು.

ಇನ್ನು ರೈತರಿಗೆ ಟ್ರಾಕ್ಟರುಗಳು ಮುಂತಾದ ಸಾಮಾನುಗಳನ್ನು ತೆಗೆದುಕೊಳ್ಳುವಾಗ ವಿಪರೀತವಾಗಿ ಸ್ಟಾಂಪು ತೆರಿಗೆಯನ್ನು ಹಾಕುತ್ತಿದ್ದೀರಿ. ಅದನ್ನು ವಿನಾಯಿತಿ ಮಾಡಬೇಕು.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಅವರನ್ನು ರೈತರಾಗಿ ಇರಬೇಕೆಂದು ಒಂದು ಮಂತ್ರ ಹೇಳುವುದು, ಇನ್ನೊಂದುಸಾರಿ ಸ್ಟ್ಯಾಂಪು ತೆರಿಗೆ ಕೊಡಿ ಎಂಬುದಾಗಿ ಇನ್ನೊಂದು ಮಂತ್ರ ಹೇಳುವುದು ಸರಿಯಲ್ಲ. ಅವರಿಗೆ ಇದರ ಬಗ್ಗೆ ವಿನಾಯಿತಿ ಕೊಡಬೇಕು. ಒಟ್ಟಿನಲ್ಲಿ ಆ ಪದಾರ್ಥಗಳನ್ನು ರೈತರು ಕೊಳ್ಳುವಾಗ ಆ ಸ್ಟ್ಯಾಂಪು ತೆರಿಗೆಯನ್ನು ತೆಗೆದುಹಾಕಬೇಕು.

ಇನ್ನು ತಿರುಪತಿಯಲ್ಲಿ ಮುಜರಾಯಿ ಇಲಾಖೆಗೆ ಸಂಬಂಧಪಟ್ಟ ಹಾಗೆ ನಮ್ಮದೊಂದು ಛತ್ರ ಇದೆ. ಅಲ್ಲಿರುವ ಪೇಷ್ಕಾರ್ ಅವರೇನೋ ಒಳ್ಳೆಯವರೇ. ಆದರೆ ಅವರು ಯಾರು ಕಾಗದ ಬರೆದರೂ ಜವಾಬೇ ಕೊಡುವುದಿಲ್ಲ. ಒಂದು ಸಾರಿ ನನ್ನ ಕ್ಷೇತ್ರದಿಂದ ಒಂದು ಸ್ಕೂಲಿನ ಉಪಾಧ್ಯಾಯರು, ಮಕ್ಕಳು, ಇಂಥಾ ದಿವಸ ಅಲ್ಲಿಗೆ ಬರುತ್ತಾರೆ, ದಯಮಾಡಿ ಅವರಿಗೆ ಸ್ಥಳ ಒದಗಿಸುವ ವ್ಯವಸ್ಥೆ ಮಾಡಿ, ಅವರೆಲ್ಲರೂ ದೇವರ ಸೇವೆಗೋಸ್ಕರ ಅಲ್ಲಿಗೆ ಬರುತ್ತಿದ್ದಾರೆಂದೂ, ಅವರಿಗೆ ಊಟ ಉಪಚಾರಕ್ಕೂ ಅನುಕೂಲಮಾಡಿಕೊಡಿ ಎಂಬುದಾಗಿ ನಾನು ಕಾಗದ ಬರೆದಿದ್ದಕ್ಕೆ ನನಗೆ ಜವಾಬೇ ಇಲ್ಲ. ಆಗ ನಾನು ಕಾಗದ ಬರೆದಿದ್ದುದು ಅವರಿಗೆ ತಲುಪಿತೋ ಅಥವಾ ಇಲ್ಲವೋ ಎಂದು ಒಂದು ಟೆಲಿಗ್ರಾಂ ಕೊಟ್ಟರೂ ಅದಕ್ಕೂ ಜವಾಬು ಇಲ್ಲ. ಇದಕ್ಕಾಗಿ ನಮ್ಮ ಮೈಸೂರು ಸರ್ಕಾರದಿಂದ ಬೇಕಾದಷ್ಟು ಹಣವನ್ನು ಖರ್ಚುಮಾಡುತ್ತಿದ್ದಾರೆ. ಆದರೂ ಏತಕ್ಕೆ ಹೀಗಾಗುತ್ತದೋ ನನಗಂತೂ ಅರ್ಥವಾಗುತ್ತಾ ಇಲ್ಲ. ಇದರಲ್ಲಿ ಎಲ್ಲೋ ತಪ್ಪಿದೆ. ಇದನ್ನು ಸರಿಮಾಡಬೇಕು. ಬೆಂಗಳೂರಿನಲ್ಲಿ ಒಂದು ರಿಸಪ್‌ಷನ್ ಆಫೀಸು ಉಂಟು. ಆದರೂ ತಕ್ಕ ವ್ಯವಸ್ಥೆ ಸಾಲದು. ಬಂಡೀಪುರಕ್ಕೆ ಹೋಗುವುದಕ್ಕೆ ಮೈಸೂರಿನಿಂದ ಬುಕಿಂಗ್ ಆಫೀಸ್ ಇರುವ ಹಾಗೆ ಇಲ್ಲಿಂದ ಅಲ್ಲಿಗೆ ಹೋಗುವವರಿಗೆ ಬುಕಿಂಗ್ ಆಫೀಸ್ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿ ಮಾಡಿದರೆ ಇವೆಲ್ಲವೂ ಸರಿಹೋಗುತ್ತದೆಂದು ಹೇಳುತ್ತೇನೆ. ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ, ಈ ಬೇಡಿಕೆಗೆ ನನ್ನ ಬೆಂಬಲವನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ವಿ. ಐಕಾಳ (ಸೂರತ್‌ಕಲ್).—ಮಾನ್ಯ ಸದಸ್ಯಣಿಯವರು ಮಾತನಾಡುವಾಗ ಲ್ಯಾಂಡ್ ಅಕ್ವಿಸಿಷನ್ ಆಫೀಸರುಗಳನ್ನು ನೇಮಿಸುವಾಗ ಕುಂಟರು, ಮುದುಕರು, ಕಿವುಡರನ್ನು ನೇಮಕಮಾಡುತ್ತಾರೆಂದು ಹೇಳಿದರು. ಹೃದಯವಿದ್ದವರನ್ನು ಮಾಡಬೇಕು. ಆ ಅಧಿಕಾರಿಗಳಿಗೆ ಒಳ್ಳೆಯ ಹೃದಯವಿದ್ದರೆ ಸಾಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಕಿವುಡರು ಎಂದು ನಾನು ಹೇಳಲಿಲ್ಲ. ಕೆಲಸಕ್ಕೆ ಬಾರದೆ ಇರುವವರನ್ನು ಹಾಕಿದ್ದಾರೆಂದು ನಾನು ಹೇಳಿದ್ದು. ಮಾನ್ಯ ಸದಸ್ಯರು ಏಕೆ ಆರೀತಿ ಭಾವನೆ ಇಟ್ಟುಕೊಂಡರೋ ನನಗೆ ಅರ್ಥವಾಗಲಿಲ್ಲ.

4-30 P.M.

† ಶ್ರೀ ಎಸ್. ಎಸ್. ಶೆಟ್ಟರ್ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ರೆವಿನ್ಯೂ ಡಿಮ್ಯಾಂಡಿನ ಬಗ್ಗೆ ಇರುವಂಥಾ ಬೇಡಿಕೆಯನ್ನು ವಿರೋಧಿಸುತ್ತಾ ನಾನು ಒಂದೆರಡು ಮಾತನ್ನು ಹೇಳಬೇಕಾಗಿದೆ. ಮೈಸೂರು ವಿಲೇಜ್ ಆಫೀಸರ್‍ಸ್ ಅಬಾಲಿಷನ್ ಆಕ್ಟನ್ನು 1961ನೇ ಇಸವಿಯಲ್ಲಿ ಈ ಸಭೆಯಲ್ಲಿ ಪಾಸು ಮಾಡಿದ್ದಾರೆ. ಈ ಕಾನೂನನ್ನು ಪಾಸು ಮಾಡಿದಮೇಲೆ ಈ ನಮ್ಮ ರಾಜ್ಯದಲ್ಲಿರತಕ್ಕ ಪಟೇಲರು, ಶ್ಯಾನುಭೋಗರು ಮತ್ತು ಇತರ ಸಿಬ್ಬಂದಿ ವರ್ಗದವರನ್ನು ರದ್ದುಪಡಿಸಬೇಕಾಗಿದೆ. ಈ ಕಾನೂನಿನ ಒಂದನೇ ಸೆಕ್ಷನ್ ಪ್ರಕಾರ ವಿಲೇಜ್ ಆಫೀಸರುಗಳನ್ನು ತೆಗೆಯುವುದರ ಸಲುವಾಗಿ, ಗೆಜಿಟ್ ನೋಟಿಫಿಕೇಷನ್ ಹೊರಡಿಸಿದ್ದಾರೆ. ಆ ಪ್ರಕಾರ 1-2-1963ಕ್ಕೆ ಅವರ ಸೇವೆಯನ್ನು ಸಮಾಪ್ತಿ ಮಾಡಬೇಕಾಗಿತ್ತು. ಹೈಕೋರ್ಟಿನಲ್ಲಿ ಇದರ ಪ್ರಕರಣ ಹೋಗಿ, ಆ ನಂತರ ಇದರ ಪ್ರಕರಣ ಸುಪ್ರೀಮ್ ಕೋರ್ಟಿಗೆ ಹೋಗಿದ್ದ ಕಾರಣ ಈ ಬಗ್ಗೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಅದು ಈ ರೀತಿ ಇದೆ:

> "Sanction is accorded to the continuance of the posts of patels and inferior village officers for a further period of one year from 1st January 1966 or till the case before the Supreme Court is finally decided and further orders are passed whichever is earlier."

ಎಂದು ಅರ್ಜಿಯನ್ನು ಹೊರಡಿಸಿದ್ದಾರೆ. ಈ ಅರ್ಜಿಯ ಪ್ರಕಾರ ಅವರ ಸೇವೆಯನ್ನು 1-1-66ರವರೆಗೆ ಮಾತ್ರ ಮುಂದುವರಿಸಬೇಕಾಗಿತ್ತು. ಹೈಕೋರ್ಟಿನಲ್ಲಿ ರತಕ್ಕ ಕೇಸು 21-1-1966ರಲ್ಲಿ ವಿಚಾರೆ ಆಯಿತು. 1-2-66ರಲ್ಲಿ ಸರ್ಕಾರ ಅರ್ಜಿಯನ್ನು ಹೊರಡಿಸಿತು. ಈ ಅರ್ಜಿಯ ಪ್ರಕಾರ ವಿಲೇಜ್ ಆಫೀಸರುಗಳ ಸೇವಾ ಸಮಾಪ್ತಿಯನ್ನು ಜಾರಿಗೆ ತರಬೇಕಾಗಿತ್ತು. ಈಗ ನಮ್ಮ ರಾಜ್ಯದಲ್ಲಿ 22 ಸಾವಿರ ವಿಲೇಜ್ ಆಫೀಸರ್ಸ್ ಇದ್ದಾರೆ ಅವರ ಸಂಬಳ ಸಾರಿಗೆ ಗೋಸ್ಕರ ಈಗ ಸರ್ಕಾರದವರು ಈ ಬೇಡಿಕೆಯಲ್ಲಿ 22 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಈ ಹಣವನ್ನು ಸರ್ಕಾರಕ್ಕೆ ಕೊಡುವ ಹಾಗಿಲ್ಲ. ಅವರಿಗೆ ಕೊಡತಕ್ಕದ್ದಲ್ಲ. ಅದರ ಸಲುವಾಗಿ ವಿಲೇಜ್ ಆಫೀಸರ್ಸ್ ಬಗ್ಗೆ ಈ ಬೇಡಿಕೆಯಲ್ಲಿ ಏನು ಮಾಗಣಿ ಮಾಡಿದ್ದಾರೆ ಇದನ್ನು ನಾನು ವಿರೋಧಿಸುತ್ತೇನೆ. ವಿಧಾನ ಸಭೆಯಲ್ಲಿ ಮಾಡಿದಂತಹ ಕಾನೂನಿಗೆ ವಿರುದ್ಧವಾಗಿ ಈ ವಿಲೇಜ್ ಆಫೀಸರುಗಳನ್ನು ಮುಂದುವರಿಸುತ್ತಿದ್ದಾರೆ. ಅದು ತಪ್ಪು. ಈ ರೀತಿ ಮಾಡುವುದಾದರೆ ಈ ಕಾನೂನಿನ ಕಿಮ್ಮತ್ತು ಉಳಿಯುತ್ತದೆಯೇ? ಆದಕಾರಣ ಈ ಬೇಡಿಕೆಗೆ ಒಪ್ಪಿಗೆ ಕೊಡುವುದು ನಮಗೆ ಸರಿಯಾಗಿ ಕಾಣುವುದಿಲ್ಲ.

ಇನ್ನೊಂದು ವಿಚಾರ. ಕೋಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳಿಗೆ ಮೈಸೂರು ಲ್ಯಾಂಡ್ ರಿಫಾರಮ್ಸ್ ಆಕ್ಟಿನ ಚಾಪ್ಟರ್ (7) ಕಲಂ 102ರಲ್ಲಿ Reduction of land revenue, reduction or exemption from agricultural Incometax ಕೊಡಬೇಕೆಂದು ಹೇಳಿದ್ದಾರೆ. ಆದ್ದರಿಂದ ಕೋಆಪರೇಟೀವ್ ಫಾರ್ಮಿಂಗ್ ಸೊಸೈಟಿಗಳಿಗೆ ಲ್ಯಾಂಡ್ ರೆವಿನ್ಯೂ ವಸೂಲು ಮಾಡುವುದಿಲ್ಲ ಎಂದು ಹೇಳಿದರೆ ನಮಗೆ ಸಂತೋಷವಾಗುತ್ತದೆ. ಕನಿಷ್ಟ ಪಕ್ಷ ಎಕ್ರೋಚ್‌ಮೆಂಟ್ ಮಾಡಿದ ಭೂಮಿಗಾದರೂ ಲ್ಯಾಂಡ್ ರೆವಿನ್ಯೂ ರದ್ದು ಮಾಡಿದರೆ ಎಷ್ಟೋ ಸುಧಾರಣೆ ಆದೀತು ಎನಿಸುತ್ತದೆ.

ಇನ್ನು ಲ್ಯಾಂಡ್ ರೆವಿನ್ಯೂ ರೆಕಾರ್ಡಿನಲ್ಲಿ ಯಾವ ಟೆನೆಂಟನ್ನು ನೋಡಿದರೂ ಕೂಡ ಸಬ್ ಟೆನೆಂಟ್ ಬಂದು ಎಲ್ಲಿ ನೋಡಿದರೂ ಕೂಡ ಪ್ರತಿಯೊಂದು ರೆಕಾರ್ಡ್ಸ್ ಆಫ್ ರೈಟ್‌ನಲ್ಲಿ 3ನೇ ಹೆಸರು, ನಾಲ್ಕನೆಯ ಹೆಸರು ಕಂಡುಬರುತ್ತದೆ. ಲ್ಯಾಂಡ್ ರಿಫಾರಮ್ಸ್ ಆಕ್ಟ್ ಬಂದಮೇಲೆ ಅನೇಕ ಕೇಸುಗಳು ಸಿವಿಲ್ ಕೋರ್ಟಿಗೆ ಹೋಗಿವೆ. ಅವುಗಳನ್ನು ಸರಿಯಾದ ರೀತಿಯಲ್ಲಿ ವಿಚಾರ ಮಾಡುವುದಕ್ಕೆ ಅಸ್ಪದವಿಲ್ಲದ ಪರಿಸ್ಥಿತಿ ಉದ್ಭವವಾಗಿದೆ. ಟೆನೆಂಟ್ ಯಾರೋ ಒಬ್ಬರು ಇದ್ದಾರೆ. ಮತ್ತೆ ಅದು ಸಬ್ ಟೆನೆಂಟಿಗೆ ಭೂಮಿ ಬಂದಿದೆ. ಹೀಗಾಗಿ ಈ ಲ್ಯಾಂಡ್ ರಿಫಾರಮ್ಸ್‌ನಲ್ಲಿ ಅನೇಕ ಡಿಸ್‌ಪ್ಯೂಟ್‌ಗಳು ಬಂದಿದೆ. ನಾನಾ ಗೊಂದಲಗಳು ಉಂಟಾಗಿವೆ. ಸುಧಾರಣೆ ಮಾತ್ರ ಏನೂ ಆಗಿಲ್ಲ. ಭೂಮಿಯನ್ನು ಹಂಚಿಕೆ ಮಾಡುವ ವಿಷಯದಲ್ಲಿ ಯಾವ ತತ್ವವನ್ನು ಸರ್ಕಾರದವರು ಅನುಸರಿಸುತ್ತಾರೆ ಎಂಬುದನ್ನು ನಾವು ನೋಡಬೇಕಾಗಿದೆ. ಪ್ರತಿಯೊಬ್ಬರಿಗೂ 18 ಸ್ಟ್ಯಾಂಡರ್ಡ್ ಎಕರೆ ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅಧಿಕಾರ ಇದೆ ಎಂದು ಹೇಳುತ್ತಾರೆ. 18 ಸ್ಟ್ಯಾಂಡರ್ಡ್ ಎಕರೆ ಎಂದರೆ 1·6 ಎಕರೆಗಳಾಗುತ್ತದೆ. ಅಷ್ಟು ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಅಧಿಕಾರ ಕೊಟ್ಟಮೇಲೆ ಜಾಯಿಂಟ್ ಫ್ಯಾಮಿಲಿ ಆಗಿದ್ದರೆ 5 ಜನಗಳಿರತಕ್ಕ ಒಂದು ಅವಿಭಕ್ತ ಕುಟುಂಬಕ್ಕೆ ಮತ್ತೆ 6 ಸ್ಟ್ಯಾಂಡರ್ಡ್ ಎಕರೆ ಜಮೀನು ಇಟ್ಟುಕೊಳ್ಳುವುದಕ್ಕೆ ಅಧಿಕಾರ ಇದೆ. ಯಾವ ವಿಧಾನವನ್ನು ಅನುಸರಿಸಿ ಭೂಮಿ ಇಲ್ಲದವರಿಗೆ ಸರ್ಕಾರದವರು ಭೂಮಿಯನ್ನು ಕೊಟ್ಟಿದ್ದಾರೋ ಗೊತ್ತಿಲ್ಲ. ಇವೊತ್ತಿನ ದಿವಸ ಪರ್ಸನಲ್ ಕಲ್ಟಿವೇಷನ್ ಬಗ್ಗೆ ಏನು ಹೇಳುತ್ತಾರೆಂದರೆ ಯಾರಾದರೂ ಒಬ್ಬ ಮನುಷ್ಯ ಕೂಲಿ ಮಾಡತಕ್ಕ ಮನುಷ್ಯನನ್ನು ಹಚ್ಚಿ ಪರ್ಸನಲ್ ಕಲ್ಟಿವೇಶನ್ ಮಾಡುವುದಕ್ಕೆ ಸಾಧ್ಯವಿದೆ. ವ್ಯಕ್ತಿತಃ ಯಾರು ಸ್ವತಃ ವ್ಯವಸಾಯ ಮಾಡಬೇಕು ಎನ್ನುವುದು ಇದರಲ್ಲಿ ಇಲ್ಲ. ಷಹರಗಳಲ್ಲಿ ಇದ್ದುಕೊಂಡು ಕೂಲಿ ಜನಗಳನ್ನು ವ್ಯವಸಾಯ ಮಾಡಿಸಿ ನಾನು ಸ್ವಂತವಾಗಿ ವ್ಯವಸಾಯ ಮಾಡುತ್ತೇನೆ ಎಂದು ಹೇಳಬಹುದು. ಲ್ಯಾಂಡ್ ರಿಫಾರಮ್ಸ್ ಸಂಬಂಧಪಟ್ಟಂತೆ ಯದ್ವಾತದ್ವಾ ಮಾಡಿ ಕಾನೂನನ್ನು ಮಾಡಿದ್ದಾರೆ. ಇದನ್ನೆಲ್ಲಾ ಸುಧಾರಣೆ ಮಾಡಿ ಸರಿಯಾದ ರೀತಿಯಲ್ಲಿ ಭೂಸುಧಾರಣಾ ಕಾನೂನನ್ನು ಜಾರಿಗೆ ತರದೇ ಹೋದರೆ ಇದರಿಂದ ಜನಗಳಿಗೆ ಕಲ್ಯಾಣವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಮುಖ್ಯವಾಗಿ ನಾನು ಕೇಳಿಕೊಳ್ಳುವುದೇನೆಂದರೆ, ಲ್ಯಾಂಡ್ ರಿಫಾರಮ್ಸ್ ಆಕ್ಟ್ ಬಗ್ಗೆ ಸಾಕಷ್ಟು ಯೋಗ್ಯವಾದ ನೀತಿಯನ್ನು ಅನುಸರಿಸಿ, ಈಗ ಏನು ಬಂದು ಸಂದಿಗ್ಧ ಪರಿಸ್ಥಿತಿ ಉದ್ಭವವಾಗಿದೆ ಅದನ್ನು ಸರಿಪಡಿಸಬೇಕು. ರಾಷ್ಟ್ರಪತಿಯವರು ಸಹ ಈ ಬಗ್ಗೆ ಇನ್ನೂ ಒಪ್ಪಿಗೆ ಕೊಟ್ಟಿಲ್ಲವಾದ್ದರಿಂದ, ರಾಷ್ಟ್ರಪತಿಯವರಲ್ಲಿ ಮತ್ತೊಮ್ಮೆ ವಿನಂತಿಮಾಡಿಕೊಂಡು ಈ ಕಾನೂನನ್ನು ಜಾರಿಗೆ ತರಲು ಒಪ್ಪಿಗೆ ಪಡೆದುಕೊಳ್ಳಬೇಕೆಂದು ಸರ್ಕಾರದವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

[MR. CHAIRMAN (SRI S. D. KOTHAVALE) in the Chair].

ಇನ್ನು ಮುಖ್ಯವಾದ ಮೂರನೆಯ ವಿಷಯವೆಂದರೆ, ಕೋ-ಅಪರೇಟಿವ್ ಸೊಸೈಟಿಗಳು ಮತ್ತು ಬ್ಯಾಂಕ್‌ಗಳು ಏನಿವೆ, ಅವುಗಳಲ್ಲಿ ಜನರು ಆಸ್ತಿಯಮೇಲೆ ಸಾಲ ಪಡೆಯಬೇಕಾದರೆ 5 ಸಾವಿರ ರೂಪಾಯಿಗಳ ಮಟ್ಟಿಗೆ ಇದ್ದರೆ ಸ್ಟಾಂಪ್ ಖರ್ಚನ್ನು ಕೊಡಬೇಕಾಗಿಲ್ಲ. ಆದರೆ ಇಲ್ಲೂ ಸಹ ಭ್ರಷ್ಟಾಚಾರ ನಡೆಯುವುದಕ್ಕೆ ಪ್ರಾರಂಭವಾಗಿದೆ. ಒಂದು ಸಾರಿ ಆಸ್ತಿಯಮೇಲೆ 5 ಸಾವಿರ ರೂಪಾಯಿ ಸಾಲ ತೆಗೆದುಕೊಂಡು ಪುನಃ 2-3 ವರ್ಷಗಳಾದ ನಂತರ ಮತ್ತೆ 3 ಸಾವಿರ ರೂಪಾಯಿಗಳನ್ನು ಸಾಲ ತೆಗೆದುಕೊಳ್ಳುವುದಕ್ಕೆ ಹೋದರೆ, ಹಿಂದಿನ ಸಾಲವನ್ನು ಸೇರಿಸಿ 8 ಸಾವಿರ ರೂಪಾಯಿಗಳಿಗೆ ಸ್ಟಾಂಪ್ ಖರ್ಚನ್ನು ಕೊಡಬೇಕೆಂದು ಕೇಳುತ್ತಾರೆ. ಯಾರು ಲಂಚವನ್ನು ಕೊಡುತ್ತಾರೋ ಅಂತಹವರಿಗೆ ಮಾತ್ರ ವಿನಾಯಿತಿ ಸಿಗುತ್ತಿದೆ. ಈ ಒಂದು ಭ್ರಷ್ಟಾಚಾರ ಪ್ರತಿಯೊಂದು ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲೂ ನಡೆಯುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಆದ್ದರಿಂದ ಮೊದಲಿನ 5 ಸಾವಿರ ರೂಪಾಯಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ 3 ಸಾವಿರ ರೂಪಾಯಿಗಳಿಗೆ ಮಾತ್ರ ಸ್ಟಾಂಪ್ ಖರ್ಚನ್ನು ತೆಗೆದುಕೊಳ್ಳುವುದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ಸರ್ಕಾರಕ್ಕೆ ಸೂಚನೆ ಕೊಡುತ್ತೇನೆ.

ಇನ್ನೊಂದು ವಿಷಯವೆಂದರೆ, ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲಿ ನಕಲು ಕಾಪಿ ಬೇಕಾದರೆ ಎರಡು ವರ್ಷವಾದರೂ ಸಹ ಸಿಗುವುದಿಲ್ಲ. ಮೊದಲು ಈ ಬಗ್ಗೆ ಫೋಟೋ ಸಿಸ್ಟಂ ಇತ್ತು. ಈಗ ಫೋಟೋ ಸಿಸ್ಟಂನ್ನು ರದ್ದು ಮಾಡಿದ್ದಾರೆ. ಕಾಗದ ರಿಜಿಸ್ಟರ್ ಆದಮೇಲೆ 15 ದಿವಸ ಅಥವಾ ಒಂದು ತಿಂಗಳಲ್ಲಿ ನಕಲು ಕಾಪಿ ಸಿಗುವಂತೆ ತಕ್ಕ ಏರ್ಪಾಡನ್ನು ಸರ್ಕಾರದವರು ಮಾಡಬೇಕು. ಈಗ ಎರಡು ವರ್ಷವಾದರೂ ಸಹ ನಕಲು ಕಾಪಿ ಸಿಗುತ್ತಿಲ್ಲ. ಒಬ್ಬರು ಸಬ್-ರಿಜಿಸ್ಟ್ರಾರ್ ಅವರು (ಅವರ ಹೆಸರನ್ನು ಇಲ್ಲಿ ಹೇಳುವುದಕ್ಕೆ ಅವಕಾಶವಿಲ್ಲ) ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟರು. ಈಗ ಮತ್ತೆ ಕೆಲಸಕ್ಕೆ ಬಂದಿದ್ದಾರೆ. ಯಾವ ರೀತಿಯಿಂದ ಅವರು ಪುನಃ ಕೆಲಸಕ್ಕೆ ಬರಲು ಸಾಧ್ಯವಾಯಿತೆಂಬುದು ಆಶ್ಚರ್ಯವಾಗಿದೆ. ಅಲ್ಲದೆ ಅವರಿಗೆ ಹಿಂದಿನ ಸಂಬಳವನ್ನು ಸಹ ಸರ್ಕಾರದವರು ಕೊಟ್ಟಿದ್ದಾರೆ. ಇದೇ ರೀತಿ ರಾಜೀನಾಮೆ ಕೊಟ್ಟಿದ್ದ ಒಬ್ಬ ಡಾಕ್ಟರನ್ನು ವಾಪಸ್ ಕೆಲಸಕ್ಕೆ ತೆಗೆದುಕೊಂಡು ಹಿಂದಿನ ಪಗಾರವನ್ನು ಕೊಟ್ಟಿದ್ದಾರೆಂದು ಕೇಳಿದ್ದೇನೆ. ರಾಜೀನಾಮೆ ಕೊಟ್ಟು ಪುನಃ ಕೆಲಸಕ್ಕೆ ಬರುವವರಿಗೆ ಹಿಂದಿನ ಪಗಾರವೆಲ್ಲಾ ಸಿಗುತ್ತಿದೆ. ಆದರೆ ಯಾರು ಹೆಚ್ಚಿನ ತುಟ್ಟಿಭತ್ಯ ಬೇಕೆಂದು ಚಳುವಳಿ ಮಾಡುತ್ತಾರೋ, ಸತ್ಯಾಗ್ರಹ ಮಾಡುತ್ತಾರೋ ಅಂಥವರಿಗೆ ಯಾವ ರೀತಿಯ ಅನುಕೂಲಗಳೂ ಸಿಗುತ್ತಿಲ್ಲ. ಈ ಸರ್ಕಾರದಲ್ಲಿ ಯಾರು ಸರಿಯಾಗಿ ಕೆಲಸ ಮಾಡಿಕೊಂಡು ಹೋಗುತ್ತಿರುತ್ತಾರೋ ಅಂಥವರಿಗೆ ಸರಿಯಾದ ಸಂಬಳ ಸಿಗುತ್ತಿಲ್ಲ, ಯಾರು ರಾಜೀನಾಮೆಯನ್ನು ತಮಗೆ ಇಷ್ಟಬಂದಾಗ ಕೊಟ್ಟು, ಇಷ್ಟಬಂದಾಗ ಮತ್ತೆ ಕೆಲಸಕ್ಕೆ ಬರುತ್ತಾರೋ ಅಂಥವರಿಗೆ ಹಿಂದಿನ ಪಗಾರ ಕೂಡ ಸಿಗುತ್ತದೆ. ಒಂದು ಊರಿಗೆ (ಹೆಸರು ಹೇಳುವುದಿಲ್ಲ) ನನ್ನನ್ನು ಸಬ್-ರಿಜಿಸ್ಟ್ರಾರ್ ಆಗಿ ನೇಮಕ ಮಾಡಿ, ಹೋಗುತ್ತೇನೆಂದು ಅನೇಕ ಜನರು ಸರ್ಕಾರಕ್ಕೆ ಕೇಳಿಕೊಳ್ಳುತ್ತಿದ್ದಾರೆ. ಏಕೆಂದರೆ ಆ ಊರಿನಲ್ಲಿರುವ ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಕೆಳಗಿನಿಂದ ಮೇಲಿನವರೆಗೂ ಭ್ರಷ್ಟಾಚಾರ ನಡೆಯುತ್ತಿದೆ. ಸರ್ಕಾರದ ಅಧಿಕಾರಿಗಳ ವರ್ಗಾವರ್ಗಿಯಲ್ಲೂ ಸಹ ಅನೇಕ ರೀತಿಯಿಂದ ಭ್ರಷ್ಟಾಚಾರ ನಡೆಯುತ್ತಿದೆಯೆಂದು ಕೇಳಿದ್ದೇನೆ. ಸರ್ಕಾರದವರೇನಾದರೂ ಈ ಭ್ರಷ್ಟಾಚಾರವನ್ನು ನಿರ್ಮೂಲ ಮಾಡದಿದ್ದರೆ ಸಾಮಾನ್ಯ ಜನರಿಗೆ ಬಹಳ ತೊಂದರೆಯಾಗುತ್ತದೆಂದು ಹೇಳುತ್ತೇನೆ.

ಇನ್ನು ಕೋರ್ಟ್ ಸ್ಟಾಂಪ್ ಸಿಗುವುದು ಬಹಳ ಕಷ್ಟವಾಗಿದೆ. ಹೋದ ವರ್ಷ ಕೂಡ ಇದೇ ವಿಚಾರವನ್ನು ಹೇಳಿದ್ದೆ. ಎಷ್ಟೋ ಸಲ ಸರಿಯಾದ ಸ್ಟಾಂಪ್ ಪೇಪರ್ ಸಿಗದೆ ಹೆಚ್ಚಿನ ಬೆಲೆಯ ಸ್ಟಾಂಪ್ ಪೇಪರ್ ಮೇಲೆ ಕಾಗದ ಬರೆಸುತ್ತಿದ್ದಾರೆ. ಸ್ಟಾಂಪ್‌ನ ಕೊರತೆ ಇರಬಾರದು. ಇದರಿಂದ ಸರ್ಕಾರಕ್ಕೆ ಹೆಚ್ಚಿನ ರೊಕ್ಕ ಬರುವುದರಿಂದ, ಸ್ಟಾಂಪ್‌ನ ಕೊರತೆಯಾಗದಂತೆ ಮುಂಜಾಗ್ರತೆ ಕ್ರಮ ತೆಗೆದುಕೊಂಡು ಎಲ್ಲಾ ಬೆಲೆಯ ಸ್ಟಾಂಪ್ ಪೇಪರ್‌ಗಳು ಸಿಗುವಂತೆ ಏರ್ಪಾಡು ಮಾಡಬೇಕು. ಈ ಬಗ್ಗೆ ಸ್ಟಾಂಪ್ ಪೇಪರ್ ಸಿಗದಿದ್ದರೆ ಬಿಳಿಯ ಕಾಗದದ ಮೇಲೆ ಬರೆಸಿ ಸಂಬಂಧಪಟ್ಟ ಆಫೀಸರ್ ಅವರಿಂದ ಸ್ಟಾಂಪ್ ಹೊಡೆಸಬಹುದೆಂದು ಸರ್ಕಾರದವರು ಹಿಂದೆ ಒಂದು ಆರ್ಡರ್ ಹೊರಡಿಸಿದ್ದಾರೆ. ಆದರೆ ಜನರು ಇದಕ್ಕೆ ಗೌರವ ಕೊಡುತ್ತಿಲ್ಲವಾದ್ದರಿಂದ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಸಾಕಷ್ಟು ಸ್ಟಾಂಪ್ ಪೇಪರ್ ತರಿಸುವುದಕ್ಕೆ ಪರಿಣಾಮಕಾರಿಯಾದ ಏರ್ಪಾಡನ್ನು ಸರ್ಕಾರದವರು ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳಿಗೆ ಉತ್ತರ ಕೊಡಲು ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಬಿ. ರಾಚಯ್ಯ.—ಸುಮಾರು ಒಂದು ಗಂಟೆ ಕಾಲ ಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಸ್ವಾಮಿ, ಇದು ಬಹಳ ಮುಖ್ಯವಾದಂಥ ಡಿಮ್ಯಾಂಡ್ ಆದ್ದರಿಂದ ಇವತ್ತು 7 ಗಂಟೆಯುವರೆಗೆ ಸದಸ್ಯರುಗಳು ಮಾತನಾಡುವುದಕ್ಕೆ ಅವಕಾಶ ಕೊಟ್ಟು ನಾಳೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರೆ ಬಹಳ ಅನುಕೂಲವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಬಹಳ ಜನ ಮಾತನಾಡುವವರು ಈಕಡೆ ಮತ್ತು ಆಕಡೆ ಇದ್ದಾರೆ. ನಾಳೆ ಬರತಕ್ಕಂಥ ಹೆಲ್ತ್ ಡಿಮ್ಯಾಂಡ್‌ಗೆ ಒಂದೂವರೆ ಗಂಟೆ ಕಮಿಯಾದರೂ ಸರಿಯೆ, ಈ ಡಿಮ್ಯಾಂಡ್‌ಗೆ ಮಾತ್ರ ಒಂದೂವರೆ ಗಂಟೆ ಕಾಲ ಹೆಚ್ಚು ಸಮಯ ಕೊಟ್ಟರೆ ಒಳ್ಳೆಯದು.

ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಆ ಕಡೆ ಮತ್ತು ಈ ಕಡೆ ಮಾತನಾಡುವ ಸದಸ್ಯರುಗಳು ಜಾಸ್ತಿ ಇದ್ದರೂ ಸಹ ಈ ಡಿಮ್ಯಾಂಡನ್ನು ಈ ದಿನವೇ ಮುಗಿಸುವುದು ಒಳ್ಳೆಯದು. ಮಾನ್ಯ ಮಂತ್ರಿಗಳು 5-30 ಗಂಟೆಗೆ ಉತ್ತರ ಕೊಡಲು ಪ್ರಾರಂಭ ಮಾಡಿ 7 ಗಂಟೆಗೆ ಮುಗಿಸಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಷ್ಟೊಂದು ಅಲಕ್ಷ್ಯ ಮಾಡಿದರೆ ಹೇಗಾಗುತ್ತದೆ? ಒಟ್ಟು ಕಾಲದಲ್ಲಿ ಏನೂ ವ್ಯತ್ಯಾಸವಾಗುವುದಿಲ್ಲ. ನಾಳೆಯ ಡಿಮ್ಯಾಂಡ್‌ಗೆ ಒಂದೂವರೆ ಗಂಟೆ ಕಾಲ ಕಡಿಮೆ ಮಾಡಿ ಈ ಡಿಮ್ಯಾಂಡ್‌ಗೆ ಒಂದೂವರೆ ಗಂಟೆ ಕಾಲ ಹೆಚ್ಚು ಸಮಯ ಕೊಡಿ ಎಂದು ನಾನು ಕೇಳುತ್ತಿರುವುದು.

ಉಪಾಧ್ಯಕ್ಷರು.—ನಾಳೆಯ ಬೇಡಿಕೆಗಳ ಕಾಲದಲ್ಲಿ ಸರಿಹೊಂದಿಸಿಕೊಳ್ಳುವುದಾದರೆ ಆಗಬಹುದು. ನಾಳೆ ಮಂತ್ರಿಗಳು ಉತ್ತರ ಕೊಡಲಿ. ಈ ದಿನ 7 ಗಂಟೆಯುವರೆಗೆ ಮಾನ್ಯ ಸದಸ್ಯರುಗಳು ಮಾತನಾಡಲಿ.

†ಶ್ರೀ ಎಸ್. ಭೀಮಣ್ಣ (ಭಾಲ್ಕಿ)—ಮಾನ್ಯ ಸಭಾಪತಿಯವರೇ, ಪ್ರತಿ ವರ್ಷ ಸರ್ಕಾರದವರು ಆಯವ್ಯಯದ ಅಂದಾಜು ಪಟ್ಟಿಯನ್ನು ಅಸೆಂಬ್ಲಿಯ ಮುಂದೆ ತರುತ್ತಾರೆ, ಡಿಮ್ಯಾಂಡುಗಳನ್ನು ತರುತ್ತಾರೆ, ಮತ್ತು ಈ ಸಭೆಯು ಟೀಕೆ ಟಿಪ್ಪಣಿಗಳನ್ನು ಮಾಡಿ ಒಪ್ಪುತ್ತಾರೆ ಮತ್ತು ಕೆಲಸ ನಡೆಯುತ್ತಿದೆ. ಆದರೂ ನಾನು ವಿಷಾದದಿಂದ ಹೇಳುವುದೇನೆಂದರೆ, ನಾವು ಮಾಡಿದಂತಹ ಟೀಕೆ ಟಿಪ್ಪಣಿಗಳ ಮೇಲೆ ಸರ್ಕಾರದವರು ಎಷ್ಟುಮಟ್ಟಿಗೆ ಅದನ್ನು ವಿಚಾರ ಮಾಡಿ ಕಾರ್ಯಗತ ಮಾಡುತ್ತಾರೆಂದು ನೋಡಿದರೆ, ಅದು ಬಹಳ ಸಂಶಯಾಸ್ಪದವಾಗಿದೆ. ಏಕೆಂದರೆ ಎಷ್ಟೋ ಹೇಳುತ್ತೇವೆ, ಅದರಲ್ಲಿ ಸತ್ಯಾಂಶ ಇದ್ದರೂ, ಅದು ನಮ್ಮ ಪಕ್ಷದವರದ್ದೇ ಆಗಲಿ, ವಿರೋಧ ಪಕ್ಷದ್ದೇ ಆಗಲಿ, ಅವುಗಳು ಎಷ್ಟು ಮಹತ್ವದ್ದು ಇವೆ, ಅವುಗಳಿಗೆ ಗಮನ ಕೊಟ್ಟು ಸರಿಪಡಿಸಬೇಕು ಮತ್ತು ಈಗಲಾದರೂ ಅದನ್ನು ಮಾಡಿದ್ದಾರೆಯೇ ಎಂದು ನೋಡಿದರೆ, ಅದು ಕೂಡ ಆಶಾದಾಯಕವಾಗಿ ಇಲ್ಲವೆಂದು ಹೇಳಬೇಕಾಗಿದೆ. ಈಗ ಡಿಮ್ಯಾಂಡ್ ಏನು ತಂದಿದ್ದಾರೆ, ಅದಕ್ಕೆ ನಾನು ಸಮರ್ಥನೆ ಮಾಡಿದರೂ, ಅದರಲ್ಲಿ ಏನು ನ್ಯೂನತೆಗಳಿವೆ, ಎಷ್ಟುಮಟ್ಟಿಗೆ ಮಾಡುತ್ತಾ ಇಲ್ಲ ಎಂಬುದನ್ನು ಹೇಳಬೇಕಾಗಿದೆ; ಈ ರೀತಿ ಹೇಳುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ. 1956ರ ನಂತರ ನಾವು ಸಮಾಜವಾದ ರಚನೆ ಮಾಡಬೇಕು, ಒಂದು ವೆಲ್‌ಫೇರ್ ಸ್ಟೇಟನ್ನು ಕಟ್ಟಬೇಕು ಎಂದು ಏನು ನಮ್ಮ ಸರ್ಕಾರದವರು ಹೇಳುತ್ತಿದ್ದರು, ಆ ವಿಚಾರದಲ್ಲಿ ಈವರೆಗೆ ಏನಾಗಿದೆ, ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಇವೆಲ್ಲಾ ನೋಡಿದರೆ, ಯಾವುದು ಒಂದೂ ಆಶಾದಾಯಕವಾಗಿಲ್ಲವೆಂದು ಸ್ಪಷ್ಟವಾಗಿ ಕಾಣುತ್ತದೆ. ಇವತ್ತು ಬಜೆಟ್ ಇಡುವಾಗ, ಸಮಾಜವಾದದ ಮಾತು ಆಡುವಾಗ, ಯಾವ ಪ್ರದೇಶದಲ್ಲಿ ದೊಡ್ಡ ರೊಕ್ಕದವರು ಇದ್ದರು, ಯಾವ ಪ್ರದೇಶದಲ್ಲಿ ಬಡವರು ಇದ್ದರು, ಈಗಲೂ ಪರಿಸ್ಥಿತಿ ಅದೇ ಪ್ರಕಾರವಾಗಿ ಈ ರಾಜ್ಯದಲ್ಲಿ ಇದೆ. ಒಂದು ಭಾಗ ಮಾಡುವ ಖರ್ಚು ಹೆಚ್ಚಿರುತ್ತದೆ, ಅವರ ಸೌಕರ್ಯ ಹೆಚ್ಚಾಗಿ ಇರುವಾಗ ಮತ್ತೊಂದು ಕಡೆ ಹಿಂದುಳಿದ ಭಾಗದ ಪರಿಸ್ಥಿತಿ ನೋಡಿದರೆ, ಸರಿಸಮಾನವಾಗಿ ಮಾಡಲು 10 ವರ್ಷಗಳಿಂದಲೂ ಸರ್ಕಾರದವರು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ಎಂದು ನೋಡಿದರೆ, ಏನೂ ಮಾಡಿಲ್ಲವೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಮೈಸೂರು ದೇಶದಲ್ಲಿ 5 ಭಾಗಗಳವರು ಬಂದನಂತರ ಕೇಂದ್ರ ಸರ್ಕಾರದ ಗೆಜೆಟ್ ನೋಡಿದರೆ, ಬಿದಾರ್ ಜಿಲ್ಲೆಯನ್ನು ಬ್ಯಾಕ್‌ವರ್ಡ್ ಏರಿಯಾ ಎಂದು ಘೋಷಣೆ ಮಾಡಿದ್ದಾರೆ. ಇದರ ಜೊತೆಗೆ ಬೇರೆ ಮಲೆನಾಡುಗಳೂ ಇವೆ. ಇಲ್ಲಿ ಸರ್ಕಾರದವರು 56 ರಿಂದ 68ರ ವರೆಗೆ ಏನು ಕೆಲಸ ಮಾಡಿದ್ದಾರೆ ಎಂದು ನೋಡಿದರೆ, ವಾಸ್ತವಿಕವಾಗಿ ಸರಿಸಮಾನವಾಗಿ ಮಾಡಬೇಕಾಗಿತ್ತು, ಆದರೆ ಮಾಡಲಿಲ್ಲವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ನೀರಾವರಿ ತೆಗೆದು

(ಶ್ರೀ ಎಸ್. ಭೀಮಣ್ಣ)

ಕೊಳ್ಳಿ, ವಾಟರ್ ಸಪ್ಲೈ ತೆಗೆದುಕೊಳ್ಳಿ, ಸಮಾಜಿಕ ಕ್ಷೇತ್ರ ತೆಗೆದುಕೊಳ್ಳಿ, ವಿದ್ಯಾಭ್ಯಾಸ ಕ್ಷೇತ್ರವಾಗಲಿ, ಯಾವುದಾದರೂ ತೆಗೆದುಕೊಂಡರೂ ಎಷ್ಟು ಅಭಿವೃದ್ಧಿಯಾಗಬೇಕೋ, ಅಷ್ಟು ಆಗಿಲ್ಲ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇಷ್ಟೆಲ್ಲಾ 10 ವರ್ಷಗಳಿಂದಲೂ ಗೊತ್ತಿದ್ದರೂ ಯಾವುದಾದರೂ ಡೆವಲಪ್‌ಮೆಂಟ್ ಬೋರ್ಡ್ಸ್ ಮಾಡಿದ್ದಾರೋ, ಸ್ಪೆಶಲ್ ಫಂಡ್ ಏನಾದರೂ ಕೊಟ್ಟಿದ್ದಾರೊ ! ಅಥವಾ ಹಿಂದುಳಿದ ಪ್ರದೇಶವನ್ನು ಮುಂದೆ ತರುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದಾರೋ ಎಂದು ನೋಡಿದರೆ ಏನೂ ಇಲ್ಲ. ಮಾನ್ಯ ಅರ್ಥ ಮಂತ್ರಿಯವರು ಭಾಷಣದಲ್ಲಿ ಹೇಳಿದರು ಒಕ್ಕಲಿಗರು ಇಂದು 600 ಕೋಟಿ ರೂಪಾಯಿ ಸಂಪತ್ತನ್ನು ಬೆಳೆಯುತ್ತಿದ್ದಾರೆ, ಅವರಿಗೆ ಸರಿಯಾದ ಟ್ಯಾಕ್ಸ್ ಹಾಕುವುದನ್ನು ಯೋಚನೆ ಮಾಡಬೇಕು ಎಂದು. ಈ ಮಾತು ಬಹಳ ವಿಷಾದವನ್ನು ಉಂಟುಮಾಡುತ್ತದೆ. ಇಂದು ಡೆವಲಪ್‌ಮೆಂಟ್ ಅಂದರೆ, ಅದು ಸಮಸಮಾನವಾಗಿ ಇರಬೇಕು. ಸಮಾಜವಾದದ ನೀತಿ ಏನು ಇದೆ, ಅದರ ಪ್ರಕಾರ ಎಲ್ಲಾ ಪ್ರದೇಶಗಳಿಗೂ ಒಂದೇ ಸಮಾನವಾದ ರೀತಿಯಲ್ಲಿ ಅಭಿವೃದ್ಧಿಯನ್ನು ಮಾಡಬೇಕು. ಇವತ್ತು ನೋಡಿದರೆ ಒಂದು ಸಾವಿರ ಪಾಲು ವ್ಯತ್ಯಾಸ ಇದೆ. ನೀವು ಬೇಕಾದರೆ ಎಲ್ಲವನ್ನೂ ಹೋಲಿಸಿ ನೋಡಿರಿ. ಹಳ್ಳಿಗಳನ್ನು ಪಟ್ಟಣಗಳನ್ನು, ರೂರಲ್ ಏರಿಯಾಗಳನ್ನು, ಅರ್ಬನ್ ಏರಿಯಾಗಳನ್ನು ಹೋಲಿಸಿ ನೋಡಿದರೆ, ಅವರೂ ಟ್ಯಾಕ್ಸ್ ಕೊಡುತ್ತಾರೆ, ಇವರೂ ಟ್ಯಾಕ್ಸ್ ಕೊಡುತ್ತಾರೆ. ಆದರೆ ಇಲ್ಲಿ ಸೌಲಭ್ಯ ಎಷ್ಟು ಇದೆ, ಹಳ್ಳಿಗಳಲ್ಲಿ ಎಷ್ಟು ಇದೆ. ಹಳ್ಳಿಗಳಲ್ಲಿ ಅವರು 24 ಗಂಟೆಗಳ ಕಾಲ ದುಡಿಯುತ್ತಾರೆ, ಒಂದೆರಡು ಸಾರಿ ಊಟ ಮಾಡುತ್ತಾರೆ. ಅವರಿಗೆ ನಿಮ್ಮ ಅನೇಕ ರೀತಿಯ ಭೋಜನಗಳು ಸಿಗುವುದಿಲ್ಲ, ವಾಹನ ಸೌಕರ್ಯವೂ ಇಲ್ಲ, ಯಾವುದೂ ಇಲ್ಲ. ಇದನ್ನೆಲ್ಲಾ ನೋಡಿದರೆ ತುಂಬಾ ವ್ಯತ್ಯಾಸ ಕಾಣುತ್ತದೆ. ಇವತ್ತು 10-20 ಎಕರೆ ಜಮೀನು ಇರುವ ಒಬ್ಬನ ಒಂದು ಸಂಸಾರವನ್ನು ತೆಗೆದುಕೊಂಡರೆ, ಅವನಿಗೆ ಸಾಧಾರಣ 3-4 ಸಾವಿರ ರೂಪಾಯಿಯ ಆದಾಯ ಕೂಡ ಬರುವುದಿಲ್ಲ. ಅವನಿಗೆ ಅವನ ಮಗನನ್ನು ಓದಿಸುವುದಕ್ಕೂ ಸಾಧ್ಯವಿಲ್ಲ. ಅದೇ ರೀತಿ ಒಬ್ಬ ಅರ್ಬನ್ ಏರಿಯಾದಲ್ಲಿ ಇವನನ್ನು ತೆಗೆದುಕೊಳ್ಳಿ. ಒಬ್ಬ ಕದೀಮನ ರೀತಿಯಲ್ಲಿ ಒಂದು ಲಕ್ಷ ರೂಪಾಯಿಯನ್ನು ಸಂಪಾದನೆ ಮಾಡುತ್ತಾನೆ. ಅವನು ಸಂಪಾದನೆ ಮಾಡಬೇಕಾದರೂ ಅದು ಬರಬೇಕು ಹಳ್ಳಿಯಿಂದ, ರೈತನು ಬೆವರು ಸುರಿಸಿ ಉತ್ಪಾದನೆ ಮಾಡಿದುದರಿಂದ. ಆದ್ದರಿಂದ ಬೆಳೆಸುವವನಿಗೆ ಬೇಕಾದ ಮಾಹಿತಿ ಮತ್ತು ಸೌಕರ್ಯಗಳನ್ನು ಮೊದಲನೆಯದಾಗಿ ಕೊಡಬೇಕು. ಅವನು ಬೆಳೆ ಮಾಡಿಕೊಡದಿದ್ದರೆ, ಇವರು ಏನು ಸೌಕರ್ಯವನ್ನು ಕೊಡಲು ಸಾಧ್ಯ? ಹಳ್ಳಿಯವರಿಗೂ ಅಗ್ರಿಕಲ್ಚರಲ್ ಟ್ಯಾಕ್ಸ್ ಎಂದು ಹಾಕುತ್ತಾರೆ. ಆದರೆ ಏನೂ ಸೌಲಭ್ಯವಿಲ್ಲ. ಇವತ್ತು ಬಿದಾರ್ ಜಿಲ್ಲೆಯಲ್ಲಿ ಸೇಕಡ 2 ರಷ್ಟು ಜನ ಮಾತ್ರ ಮೆಟ್ರಿಕ್ ಪಾಸ್ ಮಾಡಿದವರು ಇದ್ದಾರೆ. ಅದೇ ರೀತಿ ಬೆಂಗಳೂರು, ಬೆಳಗಾಂ, ಹಾಗೂ ಇನ್ನಿತರ ದೊಡ್ಡ ಊರುಗಳನ್ನು ಹೋಲಿಕೆ ಮಾಡಿ ನೋಡಿ. ನಾಗರತ್ನಮ್ಮನವರು ಕುರುಡರ ವಿಚಾರವಾಗಿ ಮಾತನಾಡಿದರು. ನಮ್ಮಲ್ಲಿ ಒಬ್ಬ ಹುಚ್ಚು ಹೆಡ್‌ಮಾಸ್ಟರನ್ನು ಕಳಿಸಿದ್ದಾರೆ. ಅವರನ್ನು ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಿ ಎಂದು ಕೇಳಿದರೆ, ಅವರು ನನ್ನನ್ನು ಕೇಳುತ್ತಾರೆ ಅವನನ್ನು ತೆಗೆದು ಎಲ್ಲಿಗೆ ಹಾಕಬೇಕು ಎಂದು. ಇದು ಬಹಳ ವಿಷಾದದಿಂದ ಹೇಳುವ ವಿಚಾರ. ನೀವು ಇದಕ್ಕೆ ಸರಿಯಾದ ಗಮನವನ್ನು ಕೊಡುತ್ತಿಲ್ಲ.

ಇವತ್ತು ಕಾರಂಜಿ ಪ್ರೊಜೆಕ್ಟ್ ತೆಗೆದುಕೊಳ್ಳಿ ಎಂದು ಹೇಳಿದರೆ, ಯಾರೂ ಮನಸ್ಸು ಮಾಡುವುದಿಲ್ಲ. ಒಂದೊಂದು ಕಡೆ 10-25 ಪ್ರೊಜೆಕ್ಟ್ ತೆಗೆದುಕೊಳ್ಳುತ್ತಾರೆ. ಒಂದೂ ಸ್ಕೀಮ್ ಬೀದಾರ್ ಜಿಲ್ಲೆಯಲ್ಲಿ ತೆಗೆದುಕೊಂಡಿಲ್ಲ. ಸರ್ಕಾರದವರು ಸಮಾಜವಾದಿ ಸಮಾಜ ಕಟ್ಟಬೇಕು, ಅಭಿವೃದ್ಧಿಮಾಡಬೇಕು ಎಂದಿದ್ದರೆ, ಟ್ಯಾಕ್ಸ್ ಸರಿಯಾಗಿ ತೆಗೆದುಕೊಳ್ಳಿ ಮತ್ತು ಅದನ್ನು ಸರಿಸಮಾನವಾಗಿ ಖರ್ಚು ಮಾಡಿ. ಆದರೆ ಈ ದೃಷ್ಟಿಯಿಂದ ಬಜೆಟ್ ನೋಡಿದರೆ ಬಹಳ ಶೋಚನೀಯವಾಗುತ್ತದೆ. ಲ್ಯಾಂಡ್ ರೆವೆನ್ಯೂ ಕಡೆಯಿಂದ ಸರಕಾರಕ್ಕೆ ರೊಕ್ಕ ಬರುತ್ತಿದೆ, ಹಾಗೂ ಲೋಕಲ್ ಸೆಸ್ಸು, ಹೆಲ್ತ್ ಸೆಸ್ಸು, ಮುನಿಸಿಪಲ್ ಟ್ಯಾಕ್ಸ್, ಅಕ್ಸಾಯಿ, ಎಜುಕೇಷನ್ ಸೆಸ್ಸು, ಸೇಲ್ಸ್ ಟ್ಯಾಕ್ಸ್, ಡೈರೆಕ್ಟ್ ಹಾಗೂ ಇಂಡೈರೆಕ್ಟ್ ಟ್ಯಾಕ್ಸು ಹಾಗೂ ಬೆಟರ್‌ಮೆಂಟು ಟ್ಯಾಕ್ಸು ಕೊಡುತ್ತಾರೆ, ಮಾರ್ಕೆಟಿಂಗ್ ಫೀಸು ಕೊಡುತ್ತಾರೆ ಹಾಗೂ ಇನ್ನೂ ಇತರ ಫೀಸುಗಳನ್ನೂ ಕೊಡುತ್ತಿದ್ದಾರೆ, ಅಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸ್ ಕೊಡುತ್ತಿದ್ದಾರೆ ಹಾಗೇ ಸ್ಟಾಂಪು ಮತ್ತು ರಿಜಿಸ್ಟ್ರೇಷನ್ ಫೀಸ್‌ಗಳನ್ನು ವಸೂಲು ಮಾಡುತ್ತಿದ್ದಾರೆ. ಇವೆಲ್ಲವನ್ನೂ ಹಳ್ಳಿಗಾಡಿನ ಜನರಿಂದಲೇ ವಸೂಲು ಮಾಡುತ್ತಿದ್ದಾರೆ. ಇಷ್ಟೆಲ್ಲಾ ಟ್ಯಾಕ್ಸುಗಳನ್ನು ವಸೂಲು ಮಾಡುತ್ತಿದ್ದೀರಲ್ಲ ಇದರಲ್ಲಿ ಸ್ವಲ್ಪ ಭಾಗ ಬಡ ರೈತಾಪಿ ಜನಕ್ಕೆ ಸ್ವಲ್ಪ ರಿಯಾಯತಿಗಳನ್ನು ಕೊಡಬೇಕು ಎಂದು ಇಲ್ಲಿ ಸೂಚಿಸುತ್ತಿದ್ದೇನೆ.

5-00 P.M.

ಇಷ್ಟೆಲ್ಲಾ ಟ್ಯಾಕ್ಸ್‌ಗಳನ್ನು ವಸೂಲು ಮಾಡುವುದು ಸರಿಯಲ್ಲ ಎಂದು ಹೇಳುತ್ತಿಲ್ಲ. ಅದರೆ ಉದಾಹರಣೆಗಾಗಿ ಇಲ್ಲಿ ಹೇಳುತ್ತಿದ್ದೇನೆ. ಹೀಗೆ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಎಂದು ಹಿಂದೆ ಇದ್ದುದಕ್ಕಿಂತ ಇಂದು ಒಂದಕ್ಕೆ ಹತ್ತರಷ್ಟು ವಸೂಲು ಮಾಡುತ್ತಿದ್ದಾರೆ. ಆದರೆ ಮಾನ್ಯ ರೆವೆನ್ಯೂ ಮಂತ್ರಿಗಳು ನಮ್ಮ ಭಾಗಕ್ಕೆ ಸ್ವಲ್ಪವಾದ ಸೌಕರ್ಯಗಳನ್ನು ಮಾಡಿ ನಮ್ಮ ಭಾಗದ, ಅದರಲ್ಲೂ ಹಿಂದುಳಿದ ಜನಾಂಗದವರಿಗೆ ಪ್ರಯೋಜನವಾಗುವಂತೆ ಮಾಡಬೇಕು ಎಂದು ನಾನು ತಿಳಿಸುತ್ತೇನೆ. ಆದರೆ ಇಂದು ನೀವು ಮಾಡಿರುವ ಕಾನೂನು ಸಮಾಜವಾದದ ಕಡೆಗೆ ಹೋಗುತ್ತಿಲ್ಲ ಎಂದು ಇಲ್ಲಿ ಹೇಳಬೇಕಾಗಿದೆ. ಹಿಂದೆ ಹೈದರಾಬಾದು ರಾಜ್ಯದಲ್ಲಿ 1955 ರಲ್ಲಿ ಹೈದರಾಬಾದ್ ಇನಾಂ ಅಬಾಲಿಷನ್ ಆಕ್ಟ್ ಎಂದು ಇತ್ತು. ಅದರ ಪ್ರಕಾರ ಕಾಂಪೆನ್‌ಸೇಷನ್ ಕೊಡುತ್ತಿದ್ದರು. ಎಂದರೆ ಸುಮಾರು 12 ವರ್ಷಕ್ಕಿಂತ ಹಿಂದೆ ಅವರು ಇನಾಂತಿಗಳನ್ನು ಪಡೆದಿದ್ದರೆ ಅಂತಹವರಿಗೆ 25 ಸಾವಿರದಷ್ಟು ಪರಿಹಾರವನ್ನು ಅವರ ಮಕ್ಕಳಿಗೆ ಹಾಗೂ ಮೊಮ್ಮಕ್ಕಳಿಗೆ ಕೊಡಬೇಕೆಂದು ಮಾಡಿದ್ದರು. ಆದರೆ ಅಲ್ಲಿ 20 ವರ್ಷಕ್ಕಿಂತ ಮೇಲ್ಪಟ್ಟು 30 ವರ್ಷ ಹಾಗೂ 50 ವರ್ಷಕ್ಕೆ ಮೇಲ್ಪಟ್ಟು ಇದ್ದಂತಹ ದೇಶಮುಖರು ಹಾಗೂ ದೇಶಪಾಂಡೆಗಳು ಅವರವರ ಭೂಮಿಯನ್ನು ಮಾಡಿಕೊಂಡು ಬೇಕಾದ ಹಾಗೆ ಸಂಪಾದನೆ ಮಾಡಿಕೊಂಡರು ಅವರುಗಳು ಭೂಮಿಯನ್ನೇ ಮಾಡುತ್ತ ಇರಲಿಲ್ಲ. ಲೀಸ್‌ಗಾಗಿ ಕೊಟ್ಟಿದ್ದರು. ಆಗ ಇದ್ದ ಕಾನೂನಿನಂತೆ ಒಂದು ರೀತಿಯಾದ ಗುಂಪಾಯಿಷಿ ಇತ್ತು. ಅದರಲ್ಲಿ ಶೇಕಢಾ 60 ರಷ್ಟು ಮತ್ತು ಶೇಕಡಾ 40 ರಷ್ಟು ಕೊಡಬೇಕು ಎಂದು ಇತ್ತು. ಇದು ಅಷ್ಟು ಸಮಾಧಾನವಾಗಿಲ್ಲ ಎಂದು ಆಗ ಇದ್ದ ಜಹಗೀರುಗಳನ್ನು ಲ್ಯಾಂಡ್ ರೆವೆನ್ಯೂ ರಿಫಾರ್ಮ್ಸ್ ಮಾಡುವಾಗ ಅಲ್ಲಿ 10-15 ಸಾವಿರ ರೂಪಾಯಿಗಳಷ್ಟು ವರಮಾನ ಬರುತ್ತಿದೆ ಎಂದು ಆಗ ಹೈದ್ರಾಬಾದು ಸರಕಾರದವರು ಅದನ್ನು ಅರ್ಧಕ್ಕೆ ಇಳಿಸಿದರು ಮತ್ತು ಅದೇ ರೀತಿ ಕಾಂಪೆನ್‌ಸೇಷನ್ ಕೂಡ ಕೊಡುತ್ತಿದ್ದರು. ಇದರಂತೆ 25 ರಷ್ಟು ಇಲ್ಲವೇ 40 ರಷ್ಟು ಎಂದು ಇದ್ದರೆ ಸುಮಾರು ಹತ್ತು ಸಾವಿರ ಇಲ್ಲವೇ ಇಪ್ಪತ್ತು ಸಾವಿರದಷ್ಟು ಕೊಡುವಂತಹ ಪರಿಸ್ಥಿತಿ ಬಂದಿತ್ತು. ಆಗಿದ್ದ ಇನಾಮ್ ಅಬಾಲಿಷನ್ ಆಕ್ಟ್‌ನ ಸೆಕ್ಷನ್ 4, 12, 33 ಇದರಲ್ಲಿ ದೋಷಗಳಿವೆ. ಇದನ್ನು ತಿದ್ದುಪಡಿ ಮಾಡಿ ಇದಕ್ಕೆ ಒಂದು ತಿದ್ದುಪಡಿ ಇಲ್ಲಿ ತನ್ನಿ ಎಂದು ಪದೇ ಪದೇ ಸರಕಾರಕ್ಕೆ ವಿನಂತಿ ಮಾಡುತ್ತಿದ್ದರೂ ಕೂಡ ಇನ್ನೂ ಸರಕಾರ ತರಲಿಲ್ಲ. ತಂದರೆ ಇಲ್ಲಿರುವ ಟೆನೆಂಟುಗಳಿಗೆ ಹಾಗೂ ಕಾಶ್ತ್‌ದಾರರುಗಳಿಗೆ ಅನುಕೂಲವಾಗುತ್ತದೆ. ಇವರಿಗೆ ಈಗ ಅನ್ಯಾಯಗಳಾಗುತ್ತಿವೆ. ಈ ರೀತಿಯಾಗಬಾರದು ಎಂದು ಇಂತಹ ಒಂದು ತಿದ್ದುಪಡಿ ಕಾನೂನು ತರಬೇಕೆಂದು ಒಂದು ಸೂಚನೆ ಸರಕಾರಕ್ಕೆ ಕೊಡುತ್ತಿದ್ದೇನೆ. ಇದೂ ಅಲ್ಲದೆ ನಮ್ಮಲ್ಲಿ ಮಾಡಿರುವ ರಿಕಾರ್ಡ್ಸ್ ಆಫ್ ರೈಟ್ಸ್ ಬಗ್ಗೆ ಒಂದು ವಿಚಾರ ಹೇಳಬೇಕಾಗಿದೆ. ಇದರ ರಿಕಾರ್ಡುಗಳನ್ನೆಲ್ಲಾ ಇಲ್ಲಿರುವ ರೆವೆನ್ಯೂ ಇನ್ಸ್‌ಪೆಕ್ಟರುಗಳೇ ಮೇಂಟೇನ್ ಮಾಡುತ್ತಾರೆ. ನಾನು ಮಾನ್ಯ ಮಂತ್ರಿಗಳಾದ ಶ್ರೀಮಾನ್ ರಾಚಯ್ಯನವರಲ್ಲಿ ಹೇಳುವುದು, ರೆವೆನ್ಯೂ ಆಕ್ಟ್ 44 ರ ಪ್ರಕಾರ ಸಾಗುವಳಿ ಚೀಟಿ ಒಬ್ಬ ರೈತನಿಗೆ ಕೊಡಬೇಕಾದರೆ ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳೆಲ್ಲಾ ತಹಶೀಲುದಾರರ ಆಫೀಸುಗಳಲ್ಲಿ ಇರಬೇಕು ಇಲ್ಲದೇ ಇದ್ದರೆ ಜನಕ್ಕೆ ಕಷ್ಟವಾಗುತ್ತದೆ. ಈಗ ಎಲ್ಲವೂ ಅಲ್ಲಿರುವ ಶ್ಯಾನುಭೋಗರು ಹಾಗೂ ರೆವೆನ್ಯೂ ಇನ್ಸ್‌ಪೆಕ್ಟರ ಬಳಿಯೇ ಇರುವುದರಿಂದ ತಹಶೀಲುದಾರರ ಆಫೀಸಿಗೆ ಹೋದರೆ ಯಾವ ರಿಕಾರ್ಡುಗಳೂ ಸಿಗುವುದಿಲ್ಲ. ಇದರಲ್ಲಿ ಆರ್. ಆರ್. ಹಾಗೂ ಪಹಣಿ ಪತ್ರ ಇವೆಲ್ಲಾ ಅಮೂಲ್ಯವಾದ ಭದ್ರವಾದ ರಿಕಾರ್ಡುಗಳು ತಹಶೀಲುದಾರರ ಕಚೇರಿಯಲ್ಲೇ ಇಡಬೇಕು. ಶ್ಯಾನುಭೋಗರ ಬಳಿ ಈಗ ಇರುವಂತೆ ಇಟ್ಟರೆ ಮುಂದೆ ಆ ಕಾಗದ ಪತ್ರಗಳೇ ಗೈರುವಿಲೆಯಾಗುತ್ತವೆ ಜನಕ್ಕೆ ಅನುಕೂಲವಾಗುವುದಿಲ್ಲ. ಯಾವುದಾದರೂ ಒಂದು ಸಂದರ್ಭದಲ್ಲಿ ಸಬ್ ರಿಜಿಸ್ಟ್ರಾರ್ರ ಆಫೀಸಿಗೆ ಹೋಗುವಾಗ ಪಹಣಿ ಕಾಪಿ ಬೇಕಾದರೆ ಶ್ಯಾನುಭೋಗರನ್ನು ಹುಡುಕಿಕೊಂಡು ಹೋಗುವುದು ಸರಿಯಲ್ಲ. ಇಂತಹ ರಿಕಾರ್ಡುಗಳನ್ನೆಲ್ಲಾ ತಹಶೀಲುದಾರರ ಆಫೀಸುಗಳಲ್ಲಿ ಇಡುವ ವ್ಯವಸ್ಥೆ ಮಾಡಬೇಕು. ಈಗಿರುವಂತೆ ಪಟೇಲ ಪಟವಾರಿಗಳ ಕೈಯ್ಯಲ್ಲಿ ಇದ್ದರೆ ರಿಕಾರ್ಡುಗಳು ಅದಲಬದಲಿಯಾಗುವ ಅವಕಾಶಗಳಿರುತ್ತವೆ. ಮುಂದೆ ಹೈ ಕೋರ್ಟಿಗೆ ಯಾರಾದರೂ ಹೋದರೆ ಅವರಿಗೆ ನ್ಯಾಯ ಸರಿಯಾಗಿ ದೊರೆಯುವುದಿಲ್ಲ. ಇಂತಹ ರಿಕಾರ್ಡುಗಳನ್ನೆಲ್ಲಾ ತಹಶೀಲುದಾರರ ಆಫೀಸುಗಳಲ್ಲಿ ಇಡುವ ವ್ಯವಸ್ಥೆ ಮಾಡಬೇಕು ಎಂದು ಇಲ್ಲಿ ಸರಕಾರಕ್ಕೆ ಸಲಹೆ ಮಾಡುತ್ತಿದ್ದೇನೆ. ಅಲ್ಲದೆ ಈಗ ಎಲ್ಲ ರಿಕಾರ್ಡುಗಳೂ ರೆವೆನ್ಯೂ ಇನ್ಸ್‌ಪೆಕ್ಟರವರ ಅಧೀನದಲ್ಲಿಯೇ ಇರುವುದು ಸರಿಯಲ್ಲ, ಇದರಿಂದ ಡ್ಯೂಪ್ಲಿಕೇಷನ್ನಿಗೆ ಅವಕಾಶವಾಗುತ್ತದೆ. ಇದರಿಂದ ಶ್ಯಾನುಭೋಗರವೇ ಪ್ರಭಾವ ಹೆಚ್ಚಾಗುತ್ತದೆ.

(ಶ್ರೀ ಎಸ್. ಭೀಮಣ್ಣ)

ಮತ್ತು ನಾನು ಸರಕಾರಕ್ಕೆ ಈ ಮೊದಲು ಏನೇನು ಸೂಚನೆಗಳನ್ನು ಕೊಟ್ಟಿದ್ದೇನೆ ಅದನ್ನೆಲ್ಲಾ ಸರಕಾರ ಲಕ್ಷ್ಯಕ್ಕೆ ತೆಗೆದುಕೊಂಡು ಅದಕ್ಕೆ ತಕ್ಕಂತೆ ಬಜೆಟ್ಟಿನಲ್ಲಿ ಹಣ ಒದಗಿಸಬೇಕು ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಕಂದಾಯ ಸಚಿವರು ಮಂಡಿಸಿರತಕ್ಕ ರೆವೆನ್ಯೂ ಮತ್ತು ಅರಣ್ಯ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಈಗಾಗಲೇ ಭೂಮಿಯನ್ನು ಅಳತೆ ಮಾಡಿಸಿ ಆ ಭೂಮಿಗೆ ಅನುಗುಣವಾಗಿ ಅದರ ಉತ್ಪನ್ನ ಮತ್ತು ಅದರ ಸ್ಥಿತಿಗತಿಗಳಿಗನುಗುಣವಾಗಿ ಹೊಂದಾಣಿಕೆಯಾಗುವಂತೆ ಕಂದಾಯವನ್ನು ವಿಧಿಸುತ್ತಿದ್ದೇವೆ ಎಂದು ಸರ್ಕಾರದವರು ಹೇಳುತ್ತಾರೆ. ಈ ಒಂದು ಕೆಲಸದಲ್ಲಿ ಸರಕಾರ ಪೂರ್ಣವಾಗಿ ಒಂದು ರೀತಿಯಾದ ಹೊಸ ಕಂದಾಯವನ್ನು ವಿಧಿಸಿ ಅನೇಕ ಜಿಲ್ಲೆಗಳಲ್ಲಿ ಇದನ್ನು ಜಾರಿಗೆ ಕೊಟ್ಟಿದೆ ಮತ್ತು ಇನ್ನೂ ಕೆಲವು ಕಡೆಗಳಲ್ಲಿ ಜಾರಿಗೆ ಕೊಡಬೇಕಾಗಿದೆ. ಈಗ ಅನೇಕ ವರ್ಷಗಳಿಂದ ಜಮೀನಿನ ಮೇಲೆ ಕಂದಾಯವನ್ನು ವಿಧಿಸತಕ್ಕಂತಹ ಒಂದು ಕೆಲಸ ಬಾಕಿ ಉಳಿದಿದ್ದು ಇದನ್ನು ಮಾಡಲೇ ಬೇಕು ಎಂದು ಹೊಸದಾಗಿ ಕೆಲವು ಕಡೆಗಳಲ್ಲಿ ಭೂಮಿಯನ್ನು ಅಳತೆ ಮಾಡಿಸುವುದು ಎಂದು ಮಾಡಿಸಿದ್ದಾರೆ. ಇದನ್ನು ಮಾಡತಕ್ಕದ್ದು ಒಂದು ವಿಧದಲ್ಲಿ ಸರಿಯಾದರೂ ಹೊಸದಾಗಿ ಅಳತೆ ಮಾಡಿಸುವಾಗ ಜಮೀನಿನ ಹದ್ದುಬಸ್ತುಗಳನ್ನು ಮಾಡುವಾಗ ಮತ್ತು ಉತ್ಪತ್ತಿಗನುಗುಣವಾಗಿ ಕಂದಾಯ ವಿಧಿಸಬೇಕಾದರೆ ಒಂದು ಶಾಸ್ತ್ರೀಯವಾದ ಮಾರ್ಗ ಮತ್ತು ಮೂಲವನ್ನು ಅನುಸರಿಸದೇ ಮಾಡುತ್ತಿರುವುದರಿಂದ ಇದರಲ್ಲಿ ಒಂದು ರೀತಿಯಾಗಿ ಗೊಂದಲಗಳು ಆಗಿವೆ. ಇದರಲ್ಲಿ ಕೆಲಸಮಾಡತಕ್ಕ ಅಧಿಕಾರಿಗಳು ಜಮೀನಿನ ಬಗ್ಗೆ ಮತ್ತು ಅದರ ಉತ್ಪಾದನೆಯ ಬಗ್ಗೆ ಅದರ ಸ್ಥಿತಿಗತಿಗನುಗುಣವಾದ ರೀತಿಯಲ್ಲಿ ಮಾಡಬೇಕು ಎಂದು ಇದ್ದರೂ ಸರಕಾರ ಹೊಸದಾಗಿ ಕಂದಾಯ ವಿಧಿಸಬೇಕು ಎಂದು ಹೇಳಿರುವುದರಿಂದ ಜಮೀನಿನ ಸ್ಥಿತಿಗತಿಗಳನ್ನು ನೋಡದೆ ಅನೇಕ ಸಂದರ್ಭಗಳಲ್ಲಿ ಹೆಚ್ಚಾಗಿ ಕಂದಾಯ ವಿಧಿಸಿರುವುದು ಅಗಿದೆ, ಕೆಲವು ಕಡೆ ಕಂದಾಯ ವಿಧಿಸಿರುವುದು ಸರಿಯಲ್ಲ ಎಂದು ಹೇಳಿದರೂ ಅದು ತಪ್ಪಾಗಲಾರದು. ಇದನ್ನು ಸರಕಾರ ಇಂದು ಜಾರಿಗೆ ಕೊಟ್ಟಿದ್ದರೂ ಇನ್ನೂ ಕೆಲವು ಕಡೆಗಳಲ್ಲಿ ಇದನ್ನು ಜಾರಿಗೆ ಕೊಡಬೇಕೆಂದು ಯೋಚನೆ ಮಾಡುತ್ತಿದ್ದಾರೆ ಮತ್ತು ಕೆಲವು ಕಡೆ ಇದನ್ನು ಪುನರ್‌ಪರಿಶೀಲನೆ ಮಾಡಬೇಕು ಎಂದು ಕೆಲವು ಜನರು ಹೇಳುತ್ತಿದ್ದಾರೆ. ಸರಕಾರದವರು ಇದನ್ನು ಪುನಃ ಪರಿಶೀಲನೆ ಮಾಡುವಾಗ ಸರಕಾರದ ವತಿಯಿಂದಲೇ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇನ್ನು ಭೂಕಂದಾಯವನ್ನು ವಜಾ ಮಾಡತಕ್ಕ ವಿಷಯವನ್ನು ಒಂದು ದೊಡ್ಡ ಸಮಸ್ಯೆಯಾಗಿಯೇ ಮಾಡಿಬಿಟ್ಟಿದ್ದಾರೆ ಮತ್ತು ಇದರಿಂದಾಗಿ ಒಂದು ರೀತಿಯಾದ ಗೊಂದಲಗಳು ಬರುವುದಕ್ಕೆ ಕಾರಣ ವಾಯಿತೋ ಏನೋ ಎಂದು ನನಗನಿಸುತ್ತದೆ. ನಮಗೆ ಹೊಸದಾಗಿ ವಿಧಿಸತಕ್ಕ ಕಂದಾಯ ಏನಿದೆ ಅದರಿಂದ ಕೆಲವು ಕಡೆಗಳಲ್ಲಿ ಜನರಿಗೆ ತೊಂದರೆಯಾಗಿದೆ ಅದರಿಂದ ಇದನ್ನು ಜಾರಿಗೆ ಕೊಡುವುದನ್ನು ನಿಲ್ಲಿಸಬೇಕು ಎಂದು ಹೇಳುತ್ತಿದ್ದಾರೆ. ಇದಕ್ಕೆ ಕಾರಣವೇನು ಎನ್ನುವುದನ್ನು ಸರಕಾರದವರು ಪರಿಶೀಲನೆ ಮಾಡಬೇಕು. ಮತ್ತು ಸರಕಾರದವರು ಹಿಂದೆ ಒಂದು ಸಂದರ್ಭದಲ್ಲಿ ಕಂದಾಯವನ್ನು ವಜಾ ಮಾಡುತ್ತೇವೆ ಎಂದು ಹೇಳಿದುದರಿಂದ ಮತ್ತು ಕಳೆದ ವರ್ಷ ಮಂತ್ರಿಮಂಡಲದವರು ಒಂದು ಸಬ್ ಕಮಿಟಿ ಮಾಡಿ ಅದರ ವ್ಯಾಪ್ತಿಯೊಳಗೆ ಇದನ್ನು ಪರಿಶೀಲನೆ ಮಾಡಿ ತೀರ್ಮಾನ ಮಾಡಬೇಕೆಂದು ಸರಕಾರ ಮಾಡಿದ್ದರಿಂದ ಸರಕಾರದ ಮಟ್ಟದಲ್ಲಿ ಆದ ತೀರ್ಮಾನದಂತೆ ಇಂದು ಈ ಜಿಜ್ಞಾಸೆಯುಂಟಾಗಿ ಜನಗಳು ಅದರ ಫಲವಾಗಿ ಭೂಕಂದಾಯವನ್ನು ವಜಾ ಮಾಡಬೇಕೆಂದು ಹೇಳುವಂತಹ ಒಂದು ಪರಿಸ್ಥಿತಿ ಹಾಗೂ ಗೊಂದಲ ಉಂಟಾಗಲು ಇಷ್ಟು ಕಾರಣವಾಗಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಭೂಮಿಯಿಂದ ಬರತಕ್ಕಂಥ ಕಂದಾಯ ನೀವು ಕೊಟ್ಟಿರುವ ಪಟ್ಟಿ ಪ್ರಕಾರ ಸುಮಾರು 9 ಕೋಟಿ ಎಂದು ಹೇಳುತ್ತೀರಿ. ರೈತರಿಂದ ಹಳ್ಳಿಗಳಲ್ಲಿ ವಾಸ ಮಾಡತಕ್ಕಂಥ ಶೇಕಡ 80 ಭಾಗ ಜನರಿಂದ ವ್ಯವಸಾಯವನ್ನು ನಂಬಿ ಜೀವನ ಮಾಡತಕ್ಕಂಥ ಜನರಿಂದ ಮತ್ತು ವ್ಯವಸಾಯ ಕೂಲಿ ಮಾಡತಕ್ಕಂಥ ಜನರಿಂದ ಈ ಒಂಭತ್ತು ಕೋಟಿ ರೂಪಾಯಿ ವಸೂಲ್ಮಾಡಲಾಗುತ್ತದೆ. ಈ ಒಂಭತ್ತು ಕೋಟಿ ರೂಪಾಯಿ ರೈತರು ತೆರಿಗೆ ರೂಪದಲ್ಲಿ ಕೊಡುತ್ತಾರೆ. ಕೆಲವರಿಗೆ ರೈತರು ಬೇರೆ ಇನ್ನಾವ ತೆರಿಗೆ ಕೊಡುವುದಿಲ್ಲ ಎಂದು ಒಂದು ತಪ್ಪು ತಿಳುವಳಿಕೆ ಬಂದ ಹಾಗೆ ಕಾಣುತ್ತದೆ. 30 ಕೋಟಿ ರೂಪಾಯಿನ

ಮಾರಾಟ ತೆರಿಗೆ ತೆಗೆದುಕೊಂಡರೂ ಕೂಡ ಇದರಲ್ಲಿ ಬಹು ಭಾಗ ರೈತರು ಕೊಡುತ್ತಾರೆ. ವ್ಯವಸಾಯ ಕೂಲಿಕಾರರು ಕೊಡುತ್ತಾರೆ. ಈ ತೆರಿಗೆ ಇನ್‌ಡೈರೆಕ್ಟ್ ಆಗಿ ಅವರ ಮೇಲೆ ಬಿದ್ದಿದೆ ಎನ್ನುವುದನ್ನು ಆ ರೀತಿ ಮಾತನಾಡತಕ್ಕಂಥವರು ಮರೆತಿದ್ದಾರೆ. ಪ್ರಾಹಿಬಿಷನ್ ತೆಗೆದುಹಾಕಿದರೆ ಹನ್ನೊಂದು ಕೋಟಿ ಉತ್ಪತ್ತಿ ಬರುತ್ತದೆ ಎಂದು ಹೇಳಿದ್ದಾರೆ. ಈ ಹನ್ನೊಂದು ಕೋಟಿಯಲ್ಲಿ ರೈತರಿಂದ ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡತಕ್ಕಂಥ ಜನರಿಂದ ಎಷ್ಟು ತೆರಿಗೆ ಸರಕಾರಕ್ಕೆ ಬರುತ್ತದೆ ಎನ್ನುವುದನ್ನು ಸ್ವಲ್ಪ ಪರಿಶೀಲನೆ ಮಾಡಿ ಹೇಳಬೇಕಾಗುತ್ತದೆ. ಜಮೀನು ಮೇಲೆ ವಸೂಲಾಗತಕ್ಕಂಥ ಒಂಭತ್ತು ಕೋಟಿ ತೆರಿಗೆ ರೈತ ಕೊಡುತ್ತಾನೆ, ಉಳಿದ ತೆರಿಗೆ ಕೊಡುವ ಹೊಣೆ ಇಲ್ಲ, ಜವಾಬ್ದಾರಿ ಇಲ್ಲ ಎಂದು ಹೇಳುವುದು ಸರಿಯಲ್ಲ. ತೆರಿಗೆ ತತ್ವ ಆಳವಾಗಿ ಪರಿಶೀಲನೆ ಮಾಡದೇ ಇರತಕ್ಕಂಥವರು ಆ ರೀತಿ ಹೇಳತಕ್ಕಂಥಾದ್ದು. ರೈತನ ಮೇಲೆ ಪರೋಕ್ಷ ತೆರಿಗೆ ಭಾರ ಬಿದ್ದಿದೆ. ಸರಕಾರ ದಿಟ್ಟ ನಿಲುವು ತೆಗೆದುಕೊಂಡು ಕಂದಾಯ ತೆಗೆಯುವುದಿಲ್ಲ ಎಂದು ಹೇಳುವುದಿಲ್ಲ, ಏತಕ್ಕೆ ? ಅನೇಕ ಸಂದರ್ಭದಲ್ಲಿ ಅನೇಕ ರೀತಿಯ ಹೇಳಿಕೆ ಕೊಟ್ಟು ಗೊಂದಲ ಉಂಟು ಮಾಡಿದ್ದೀರಿ. ಕಟ್ಟುನಿಟ್ಟಾಗಿ ಒಂದು ತೀರ್ಮಾನ ತೆಗೆದುಕೊಂಡು ಕಂದಾಯ ಉಳಿಸುವುದೋ, ವಸೂಲ್ಮಾಡುವುದೋ ಎಂದು ಹೇಳುವುದು ಸರಿಯಾದುದು ಎಂದು ನನಗೆ ಅನಿಸುತ್ತದೆ.

ತಾಲ್ಲೂಕುಮಟ್ಟದಲ್ಲಿ ತಾಲ್ಲೂಕುಕಚೇರಿಯಲ್ಲಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಚೇರಿಯಲ್ಲಿ ಆಡಳಿತ ದುಸ್ಥಿತಿಗೆ ಬಂದಿದೆ ಎಂದು ಕಾಣುತ್ತದೆ. ಹಿಂದೆ ಮೇಲ್ಮಟ್ಟದ ಅಧಿಕಾರಿಗಳು ಜಿಲ್ಲಾ ಮಟ್ಟದ ಅಧಿಕಾರಿಗಳ ಆಫೀಸಿಗೆ ಹೋಗಿ ತಾಲ್ಲೂಕು ಕಚೇರಿಗೆ ಹೋಗಿ ಭೇಟಿ ಕೊಟ್ಟು surprise visits ಕೊಡತಕ್ಕಂಥ ಒಂದು ಪದ್ಧತಿ ಇತ್ತು. ಇದು ಎಲ್ಲರಿಗೂ ಗೊತ್ತಿದೆ. ಆದರೆ ಈಗ ಇಂಥ ಸರ್ಪ್ರೈಜ್ ವಿಜಿಟ್ಸ್ ಕೊಡುವುದನ್ನು ನಿಲ್ಲಿಸಿದ್ದಾರೆ. ತನಿಖೆ ಮಾಡತಕ್ಕಂಥ ಜಿಲ್ಲಾಧಿಕಾರಿಗಳು ಮೇಲ್ಮಟ್ಟದಲ್ಲಿರತಕ್ಕ ವಿಭಾಗಾಧಿಕಾರಿಗಳು ಮಾಡತಕ್ಕಂಥ ಕೆಲಸವನ್ನು ಕಟ್ಟುನಿಟ್ಟಾಗಿ ಮಾಡುತ್ತಿಲ್ಲ. ತನಿಖೆ ಮಾಡುವುದನ್ನು ನಿಲ್ಲಿಸಿರುವುದರಿಂದ ಭೇಟಿ ಕೊಡತಕ್ಕಂಥಾದ್ದನ್ನು ಕಡಿಮೆ ಮಾಡಿರುವುದರಿಂದ ಆಡಳಿತ ದುಸ್ಥಿತಿಗೆ ಬಂದಿದೆ ಎಂದು ಹೇಳಲು ಇಚ್ಛೆಪಡುತ್ತೇನೆ. ಇಂದು ಆಡಳಿತದಲ್ಲಿ ಲಂಚದ ಪ್ರಭಾವ, ಜಾತಿ ಪ್ರಭಾವ, ಶಿಫಾರಸುಗಳ ಪ್ರಭಾವ ಹೆಚ್ಚಾಗಿದೆ. ಲಂಚದ ಪ್ರಭಾವ ಎಲ್ಲಕ್ಕೂ ಹೆಚ್ಚಾಗಿದೆ. ಎರಡನೇಯದು ಜಾತಿ ಪ್ರಭಾವ. ಕೊನೆಯದಾಗಿ ಶಿಫಾರಸು ಪ್ರಭಾವ ಇಂದು ಆಡಳಿತದಲ್ಲಿದೆ. ಈ ರೀತಿ ಪ್ರಭಾವ ಸರಕಾರದ ಆಡಳಿತದಲ್ಲಿ ಅನೇಕ ರೀತಿಯಲ್ಲಿ ಹೊಕ್ಕು ಆಡಳಿತ ಡೀ-ಜನರೇಟ್ ಆಗುವುದಕ್ಕೆ ಅವಕಾಶವಾಗಿದೆ. ಕಂದಾಯ ಇಲಾಖೆ ಬಗ್ಗೆ ಇಷ್ಟು ಮಾತ್ರ ಹೇಳಿ ಇನ್ನು ಅರಣ್ಯ ಇಲಾಖೆ ಬಗ್ಗೆ ಒಂದೆರಡು ಮಾತು ಹೇಳಲು ಇಷ್ಟ ಪಡುತ್ತೇನೆ. ಇಂದು ಅರಣ್ಯ ಇಲಾಖೆಯಲ್ಲಿ ಡೀ-ಫಾರೆಸ್ಟೇಷನ್ ಮರಗಳನ್ನು ಕಡಿದು ಟಿಂಬರ್ ಮಾರಾಟ ಮಾಡತಕ್ಕಂಥಾದ್ದು, ಮರಕಡಿದು ಸರಕಾರಿ ಡಿಪೋ ಮೂಲಕ ಮಾರಾಟ ಮಾಡುತ್ತಾರೆ. ಸೌದೆಗಾಗಿ ಕಾಡನ್ನು ಕಡಿಯುವುದಕ್ಕೆ ವ್ಯವಸ್ಥೆ ಮಾಡುತ್ತಾರೆ. ಆದರೆ ಕೂಪಗಳಲ್ಲಿ ಯಾವ ರೀತಿ ಕೆಲಸ ನಡೆಯುತ್ತಿದೆ ಎನ್ನುವುದನ್ನು ಮಂತ್ರಿಗಳು ಪರಿಶೀಲನೆ ಮಾಡಿ ನೋಡಿದರೆ ಅರ್ಥವಾಗುತ್ತದೆ. ಆದರೆ ಪರಿಶೀಲನೆ ಮಾಡುವ ಧೈರ್ಯ ಇವರಿಗೆ ಇಲ್ಲ ಎಂದು ನಾನು ಹೇಳಬಲ್ಲೆ. ನಮ್ಮ ತಾಲ್ಲೂಕಿನಲ್ಲಿ ಎರಡು ತಿಂಗಳ ಹಿಂದೆ ಕಾಡನ್ನು ನೋಡುವ ಅವಕಾಶ ಸಿಕ್ಕಿತ್ತು. ಕೂಪನಲ್ಲಿ ಹೆಚ್ಚು ಬೆಲೆ ಬರತಕ್ಕಂಥ ಟಿಂಬರ್ ಕಡಿಮೆ ಬೆಲೆ ಬರತಕ್ಕಂಥ ಸೌದೆ ಕೂಪಿನಂತೆ ಹರಾಜು ಮಾಡುತ್ತಾರೆ ಕೆಲವು ಸಲ ಮರ ಕಡಿದು ಅದಕ್ಕೆ ಬೆಂಕಿ ಹಚ್ಚುತ್ತಾರೆ. ಸರಕಾರಕ್ಕೆ ಉತ್ಪತ್ತಿ ಬರತಕ್ಕಂಥ ಟಿಂಬರಿಗೆ ಬೆಂಕಿ ಹಚ್ಚಿ ಹಾಳು ಮಾಡುತ್ತಾರೆ. ಇದನ್ನು ಕೂಡಲೆ ಪರಿಶೀಲನೆ ಮಾಡಿ ಸರಕಾರಕ್ಕೆ ಹೆಚ್ಚು ಹಣ ಬರುವಂತೆ ಮಾಡಬೇಕು.

ಕಾಡು ಬೆಳೆಸುವುದಕ್ಕೆ ಸರಿಯಾಗಿ ಪರಿಶೀಲನೆ ನಡೆದಿಲ್ಲ ಎಂದು ಹೇಳಿದರೆ ಅದು ತಪ್ಪಾಗಲಾರದು. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕಾಡು ಬೆಳೆಸುವುದಕ್ಕೆ ಸಾವಿರಾರು ಎಕರೆಯಲ್ಲಿ ಕೆಲಸ ನಡೆದಿದೆ. ಆ ಪ್ರದೇಶಕ್ಕೆ ಹೋಗಿ ಮಂತ್ರಿಗಳು ನೋಡಲಿ ಎಂದು ಸಲಹೆ ಮಾಡುತ್ತೇನೆ. ಕಾಡು ಸರಿಯಾಗಿ ಬೆಳೆದಿಲ್ಲ ಆದರೆ ಹಣ ಖರ್ಚಾಗಿದೆ, ಹಣ ದುರುಪಯೋಗವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಿ ಮಂತ್ರಿಗಳು ಈ ಕಡೆ ಗಮನ ಕೊಡಬೇಕು ಎಂದು ಹೇಳುತ್ತೇನೆ. ಈಗಾಗಲೇ ಸಭಾಪತಿಗಳವರು ಎರಡು ಮೂರು ಸಲ ನನಗೆ ಮಾತನಾಡಲು ಕೊಟ್ಟಿರುವ ಟೈಂ ಆಯಿತು ಎಂದುಗಂಟೆ ಹೊಡೆದು ಸೂಚಿಸಿದ್ದರಿಂದ ಇನ್ನು ಹೆಚ್ಚಿಗೆ ಹೇಳದೆ ನನಗೆ ಅವಕಾಶ ಕೊಟ್ಟಿದ್ದಾಕ್ಕಾಗಿ ಸಭಾಪತಿಗಳವರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಎನ್. ಎಂ. ಕೊಟ್ರುಬಸಯ್ಯ ಸೋಗಿ (ಹಡಗಲಿ).—ಸನ್ಮಾನ್ಯ ಸಭಾಪತಿಗಳೇ, ನಮ್ಮ ಕಂದಾಯ ಮತ್ತು ಅರಣ್ಯ ಶಾಖೆಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಸಮರ್ಥನೆ ಮಾಡುತ್ತಾ ಕೆಲವು ಮಾತು ಹೇಳಲು ಅಪೇಕ್ಷೆ ಪಡುತ್ತೇನೆ. ನಮ್ಮ ಕಂದಾಯ ಶಾಖೆಯಲ್ಲಿ ನಾವು

(ಶ್ರೀ ಎಸ್. ಎಂ. ಕೊಟ್ರಬಸಯ್ಯ ಸೋಗಿ)

ಅತ್ಯಂತ ತೃಪ್ತಿಕರವಾಗಿ ಗಮನಿಸ ಬೇಕಾದ ಅಂಶ ಅಂದರೆ ಮಂತ್ರಿಗಳು ಮತ್ತು ಉಪಮಂತ್ರಿಗಳು ಇವರಲ್ಲಿ ಅತ್ಯಂತ ಸೌಹಾರ್ದಮಯವಾದ ಮಧುರ ಬಾಂಧವ್ಯ ಇದೆ, ಶಾಂತ ಮನಸ್ಸಿನಿಂದ ಯಾವ ತೊಂದರೆಗಳಿಲ್ಲದೆ ಸರ್ವದಾ ಕೆಲಸ ಮಾಡುತ್ತಾ ಇರುವುದು ಕಂಡುಬಂದಿದೆ. ಕಂದಾಯ ಶಾಖೆಯಲ್ಲಿ ತೃಪ್ತಿಕರವಾಗಿ ಕೆಲಸ ನಡೆದಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಇದನ್ನು ಎಲ್ಲರೂ ಒಪ್ಪಲೇಬೇಕು. ಕೆಲವು ಲೋಪ ದೋಷಗಳು ಇರಬಹುದು. ಆದರೆ ಅವರು ತಮ್ಮ ವಿವೇಚನೆಯಿಂದ ತಿಳುವಳಿಕೆಯಿಂದ ಎಲ್ಲವನ್ನೂ ಗ್ರಹಿಸಿ ಸಮೀಕ್ಷೆ ಮಾಡತಕ್ಕಂಥ ಬುದ್ಧಿ ಇದೆ. ನಿರಪೇಕ್ಷೆ ಬುದ್ಧಿಯಿಂದ ವಿಮರ್ಶೆ ಮಾಡತಕ್ಕಂಥ ಶಕ್ತಿ ಬರುತ್ತದೆ ಅದನ್ನು ಎಲ್ಲರೂ ಕಲಿಯತಕ್ಕಂಥಾದ್ದು ಎಂದು ನಾನು ಅಭಿಪ್ರಾಯಪಡುತ್ತೇನೆ. ಈ ದೃಷ್ಟಿಯಿಂದ ವಿವೇಚನೆ ಮಾಡಿದರೆ ಕಂದಾಯ ಶಾಖೆಯಲ್ಲಿ ಕ್ರಾಂತಿಕಾರಕ ಸುಧಾರಣೆಗಳು ಆಗತಕ್ಕಂಥ ರೀತಿಯಲ್ಲಿ ಕೆಲಸ ನಡೆದಿದೆ. ಮುಖ್ಯವಾಗಿ ಗಮನಿಸಬೇಕಾದುದು ಸರ್ವೇ ಸೆಟ್ಲ್‌ಮೆಂಟ್ ಆಗಿರುವುದು. ಈ ಹೊಸ ಶಾಖೆಯಲ್ಲಿ ಹೊಸ ಆಡಳಿತ ಮಂಡಳಿ ಸಿಬ್ಬಂದಿ ಏರ್ಪಾಡಾಗಿ ತೃಪ್ತಿಕರವಾಗಿ ಕೆಲಸ ನಡೆದಿದೆ. ಕಂದಾಯ ಮಂತ್ರಿಗಳು ಹಾಗು ಉಪ ಮಂತ್ರಿಗಳು ಈಗಾಗಲೇ ಪ್ರವಾಸ ಕೈಕೊಂಡು ಅಧಿಕಾರಿಗಳು ಸೂಕ್ತವಾದ ರೀತಿಯಲ್ಲಿ ಕೆಲಸ ಮಾಡುವ ದೃಷ್ಟಿಯನ್ನು ಇಟ್ಟುಕೊಳ್ಳುವ ಹಾಗೆ ಆಗಾಗ್ಗೆ ಸಂಬಂಧಪಟ್ಟ ಆಫೀಸುಗಳಿಗೆ ಭೇಟಿ ಮಾಡಿ ಆಗಾಗ್ಗೆ ಕೆಲಸದ ಬಗ್ಗೆ ನಿಗಾ ವಹಿಸಿ ಸಲಹೆ ಕೊಟ್ಟಿದ್ದಾರೆ ಎನ್ನುವುದನ್ನು ನಾವು ಮೆಚ್ಚತಕ್ಕಂಥ ವಿಚಾರ.

ಸರ್ವೇ ಮತ್ತು ಸೆಟಲ್‌ಮೆಂಟ್ ಸಂಬಂಧದಲ್ಲಿ ಎಷ್ಟರಮಟ್ಟಿಗೆ ಪ್ರಗತಿ ನಡೆದಿದೆ ಎನ್ನುವುದನ್ನು ವಿವೇಚನೆ ಮಾಡುತ್ತೇನೆ. 1967ನೆ ಮೇ ತಿಂಗಳಿನಲ್ಲಿ ಪ್ರಾರಂಭವಾದ ಕೆಲಸ ಈ ತಿಂಗಳ ಅಂತ್ಯದ ವೇಳೆಗೆ ಗಮನಾರ್ಹವಾದ ಪ್ರಗತಿಯನ್ನು ಸಾಧಿಸಿದೆ. ಸುಮಾರು 1,66,000 ಕೇಸುಗಳು ಸರ್ವೆ ಸೆಟಲ್‌ಮೆಂಟಿನಲ್ಲಿ ಮೆಷರ್‌ಮೆಂಟ್ಸ್ ಆಗತಕ್ಕುದು ಮತ್ತು ಚೆಕ್ಸ್ ಅಂಡ್ ಕರೆಕ್ಷನ್ಸ್ ಆಗತಕ್ಕ ಕೇಸುಗಳಲ್ಲಿ ಈಗಾಗಲೇ ಮೆಷರ್‌ಮೆಂಟ್ಸ್‌ನಲ್ಲಿ 69,664 ಕೇಸುಗಳು ತೀರ್ಮಾನವಾಗಿವೆಯೆಂದು ತಿಳಿದು ಬರುತ್ತಿದೆ. ಚೆಕ್ಸ್ ಮತ್ತು ಕರೆಕ್ಷನ್ಸ್‌ನಲ್ಲಿ ಸಹ ಸುಮಾರು 1,60,000 ಕೇಸುಗಳಲ್ಲಿ 69,235 ಕೇಸುಗಳ ವಿಲೇವಾರಿಯಾಗಿದೆ ಎನ್ನುವುದು ನಮ್ಮ ಸರ್ಕಾರದವರು ಹೊರಡಿಸಿರತಕ್ಕ ಪ್ರಕಟಣೆಯಿಂದ ಗೊತ್ತಾಗುತ್ತದೆ. ಮ್ಯುಟೇಷನ್ ಕೇಸುಗಳಲ್ಲಿ ಸಹ ಪ್ರಗತಿಪರವಾದ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ನಮ್ಮ ಸರ್ಕಾರದವರು ಏನು ಪ್ರಗತಿಯನ್ನು ಸಾಧಿಸಿದ್ದಾರೆ ಎನ್ನುವುದರ ಬಗ್ಗೆ ನಾವು ನೋಡೋಣ. ಉದಾಹರಣೆಗೆ ಚಾಮರಾಜನಗರ ತಾಲ್ಲೂಕಿನಲ್ಲಿ 61 ಸಾವಿರ ಮ್ಯುಟೇಷನ್ ಕೇಸುಗಳಲ್ಲಿ 49,023 ಕೇಸುಗಳ ವಿಲೇವಾರಿಯಾಗಿದೆ. ರಿಕಾರ್ಡ್ ಆಫ್ ರೈಟ್ಸ್‌ನಲ್ಲಿ ಎಂಟ್ರಿಗಳನ್ನು ಮಾಡುವುದರಲ್ಲಿ ಒಂದು ಲಕ್ಷ 60 ಸಾವಿರ ಕೇಸುಗಳಲ್ಲಿ 70,800 ವಿಲೇವಾರಿಯಾಗಿವೆ ಎಂದು ಕಂಡುಬರುತ್ತದೆ. ಈ ದಿಸೆಯಲ್ಲಿ ಸರ್ವೆ ಮತ್ತು ಸೆಟಲ್‌ಮೆಂಟಿನಲ್ಲಿ ಗಮನಾರ್ಹವಾದ ಪ್ರಗತಿಯಾಗಿದೆ, ಒಳ್ಳೆಯ ರೀತಿಯಲ್ಲಿ ಕೆಲಸ ನಡೆದಿದೆ. ಸುಮಾರು ಒಂದು ವರ್ಷದ ಒಳಗೆ ಇಷ್ಟರಮಟ್ಟಿನ ಕೆಲಸ ನಡೆದಿದೆ. ಇನ್ನೂ ಒಂದು ವರ್ಷದ ಒಳಗಾಗಿ ಎಲ್ಲ ಕೆಲಸಗಳೂ ಪೂರ್ತಿಯಾಗಿ ನಮ್ಮ ರಾಜ್ಯದೊಳಗೆ ಎಲ್ಲ ಸರ್ವೆ ಸೆಟಲ್‌ಮೆಂಟ್ ಕೆಲಸ ಪೂರ್ತಿಯಾಗಿ ನಮ್ಮ ಕಂದಾಯ ಖಾತೆಯಲ್ಲಿ ಬಹಳ ಪ್ರಗತಿಯಾಗುತ್ತದೆ ಎನ್ನುವ ಆಶಯವನ್ನು ನಾನು ಇಟ್ಟುಕೊಂಡಿದ್ದೇನೆ.

ಇನ್ನೊಂದು ಗಮನಿಸಬೇಕಾದ ಅಂಶವೆಂದರೆ, ಎನ್‌ಕ್ರೋಚ್‌ಮೆಂಟ್ ವಿಷಯ. ಭೂಮಿಯ ಆಕ್ರಮಣವಾಗಿರತಕ್ಕ ಕೇಸುಗಳಲ್ಲಿ ಸುಮಾರು ಒಂದು ಲಕ್ಷ 27 ಸಾವಿರ ಎಕರೆ ಆಕ್ರಮಣವಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. 29,301 ರಿಕಾರ್ಡ್‌ಗಳು ಬಿಲ್ಡ್ ಅಪ್ ಆಗಿ ವಿಲೇವಾರಿಯಾಗಿವೆ ಎಂದು ಕಂಡುಬರುತ್ತದೆ. Prevention of Fragmentation and Consolidation of Holdings Act ಪ್ರಕಾರ ರೂಲ್ಸ್ ಮಾಡಿದ್ದಾರೆ. ಬೆಳಗಾಂ ಜಿಲ್ಲೆಯೊಳಗೆ ಈ ಕೆಲಸ ಗಮನಾರ್ಹವಾದ ರೀತಿಯಲ್ಲಿ ನಡೆಯುತ್ತಿದೆ. ನಮ್ಮ ಬಳ್ಳಾರಿ ಜಿಲ್ಲೆಯ ದೃಷ್ಟಿಯಿಂದ ಹೇಳುವುದಾದರೆ, ಮದ್ರಾಸ್ ಕರ್ಣಾಟಕದ ಬಳ್ಳಾರಿ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಕೊಳ್ಳೆಗಾಲ ತಾಲ್ಲೂಕು ಮತ್ತು ಕೊಡಗು ಈ ಭಾಗಗಳಲ್ಲಿ ರಿಕಾರ್ಡ್ ಆಫ್ ರೈಟ್ಸ್ ಎನ್ನುವ ವಿಷಯವೇ ಇರಲಿಲ್ಲ. ಹೀಗಾಗಿ ನಮ್ಮ ಭೂಮಿಗೆ ಸಂಬಂಧಪಟ್ಟ ಲೆಕ್ಕಪತ್ರಗಳನ್ನು ಇಡುವುದರಲ್ಲಿ ದೊಡ್ಡ ಗೊಂದಲವಾಗಿತ್ತು. ಇತ್ತೀಚೆಗೆ ರಿಕಾರ್ಡ್ ಆಫ್ ರೈಟ್ಸ್ ಮಾಡತಕ್ಕ ಪದ್ಧತಿ ಬಂದು ಬಹಳ ಸುಧಾರಣೆಯಾಗುತ್ತಿದೆ, ಬಹಳ ತೃಪ್ತಿಕರವಾಗಿ ಕೆಲಸ ನಡೆಯುತ್ತಿದೆ. ಇದರಿಂದ ಆ ಭಾಗದ ಜನರಿಗೆ ದೊಡ್ಡ ಅನುಕೂಲವಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಹೀಗೆ ನಾನಾ ಮುಖವಾಗಿ ನಮ್ಮ ಕಂದಾಯ ಖಾತೆಯಲ್ಲಿ ಗಮನಾರ್ಹವಾದ ಕೆಲಸ ನಡೆಯುತ್ತಿದೆ.

ಬೆಂಗಳೂರು ನಗರದಂಥ ದೊಡ್ಡ ನಗರದ ಸರ್ವೆ ಕೆಲಸ ನಡೆಯುತ್ತಿದೆ. ಈಗಾಗಲೇ ಗಮನಾರ್ಹವಾದ ಪ್ರಗತಿಯನ್ನು ಸಾಧಿಸಿದೆ. ಇದರಲ್ಲಿ ಒಂದು ಸೂಚನೆಯನ್ನು ಮಾಡಬಯಸುತ್ತೇನೆ. ಇಂಥ ಒಂದು ಸರ್ವೆ ಕೆಲಸ ಬರೀ ಬೆಂಗಳೂರು ನಗರದಲ್ಲಿ ಮಾತ್ರ ನಡೆಯುತ್ತಿಲ್ಲ ಇನ್ನೂ ಅನೇಕ ಗ್ರಾಮಗಳಲ್ಲಿ ನಡೆಯುತ್ತಿದೆ ಎಂದು ಕಂಡುಬರುತ್ತದೆ. ಅದರ ಜೊತೆಗೆ ನಮ್ಮ ರಾಜ್ಯದ ಪ್ರತಿಯೊಂದು ಗ್ರಾಮದಲ್ಲಿಯೂ ಸಹ ಸರ್ವೆ ಕೆಲಸ ನಡೆಯಬೇಕು. ಹೀಗಾದರೆ ಸಮಗ್ರವಾಗಿ ಕೆಲಸ ನಡೆಯುವುದಕ್ಕೆ ಅನುಕೂಲತೆ ಆಗುತ್ತದೆ ಎನ್ನುವ ಸೂಚನೆಯನ್ನು ಸರ್ಕಾರದ ಮುಂದೆ ಇಡಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಟಿಬೆಟನ್ ನಿರಾಶ್ರಿತರು ಮತ್ತು ಸಿಲೋನಿನಿಂದ ಬಂದಿರುವ ಇಂಡಿಯನ್ ರೀಪ್ಯಾಟ್ರಿಯೇಟ್ಸ್, ಇವರಿಗೆ ರಾಜ್ಯ ಸರ್ಕಾರ ಅನುಕೂಲತೆಯನ್ನು ಮಾಡಿಕೊಟ್ಟಿದೆ. ಟಿಬೆಟನ್ ನಿರಾಶ್ರಿತರಿಗೆ 800 ಕುಟುಂಬಗಳಿಗೆ ನಾಲ್ಕು ಸಾವಿರ ಎಕರೆ ಭೂಮಿಯನ್ನು ಕೊಟ್ಟಿರುವುದಲ್ಲದೆ ವಸತಿ ಸೌಕರ್ಯವನ್ನೂ ಕಲ್ಪನೆ ಮಾಡಿದ್ದಾರೆ. ಸಿಲೋನ್‌ನಿಂದ ಬಂದಿರುವ ಭಾರತೀಯರಿಗೂ ಕೂಡ ವಸತಿ ಸೌಕರ್ಯಕ್ಕಾಗಿ ಅನುಕೂಲ ಮಾಡಿಕೊಟ್ಟು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ನಮ್ಮ ರಾಜ್ಯಕ್ಕೆ ಕೀರ್ತಿ ಬರತಕ್ಕ ಕೆಲಸವನ್ನು ರೆವೆನ್ಯೂ ಖಾತೆಯವರು ಮಾಡಿದ್ದಾರೆಂದರೆ ಅತಿಶಯೋಕ್ತಿಯಲ್ಲ. ಇಷ್ಟೊಂದು ಪ್ರಗತಿಪರವಾದ ಕೆಲಸ ನಡೆಯುತ್ತಿದೆ. ಆದರೂ ಆಗಬೇಕಾದ ಕೆಲಸ ಇನ್ನೂ ಬೇಕಾದಷ್ಟು ಇದೆ. ಇಷ್ಟೇ ಅಲ್ಲ, ಆಗಿರತಕ್ಕ ಕೆಲಸದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುವುದಲ್ಲದೆ ಆಗಬೇಕಾದ ಕೆಲಸದ ಬಗ್ಗೆ ಸಹ ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ ಮತ್ತು ಅದರೊಳಗೆ ಇರತಕ್ಕ ಲೋಪದೋಷಗಳನ್ನು ಸಹಿತ ಏನೂ ಮುಚ್ಚಿಡದೆ ಸರ್ಕಾರದ ಗಮನಕ್ಕೆ ತರುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಗ್ರಾಮಾಧಿಕಾರಿಗಳ ಅನುವಂಶಿಕ ಹಕ್ಕನ್ನು ನಿರ್ಮೂಲ ಮಾಡಿದಮೇಲೆ ಗ್ರಾಮಾಧಿಕಾರಿಗಳ ಪರಿಸ್ಥಿತಿ ಒಂದು ರೀತಿಯ ತ್ರಿಶಂಕು ಸ್ವರ್ಗವಾಗಿದೆ. ಅವರಿಗೆ ನಿರ್ದಿಷ್ಟವಾದ ಕೆಲಸವಿಲ್ಲ, ನಿರ್ದಿಷ್ಟವಾದ ಅಧಿಕಾರ ವ್ಯಾಪ್ತಿ ಇಲ್ಲ, ನಿರ್ದಿಷ್ಟವಾದ ಪ್ರತಿಫಲವಿಲ್ಲ. ಹೀಗೆ ಸಂಬಳಕ್ಕೆ ತಕ್ಕಂತೆ ಕೆಲಸವಿಲ್ಲ, ಕೆಲಸಕ್ಕೆ ತಕ್ಕ ಸಂಬಳವಿಲ್ಲ. ಅವರು ಮಾಡಬೇಕಾದ ಕೆಲಸ ಸಾಕಾದಷ್ಟು ಇದೆಯೋ ಎನ್ನುವುದೂ ಗೊತ್ತಿಲ್ಲ. ಹೀಗೆ ಅನಾಮಲಸ್ ಪೊಸಿಷನ್ ಆಗಿ ತೃಪ್ತಿಕರವಾಗಿ ಕೆಲಸ ನಡೆಯುವುದಕ್ಕೆ ಅಡ್ಡಿಯಾಗಿದೆ. ಆದಕಾರಣ ಅಂಥದ್ದನ್ನು ತಪ್ಪಿಸಿ ಗ್ರಾಮಾಧಿಕಾರಿಗಳ ಪರಿಸ್ಥಿತಿಯನ್ನು ನಿರ್ದಿಷ್ಟಗೊಳಿಸಿ ಆ ಬಗ್ಗೆ ಒಂದು ನಿರ್ಧರವಾದ ನಿಲುವನ್ನು ಸರ್ಕಾರ ತೆಗೆದುಕೊಂಡು ಕೂಡಲೇ ಜಾರಿಗೆ ತರಬೇಕು.

ಗ್ರಾಮದ ಕರಣಿಕನ ವಿಚಾರ ತೆಗೆದುಕೊಂಡರೆ, ವಿಲೇಜ್ ಅಕೌಂಟೆಂಟ್ ಅಥವಾ ಪಂಚಾಯಿತಿ ಸೆಕ್ರೆಟರಿ ಈ ಹುದ್ದೆಗಳಿಗೆ ಗ್ರಾಮಾಧಿಕಾರಿಗಳ ಸೇವೆಯನ್ನು ಸರ್ಕಾರ ಸೂಕ್ತರೀತಿಯಲ್ಲಿ ಕೈಕೊಂಡು ಅದಕ್ಕೆ ಸರಿಯಾದ ವ್ಯವಸ್ಥೆಯನ್ನು ರೂಪಿಸಬೇಕೆಂದು ಸರ್ಕಾರಕ್ಕೆ ಸೂಚಿಸಬಯಸುತ್ತೇನೆ.

ಕ್ಷಾಮ ಪರಿಹಾರದ ಸಂಬಂಧದಲ್ಲಿ ಕೂಡ ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ಇದಕ್ಕಾಗಿ 64 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆಂದು ಕೇಳಿದೆ. ಅದಕ್ಕಾಗಿ ರೆವೆನ್ಯೂ ಮಂತ್ರಿಯವರನ್ನೂ ಅಭಿನಂದಿಸುತ್ತೇನೆ. ಆದರೆ ಕ್ಷಾಮ ಪರಿಹಾರದ ಕೆಲಸ ಆಗಬೇಕಾದ ಕಡೆ ಸಾಕಷ್ಟು ತೃಪ್ತಿಕರವಾಗಿ ನಡೆಯುತ್ತಿಲ್ಲ. ಅದರಲ್ಲಿಯೂ ಮುಖ್ಯವಾಗಿ ಬಳ್ಳಾರಿ ಜಿಲ್ಲೆಯ ಹಡಗಲಿ, ಮಲ್ಲಾಪುರ, ಹರಪನಹಳ್ಳಿ, ಕೂಡ್ಲಿಗಿ, ಈ ತಾಲ್ಲೂಕುಗಳಲ್ಲಿ ಬಹಳ ದುರ್ಭಿಕ್ಷ ಪರಿಸ್ಥಿತಿ ಇದೆ. ಬಳ್ಳಾರಿ ಜಿಲ್ಲೆ ಎಂದರೆ ತುಂಗಭದ್ರ ಪ್ರಾಜೆಕ್ಟ್, ಹಂಪಿ ಎಂದು ಹೇಳುತ್ತಾರೆ. ಆದರೆ ನಿಜವಾಗಿ ತುಂಗಭದ್ರ ಪ್ರಾಜೆಕ್ಟ್‌ನಲ್ಲಿ ಸರ್ವಸ್ವವನ್ನೂ ಕಳೆದುಕೊಂಡಿರುವ ಜನರ ಗೋಳು ಹೇಳತೀರದು. ಈ ಪ್ರದೇಶಕ್ಕೆ ಹೆಚ್ಚು ಗಮನಕೊಟ್ಟು ಕ್ಷಾಮ ಪರಿಹಾರ ಕಾರ್ಯವನ್ನು ಸರ್ಕಾರ ಕೈಕೊಂಡು ಪರಿಹಾರವನ್ನು ಒದಗಿಸಬೇಕೆಂದು ಹೇಳುತ್ತೇನೆ.

ಈಗ ತುರ್ತಾಗಿರತಕ್ಕ ಪ್ರಶ್ನೆ ಎಂದರೆ ನೀರಿನ ಸಮಸ್ಯೆ. ರೈತನಿಂದ ಭೂ ಕಂದಾಯವನ್ನು ಅಥವಾ ಸಾಲದ ಬಾಕಿಯನ್ನು ವಸೂಲು ಮಾಡುವಾಗ ಸರ್ಕಾರಿ ಅಧಿಕಾರಿಗಳು ರೈತರಿಗೆ ಹಿಂಸೆ ಕೊಟ್ಟು, ಒತ್ತಾಯ ಮಾಡಿ ವಸೂಲ್ಮಾಡುತ್ತಿದ್ದಾರೆ. ಸಾಲ ತೆಗೆದುಕೊಂಡಿರುವ ಹಣವನ್ನು ಕೊಡಲಿಕ್ಕೆ ಯೋಗ್ಯತೆ ಇಲ್ಲದೆ ಇರುವ ರೈತರಿಗೆ ಬಾಕಿ ಇರುವ ಹಣವನ್ನು ಒಂದೇ ಗಂಟಿನಲ್ಲಿ ಕೊಡಬೇಕು ಎನ್ನುವುದನ್ನು ತಪ್ಪಿಸಿ ಕಂತುಗಳಲ್ಲಿ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಭೂಕಂದಾಯದ ವಿಚಾರವಾಗಿ ಅನೇಕ ಸದಸ್ಯರು ಹೇಳಿದ್ದಾರೆ. ನಾನು ಹೇಳುವುದಾದರೂ ಭೂಕಾಂದಾಯದಲ್ಲಿ ಸಣ್ಣ ರೈತರಿಗೆ ಸವಲತ್ತು ಒದಗುವಂತೆ ಸರ್ಕಾರದವರು ಕಂದಾಯವನ್ನು ರೂಪಿತಗೊಳಿಸಬೇಕು. ಐದು ಎಕರೆ ಮತ್ತು ಅದಕ್ಕಿಂತ ಕಡಮೆ ಭೂಮಿ ಇರುವ ರೈತನಿಂದ ಭೂಕಂದಾಯವನ್ನು ವಸೂಲು ಮಾಡದೆ ದೊಡ್ಡ ರೈತರಿಂದ ಇನ್ನೂ ಹೆಚ್ಚಿನ ರೀತಿಯಲ್ಲಿ ಕಂದಾಯ ವಸೂಲು ಮಾಡುವುದನ್ನು ಸರ್ಕಾರ ಅನುಸರಿಸಬೇಕು ಎಂದು ಹೇಳುತ್ತೇನೆ.

(ಶ್ರೀ ಎನ್. ಎಂ. ಕೊಟ್ರಬಸಯ್ಯ ಸೊಗಿ)

ಡಿವಿಜನಲ್ ಕಮಿಷನರ್ ಇರುವುದರಿಂದ ಗ್ರಾಮಾಂತರ ಪ್ರದೇಶದ ರೈತರಿಗೆ ತೊಂದರೆ ಇದೆ. ಅದನ್ನು ತಪ್ಪಿಸಬೇಕು. ಡಿವಿಜನಲ್ ಕಮಿಷನರ್ ಹುದ್ದೆಗಳು ಇರುವುದರಿಂದ ಕೆಲಸ ಬಹಳ ನಿಧಾನವಾಗುತ್ತಿದೆ ಮತ್ತು ರೈತರಿಗೆ ತೊಂದರೆಯಾಗುತ್ತಿದೆ. ಬಳ್ಳಾರಿ ಜಿಲ್ಲೆಯ ವಿಷಯ ಹೇಳಬೇಕೆಂದರೆ, ಅದು ಗುಲ್ಬರ್ಗ ಡಿವಿಜನ್ನಿಗೆ ಸೇರಿದೆ, ಯಾವುದಾದರೂ ಕೆಲಸಕ್ಕೆ ಬಳ್ಳಾರಿಯಿಂದ ಗುಲ್ಬರ್ಗಕ್ಕೆ ಹೋಗಬೇಕಾದರೆ 250 ಮೈಲಿ ಫಾಸಲೆ ಆಗುತ್ತದೆ. ಗುಲ್ಬರ್ಗದಿಂದ ಬೆಂಗಳೂರಿಗೆ ಬರಬೇಕಾದರೆ 500 ಮೈಲಿ ಬರಬೇಕು. ಇಂಥ ಒಂದು ಕೆಟ್ಟ ಪರಿಸ್ಥಿತಿಯಾಗಿದೆ. ಆದಕಾರಣ ಡಿವಿಜನಲ್ ಕಮಿಷನರ್ ಹುದ್ದೆಗಳು ಇರಬೇಕಾದ್ದು ಅನಾವಶ್ಯಕ. ಅವನ್ನು ತೆಗೆಸಿ ಸರ್ಕಾರ ನೇರವಾಗಿ ಜಿಲ್ಲಾಧಿಕಾರಿಗಳೊಂದಿಗೆ ವ್ಯವಹಾರ ಮಾಡುವಂಥ ಅವಕಾಶ ಮಾಡಿಕೊಡಬೇಕೆಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

5-30 P.M.

ಅಫಾರ್‌ಸ್ಟೇಷನ್ ವಿಚಾರ. ಈ ಕೆಲಸವನ್ನು ತ್ವರಿತವಾಗಿ ನಡೆಸಬೇಕು ಅರಣ್ಯಖಾತೆಗೆ ಸಂಬಂಧಪಟ್ಟ ಕೆಲವು ಜಮೀನುಗಳನ್ನು ಮುಂಡಗೋಡ ತಾಲ್ಲೂಕಿನಲ್ಲಿ ಹರಿಜನರಿಗೆ ಸಾಗುವಳಿಗೆ ಕೊಟ್ಟಿದ್ದರು. 5 ವರ್ಷ ಅವರು ಸಾಗುವಳಿ ಮಾಡಿದ್ದರೂ ಅವರಿಗೆ ಭೂಮಿಯನ್ನು ಖಾಯಂ ಮಾಡಿಲ್ಲ. ಬೇಕಾದವರಿಗೆ ಮಾತ್ರ ಅನುಕೂಲಮಾಡಿದ್ದಾರೆ. ಕೆಲವರು ಬೇಕಾದವರಿಗೆ ಪಟ್ಟೆ ಮಾಡಿದ್ದರೂ ಹರಿಜನರು ಕೇಳಿದರೆ ಗಮನ ಕೊಟ್ಟಿಲ್ಲ. ಯಾವುದೇ ರೀತಿಯಲ್ಲಿ ಅಧಿಕಾರಿಗಳಿಗೆ ಸಹಾಯಮಾಡದಿರುವವರಿಗೆ ತೊಂದರೆ ಮಾಡಿ ಲ್ಯಾಪ್ಸ್ ಮಾಡಿದ್ದಾರೆ, ಭೂಮಿ ಇಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲದಂತೆ ಮಾಡಿದ್ದಾರೆ. ಇದನ್ನು ತಪ್ಪಿಸಿ ಎಲ್ಲರಿಗೂ ಸಮಾನ ಅವಕಾಶ ಕೊಡಬೇಕು ಎಂದು ವಿಜ್ಞಾಪನೆ ಮಾಡಿ ನಮ್ಮ ಮುಂದಿರುವ ಬೇಡಿಕೆಗಳನ್ನು ಸಮರ್ಥನೆ ಮಾಡಿ ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸುತ್ತೇನೆ.

† ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಮಾನ್ಯ ಅಧ್ಯಕ್ಷರೇ, ಕಂದಾಯದ ವಿಚಾರವನ್ನು ನೋಡಿದರೆ ಸರಕಾರದವರು ಯಾವ ರೀತಿ ಜನರಿಂದ ಅದನ್ನು ವಸೂಲು ಮಾಡುತ್ತಿದ್ದಾರೋ ತಿಳಿಯದು. ಹಳ್ಳಿಗಾಡುಗಳಲ್ಲಿ ಕಂದಾಯ ಮಾಫಿ ಮಾಡುವುದಾಗಿ ಹೇಳಿದ್ದರು. ಆದುದರಿಂದ ಯಾವಾಗ ಮಾಫಿ ಮಾಡುವುದು ಎಂದು ರೈತರು ಕೇಳುತ್ತಾರೆ. ಇಲ್ಲಿ ಸರಕಾರದವರು ಕಂದಾಯವನ್ನು ತೆಗೆದುಹಾಕುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಈ ವಿಚಾರದಲ್ಲಿ ಸರಕಾರ ಆದಷ್ಟು ಬೇಗ ಒಂದು ನಿಲುವನ್ನು ತೆಗೆದುಕೊಂಡು ಸರಕಾರಕ್ಕೆ ಬರಬೇಕಾದ ಬಾಕಿಯನ್ನು ವಸೂಲುಮಾಡುವುದು ಬಿಡುವುದನ್ನು ತಿಳಿಸಬೇಕು. ರೈತರಿಗೆ ಬಹಳ ಆಸೆ ಇದೆ, ಅದಕ್ಕಾಗಿ 3 ವರ್ಷದಿಂದ ಅವರು ಕಂದಾಯ ಕೊಟ್ಟಿಲ್ಲ, ಅದು ಏರುತ್ತಾ ಇದೆ. ಅಲ್ಲದೆ ಈಗ ಕ್ಷಾಮದ ದೆಶೆಯಿಂದ ಕಂದಾಯ ಕೊಡುವ ಸ್ಥಿತಿಯಲ್ಲೂ ಇಲ್ಲ. ಆದುದರಿಂದ ನಾಲ್ಕು ಜನ ಸಂಬಂಧಪಟ್ಟವರು ಕಲೆತು ಒಂದು ತೀರ್ಮಾನಕ್ಕೆ ಬರಬೇಕು, ನಮ್ಮ ಹಳ್ಳಿಗಾಡಿನವರಿಗೂ ಹಾಗೆ ಮಾಡುವಾಗ ಒಂದು ಪ್ರಾತಿನಿಧ್ಯ ಕೊಡಬೇಕು, ಇದಕ್ಕೆ ಒಂದು ಸಮಿತಿ ಮಾಡಬೇಕು, ಕಂದಾಯವನ್ನು ಯಾವ ರೂಪದಲ್ಲಿ ಹಾಕಬೇಕೆಂಬುದನ್ನು ತೀರ್ಮಾನ ಮಾಡಬೇಕು. ಈಗ ಜಂಗಲ್ ಲಾ ಇದೆ, ಬಲಾಢ್ಯನಾಗಿರುವವನು ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಾನೆ, ಇಂಥ ಉದಾಹರಣೆಗಳು ಬಹಳ ಇವೆ. ಬಡವರಿಗೆ, ಜಮೀನಿಲ್ಲದಿರುವವರಿಗೆ, ಯೋಗ್ಯರಿಗೆ ಜಮೀನು ದೊರೆಯದಿರುವಾಗ ಅವರಿಗೆ ಅವಕಾಶ ಇಲ್ಲದಂತೆ ಮಾಡಿ ಕೆಲವರು ಜಮೀನನ್ನು ಆಕ್ರಮಿಸಿಕೊಂಡಿದ್ದಾರೆ, ಸಬ್ ಡಿವಿಜನ್ ಆಫೀಸರು, ಜಿಲ್ಲಾಧಿಕಾರಿಗಳು ಮುಂತಾದವರು ಯಾರು ಬಂದರೂ ಕೂಡ ಅವರು ಜಮೀನನ್ನು ಬಿಡುವುದಿಲ್ಲ. ಹಾಗಿರುವಾಗ ಸರಕಾರದವರು ಒಂದು ಸರಿಯಾದ ನಿಲುವನ್ನು ತೆಗೆದುಕೊಳ್ಳಬೇಕು, ಕಂದಾಯ ಮಾಫಿ ಮಾಡುವ ವಿಚಾರ ಸ್ಪಷ್ಟಪಡಿಸಬೇಕು. ಅಕಸ್ಮಾತ್ ಕಂದಾಯ ಉಳಿಸಿದರೆ ಯಾವ ರೀತಿ ಉಳಿಸುವುದು ಎಂಬುದನ್ನು ತಿಳಿಸಬೇಕು. ಹಿಂದೆ ಕಂದಾಯವೆನಿತ್ತೋ ಅದನ್ನೇ ಉಳಿಸಿದರೆ ರೈತರಿಗೆ ಹಕ್ಕು ದೊರೆಯುವುದಲ್ಲದೆ ಕೋರ್ಟು ಕಛೇರಿಗಳಲ್ಲಿ ಸಾಕ್ಷಿಗೆ ಆಧಾರವಾಗಿರುವುದು, ರಕ್ಷಣೆ ದೊರೆಯುವುದು. ಗೋಮಾಳ ಮತ್ತು ಕಾಡು ಪ್ರದೇಶದಲ್ಲಿ ಕೆಲವು ಭಾಗವನ್ನು ಸಾಗುವಳಿಗೆ ಕೊಟ್ಟಿದ್ದಾರೆ. ಉಳಿದಿರುವ ಪ್ರದೇಶವನ್ನು ವ್ಯವಸಾಯಕ್ಕೆ ಕೊಡಬಾರದೆಂದು ಸರಕಾರದ ಕಾನೂನಿದೆ ಎಂದು ಹೇಳುತ್ತಾರೆ. ಇದರಿಂದ ಆಗುವುದೇನೆಂದರೆ ಗೋಮಾಳ ಉಳಿಯುವುದಿಲ್ಲ. ಅಜುಬಾಜು ಇರುವ ಹಿಡುವಳಿದಾರರು ವರ್ಷೇ ವರ್ಷೇ ಸ್ವಲ್ಪ ಸ್ವಲ್ಪವಾಗಿ ಅದನ್ನು ಒತ್ತುವರಿ ಮಾಡುತ್ತಾರೆ. ಇದರಿಂದ ಬಡವರಿಗೆ ತೊಂದರೆಯಾಗುವುದಲ್ಲದೆ

ಸರಕಾರಕ್ಕೂ ಹಣ ಬರುವುದಿಲ್ಲ. ಆದುದರಿಂದ ಗೋಮಾಳದಲ್ಲಿ ಉಳಿದಿರುವುದನ್ನು ರೈತರಿಗೆ ಹಂಚಬೇಕು. ಹಿಂದೆ 14 ವರ್ಷ ಪರಭಾರೆ ಮಾಡಬಾರದೆಂದು ಒಂದು ಷರತ್ತು ಹಾಕುತ್ತಿದ್ದರು, ಈಗ ಆ ಕಾಲಂ ಬಿಟ್ಟು ಜಮೀನನ್ನು ಕೊಟ್ಟಿರುತ್ತಾರೆ, ಷರತ್ತು ಹಾಕಿಲ್ಲ, ಕೋರ್ಟಿನಲ್ಲಿ ನಿಲ್ಲುವುದಿಲ್ಲ ಎಂದು ಈಗ ಹೇಳುತ್ತಾರೆ. ಆದುದರಿಂದ ಮುಂದೆ ಕೊಡುವಾಗ ಇಷ್ಟು ವರ್ಷ ಪರಭಾರೆ ಮಾಡಬಾರದು ಎಂದು ಷರತ್ತು ಹಾಕಬೇಕು. ಮತ್ತು ಕೊಂಡಿರುವ ಜಮೀನನ್ನು ವಾಪಸು ಪಡೆದು ಬಡವರಿಗೆ ಹಂಚಬೇಕು. ಹೀಗೆ ಮಾಡಿ ಉಳುವವನಿಗೆ ಜಮೀನು ರಿಲೀಸ್ ಮಾಡಿ ಕೊಡುವುದಾದರೆ ಸಾರ್ಥಕವಾಗುತ್ತದೆ.

[MR. CHAIRMAN (SRI S. D. KOTHAVALE) in the Chair]

ಹಿಂದೆ 14 ವರ್ಷ ಪರಭಾರೆ ಮಾಡಬಾರದೆಂಬ ಕಂಡೀಷನ್ ಇದ್ದುದನ್ನು ತೆಗೆದುಕೊಟ್ಟಿರುವುದು ಗಮನಕ್ಕೆ ಬಂದರೆ ಅದನ್ನು ವಾಪಸು ಪಡೆಯುವಂತೆ ತಾಲ್ಲೂಕು ಕಛೇರಿಗೆ ಮತ್ತು ರೆವೆನ್ಯೂ ಅಧಿಕಾರಿಗಳಿಗೆ ಸೂಚನೆ ಕೊಡಬೇಕು. ಇಂಥ ಜಮೀನು ಬಹಳವಿದೆ. ಬಡವರ ಹೆಸರಿನಲ್ಲಿ ಶ್ರೀಮಂತರು ಸಾವಿರಾರು ಎಕರೆಗಳನ್ನು ಪಡೆದಿದ್ದಾರೆ, ಅದರಲ್ಲಿ ಸಾವಿರಾರು ತೆಂಗಿನ ಮರಗಳನ್ನು ಹಾಕಿದ್ದಾರೆ. ಸರಕಾರಿ ಅಧಿಕಾರಿಗಳು ಅವರ ಮೇಲೆ ಸರಿಯಾದ ಕ್ರಮ ಕೈಕೊಳ್ಳುತ್ತಿಲ್ಲ.

ಸ್ಟ್ಯಾಂಪುಗಳು. ನಮ್ಮ ಊರಿನಲ್ಲಿ ಒಂದು ತಿಂಗಳಾದರೂ ಬೇಕಾದ ಸ್ಟ್ಯಾಂಪು ದೊರೆಯದೆ 25 ಮೈಲಿ ದೂರ ಹೋಗಿ ಚಿಕ್ಕಮಗಳೂರು, ತರೀಕೆರೆಗೆ ಹೋಗಿ ತರಬೇಕಾದ ಪರಿಸ್ಥಿತಿಯಿದೆ. ಆದುದರಿಂದ ವ್ಯಾಪಾರ ಮಾಡುವವರು ತೆಗೆದುಕೊಳ್ಳುವವರೇ ರಿಜಿಸ್ಟ್ರೇಷನ್ ಫೀಜನ್ನು ಕೊಡಬೇಕೆಂದು ಹೇಳುತ್ತಿರುತ್ತಾರೆ. ಬಡವರಿಗೆ ರಿಜಿಸ್ಟರು ಮಾಡಿಸುವುದಕ್ಕೆ ತೊಂದರೆಯಾಗಬಾರದು. ಮದ್ರಾಸು ಮತ್ತಿತರ ಕಡೆ ಮಾಡಿರುವುದನ್ನು ನೋಡಿ ಒಂದು ಸುವ್ಯವಸ್ಥೆಯನ್ನು ಮಾಡಬೇಕು.

ಫ್ಯಾಮಿನ್ ರಿಲೀಫ್ ಕೆಲಸ. ಇದಕ್ಕೆ ಸುಮಾರು 60 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಇದು ಸದುಪಯೋಗವಾಗಬೇಕು, ಅದಕ್ಕೆ ಗೋಕಟ್ಟೆಗಳ ನಿರ್ಮಾಣ ಮಾಡುವುದು ಒಳ್ಳೆಯದು. ಮಳೆಯಿಲ್ಲದಿರುವಾಗ ರಸ್ತೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ, ಕೊಡುವ ಹಣ ಖರ್ಚಾಗಿ ಸದುಪಯೋಗವಾಗುವುದಿಲ್ಲ, ಲ್ಯಾಪ್ಸಾಗುತ್ತದೆ. ನಮ್ಮ ತಾಲ್ಲೂಕಿಗೆ ಸುಮಾರು 35,000 ರೂಪಾಯಿಗಳನ್ನು ಕೊಡಲಾಗಿದೆ, ಅದರಲ್ಲಿ 15,000 ರೂಪಾಯಿ ಕೂಡ ಖರ್ಚಾಗಿಲ್ಲ. ಸುಮ್ಮನೆ ಪ್ರಯೋಜನವಾಗದಿರುವ ಕೆಲಸಗಳಿಗೆ ಕೊಡುವುದರಿಂದ ಕೊಟ್ಟಿದ್ದೇವೆಂದು ತೋರಿಸುವುದರಿಂದೇನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಗೋಕಟ್ಟೆಗಳನ್ನು ಕಟ್ಟಿದರೆ ಕೆಲಸವೂ ಸುಲಭವಾಗುವುದು, ಜನರಿಗೂ ಕಷ್ಟವಿಲ್ಲದ ಕೆಲಸವಾಗಿ ಅನುಕೂಲವಾಗಿ ಹಣವೂ ಖರ್ಚಾಗುವುದು.

ಶ್ರೀ ಬಿ. ರಾಚಯ್ಯ.—ಈಗ ಗೋಕಟ್ಟೆ ಕೆಲಸ ತೆಗೆದುಕೊಳ್ಳಬಹುದೆಂದು ತಿದ್ದುಪಡಿ ಮಾಡಿದ್ದೇವೆ.

ಶ್ರೀ ಕೆ. ಎಂ. ತಮ್ಮಯ್ಯ.—ಬಹಳ ಒಳ್ಳೆಯದು. ನೀರಾವರಿ ಕೆಲಸವನ್ನೂ ಮಾಡಬಹುದು. ಆದರಿಂದ ಹಣವೂ ಸರಿಯಾಗಿ ವೆಚ್ಚವಾಗುವುದು.

ಅರಣ್ಯ ಸಂಪತ್ತು. ನಾನು ಚಿಕ್ಕಮಗಳೂರು ಜಿಲ್ಲೆಯಿಂದ ಬಂದಿದ್ದೇನೆ. ಅಲ್ಲಿ ಕಾಫಿ ತೋಟ ಮಾಡುವುದಾಗಿ ಹೇಳಿ ಕಾಡುಗಳಲ್ಲಿ ಚೆಕ್ಕು ಬಂದಿ ಹಾಕಿದ್ದಾರೆ, ಅದು ಸರಿಯಿಲ್ಲ. ಕಾಫಿ ತೋಟಗಳಿಗೆ ಜಮೀನನ್ನು ಕೊಡುವಾಗ ಮರಗಳಿದ್ದರೆ ಕಡಿದು ಕೊಡಬೇಕೆಂದು ಮಂತ್ರಿಗಳು ತಿಳಿಸಿದ್ದಾರೆ. ಅದೇನೋ ಒಳ್ಳೆಯದೇ. ಅದರೆ ಕಾಡು ಇರುವ ಪ್ರದೇಶವನ್ನು ಕೊಡುವುದೇಕೆ? ಕಾಡು ನಾಶವಾಗಿದ್ದರೆ ಮಳೆ ಸರಿಯಾಗಿ ಬರುವುದಿಲ್ಲ. ಹಿಂದೆ ನಮ್ಮ ಜಿಲ್ಲೆ ಚಿರಾಪುಂಜಿ ಎಂದು ಮಳೆಗೆ ಹೆಸರುವಾಸಿಯಾಗಿತ್ತು, ವರ್ಷಕ್ಕೆ ಸುಮಾರು 260 ಅಂಗುಲ ಹದ ಮಳೆಯಾಗುತ್ತಿತ್ತು ಈಗ ಮಳೆಯೂ ಇಲ್ಲ, ಬೆಳೆಯೂ ಇಲ್ಲ. ಆದುದರಿಂದ ಕಾಡನ್ನು ಆದಷ್ಟು ಉಳಿಸಬೇಕು. ಈಗ ನೀಲಗಿರಿ ಗಿಡಗಳನ್ನು ಬೆಳೆಸುತ್ತಿದ್ದಾರೆ. ಇದರಿಂದಾಗಿ ಕಿಟಕಿ, ಬಾಗಿಲು ಮುಂತಾದುವುಗಳನ್ನು ಮಾಡಲು ಬೇಕಾದ ಮರ ದೊರೆಯುವುದೇ ಕಷ್ಟವಾಗಿದೆ. ಆದುದರಿಂದ ಬೀಟೆ, ತೇಗ ಮುಂತಾದ ಮರಗಳನ್ನು ಹೆಚ್ಚಾಗಿ ಬೆಳೆಸಬೇಕು. ಬರೀ ನೀಲಗಿರಿ ಮರಗಳನ್ನೇ ಹೆಚ್ಚಾಗಿ ಬೆಳೆಸುವುದು ಸೂಕ್ತವಲ್ಲ, ಕಾಡು ಮರಗಳನ್ನು ಬೆಳೆಸಬೇಕು. ಅಲ್ಲದೆ ಈಗ ಮರಗಳ ಸಂಖ್ಯೆ ಕಡಮೆಯಾಗುತ್ತಿದೆ. ಆದುದರಿಂದ ಕಾಡು ಕಡಿಯುವುದನ್ನು ಕಡಮೆ ಮಾಡಬೇಕು. ಹೆಚ್ಚು ಕಾಡು ಇಲ್ಲದಿರುವ ಪ್ರದೇಶ ಬೇಕಾದರೆ ರೈತರಿಗೆ ಕೊಡಿ.

ಶ್ರೀಮತಿ ನಾಗಮ್ಮ (ಕಲ್ಮಲ).—ಮಾನ್ಯ ಅಧ್ಯಕ್ಷರೇ, ಈ ರೆವಿನ್ಯೂ ಡಿಮ್ಯಾಂಡದ ಮೇಲೆ ಒಂದೆರಡು ಮಾತು ಆಡಬೇಕೆಂದು ನಿಂತಿದ್ದೇನೆ. ಭೂಸುಧಾರಣೆ ಎಂದು ಬಹಳ ದಿವಸದಿಂದ ಹೇಳುತ್ತಾ ಇದ್ದುದ್ದು ಇದುವರೆಗೂ ಜಾರಿಗೆ ಬರಲಿಲ್ಲ. ಭೂಸುಧಾರಣೆ ಅಂದರೆ ಅದು ದೇಶಕ್ಕೆಲ್ಲಾ ಸಂಬಂಧಪಟ್ಟದ್ದು ಅದರ ಸಲುವಾಗಿ ಅದನ್ನು ಜಾರಿಗೆ ತರಬೇಕೆಂದು ಮಾನ್ಯ ಮಂತ್ರಿಗಳಿಗೂ ಮತ್ತು ಸರ್ಕಾರದವರಿಗೂ ನಾನು ಒತ್ತಿ ಹೇಳುತ್ತೇನೆ. ನಮ್ಮ ದೇಶಕ್ಕೆ ವಿಪತ್ತು ಬಂದಂತೆ ಕಾಣುತ್ತದೆ. ಏಕೆಂದರೆ ನಮ್ಮ ಮೈಸೂರು ದೇಶ ಬಹಳ ಬಡತನದ ದೇಶ, ರೆವಿನ್ಯೂ ಮಂತ್ರಿಗಳಿಗೆ ಮನವಿ ಮಾಡಿ ಕೊಳ್ಳುತ್ತೇನೆ, ನಮ್ಮ ದೇಶದ ಅಭಿವೃದ್ಧಿಯನ್ನು ನಾವು ಇದುವರೆಗೂ ನೋಡಲಿಲ್ಲ, ನಮ್ಮ ಹರಿಜನರು ಗಿರಿಜನರಿಗಾಗಿ ಕೊಟ್ಟ ಜಮೀನನ್ನು ಎಷ್ಟೋ ಜನ ಒತ್ತುವರಿ ಮಾಡಿಕೊಂಡು ಬಿಟ್ಟಿದ್ದಾರೆ ಇದುವರೆಗೂ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ. ಒಂದು ಸರ್ವೆ ಮಾಡಿ ಸರ್ವೆ ಸೆಟ್ಲಮೆಂಟ್ ಡಿಪಾರ್ಟ್‌ಮೆಂಟಿನವರು ರೈತರದು ಎಷ್ಟಿದೆ ಅವರದು ಎಷ್ಟಿದೆ ಎಂಬುದನ್ನು ಪರಿಶೀಲನೆ ಮಾಡ ಬೇಕೆಂದು ಮಾನ್ಯ ಮಂತ್ರಿಗಳಿಗೆ ಮೊದಲೇ ಹೇಳಿಕೊಂಡಿದ್ದೇನೆ, ಈಗಲೂ ಹೇಳುತ್ತಾ ಇದ್ದೇನೆ. ಪರಿಶೀಲನೆ ಮಾಡಿ ದೊಡ್ಡ ದೊಡ್ಡ ರೈತರು ಹರಿಜನರು ಗಿರಿಜನರು ಯಾರಿದ್ದಾರೆ ಅವರ ಜಮೀನಿನಲ್ಲಿ ಒತ್ತುವರಿ ಮಾಡಿಕೊಂಡಿದ್ದ ಪಕ್ಷದಲ್ಲಿ ಅವರನ್ನು ಓಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಇದುವರೆಗೂ ಅಧಿಕಾರಿಗಳು ಯಾರೂ ಕೂಡ ಅದನ್ನು ಪರಿಶೀಲನೆ ಮಾಡಿಲ್ಲ. ಇದರ ಸಲುವಾಗಿ ಗಮನಕೊಡಬೇಕೆಂದು ಪದೇ ಪದೇ ಹೇಳುತ್ತಾ ಇದ್ದೇನೆ. ಇದರಲ್ಲಿ ಮೇಲಿನ ಅಧಿಕಾರಿಗಳು ಒಳ್ಳೆಯವರು ಇದ್ದಾರೆ, ಕೆಳ ಅಂತಸ್ತಿನವರು ಆಟ ಆಡುತ್ತಾ ಇದ್ದಾರೆ ಬಡ ರೈತರು ಬಂದರೆ ಅವರನ್ನು ಯಾರೂ ಕೇಳುವವರೇ ಇಲ್ಲ. ಇದು ರೈತರ ದೇಶ ಅಂತ ಹೇಳುತ್ತಾ ಇದ್ದೀರಿ, ರೈತರು ಧರ್ಮಾತ್ಮರು ಅಂತ ಹೇಳುತ್ತೀರಿ, ಭೂಮಿ ಉಳುವವನೇ ಅರಸು ಅಂತ ಹೇಳುತ್ತೀರಿ, ಇದೆಲ್ಲಾ ಸುಮ್ಮನೆ ಕಾಗದದಲ್ಲಿ, ಮಾತಿನಲ್ಲಿ ಇರುತ್ತದೆಯೇ ಹೊರತು ಕಾರ್ಯತಃ ಯಾವುದನ್ನೂ ಮಾಡು ತ್ತಿಲ್ಲ. ಏಕೆಂದರೆ ರೈತರು ಬಂದರೆ ಏನೂ ಕೆಲಸ ಮಾಡಿ ಕೊಡುತ್ತಿಲ್ಲ, ನಿಮ್ಮ ಆಫೀಸಿನ ಬಾಗಿಲು ಕಾಯಬೇಕು ಸಲಾಮು ಹೊಡೆಯಬೇಕು. ಕುರ್ಚಿ ಬೆಂಚುಗಳಲ್ಲಿ ಆರಾಮವಾಗಿ ಕುಳಿತುಕೊಂಡು ನೀವು ಚೆನ್ನಾಗಿ ಇರಬೇಕು, ಮೂರು ಗಂಟೆಗೆ ಕಾಫಿಗೆ ಹೋಗಬೇಕು, ಬರಗಾಲ ಆಗಿ ರೈತರು ಇದುವರೆಗೂ ಕೂಳು ಕಾಣದ ಹಾಗೆ ಆಗಿದ್ದಾರೆ. ಏಕೆ ಹೇಳುತ್ತೇನೆ ಎಂದರೆ ಎಲ್ಲರನ್ನೂ ಸರ್ಕಾರ ದವರು ಸರಿಸಮಾನವಾಗಿ ನೋಡಬೇಕೆಂಬ ದೃಷ್ಟಿಯಿಂದ ಹೇಳುತ್ತಾ ಇದ್ದೇನೆ.

ಡಿವಿಜನಲ್ ಕಮಿಷನರ ಆಫೀಸು ತೆಗೆದು ಹಾಕಬೇಕೆಂದು ಹಿಂದೆಯೇ ಹೇಳಿದ್ದೆ. ಅದರೂ ಕೂಡ ಇದುವರೆಗೂ ಅದರ ಕಡೆಗೆ ಗಮನ ಕೊಟ್ಟಿಲ್ಲ. ಯಾವ ರೆಕಾರ್ಡ್ ಹೋದರೂ ಕೂಡ ಅದು ಪತ್ತೆ ಆಗುವ ಹಾಗೆಯೇ ಇಲ್ಲ, ನಮ್ಮಂಥವರು ಹೋದರೆ ಯಾರೂ ಕೇಳುವವರು ಇಲ್ಲ. ಇನ್ನು ಸಾಮಾನ್ಯ ರೈತರು ಹೋದರಂತೂ ದೇವರೇ ಗತಿ. ಅದ್ದರಿಂದ ಈ ಇಲಾಖೆಯನ್ನು ತೆಗೆದು ಹಾಕಬೇಕೆಂದು ಹೇಳುತ್ತೇನೆ.

ರೈತರಿಗೆ ಸಹಾಯ ಮಾಡಿ ಕೊಡುತ್ತೇವೆ, ಅಷ್ಟು ಮಾಡುತ್ತೇವೆ ಇಷ್ಟು ಮಾಡುತ್ತೇವೆ ಅಂತ ಹೇಳುವುದು ನಾಮ್ಕಾವಾಸ್ತೆ ಹೇಳಿದ ಹಾಗೆ ಆಯಿತು. ನಮ್ಮ ಹೈದ್ರಾಬಾದು ನವಾಬ್ರುದು ಶಾಲೆ ಇದ್ದ ಹಾಗೆ. ಇನ್ನು ಸಬ್ ರಿಜಿಸ್ಟ್ರಾರ್ ವಿಷಯ ಹೇಳಬೇಕಾದರೆ ರಾಯಚೂರು ಡಿಸ್ಟ್ರಿಕ್‌ನಲ್ಲಿ ಅವರು ಹೈದ್ರಾಬಾದು ನವಾಬರಂತೆ ಇದ್ದಾರೆ ಯಾರಾದರೂ ರೈತರು ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಬೇಕೆಂದು ಅರ್ಜಿ ಹಾಕಿದರೆ ರೈತರೇ ನಾಶವಾಗುತ್ತಾರೆ. ಷೆಡ್ಯೂಲ್ಡ್ ಕ್ಯಾಸ್ಟ್ ನವರು ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ತರುವುದಕ್ಕೆ ಹೋದರೆ 10—15 ರೂಪಾಯಿ ತೆಗೆದು ಕೊಂಡು ಕೊಡುತ್ತಾರೆ ಅವರಿಗೆ ಇದನ್ನು ಮುಫತ್ತಾಗಿ ಕೊಡಿಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ನಮ್ಮ ರೈತರು ಹೆಚ್ಚು ಆಹಾರ ಬೆಳೆಯುವುದಕ್ಕೆ ಬಾವಿ ತೆಗೆಯಲು ಹಣ ಸಹಾಯ ಮಾಡು ತ್ತೇವೆ ಅದರಿಂದ ಹೆಚ್ಚು ಫಸಲು ಬರುತ್ತದೆ ಎಂದು ಹೇಳುತ್ತೀರಿ. ಇದುವರೆಗೂ ಒಂದು ಪಂಪ್ ಸೆಟ್ಟನ್ನೂ ಕೂಡ ನಮ್ಮ ಕಡೆ ಕೊಟ್ಟಿಲ್ಲ. ಅಲ್ಲಿಗೆ ಆಫೀಸರು ಬಂದವರು 400 ರೂಪಾಯಿ ಒಂದು ಬಾವಿಗೆ ಮಂಜೂರು ಮಾಡುತ್ತಾರೆ. ಅದನ್ನು ಕೊಡುವುದಕ್ಕೆ ಎಷ್ಟೋ ಕಷ್ಟ. ಇಷ್ಟು ಜನ ಅಧಿಕಾರಿಗಳು ಇದ್ದು ಇಷ್ಟು ದುಡ್ಡು ಖರ್ಚು ಮಾಡಿದರೂ ಕೂಡ ಎಷ್ಟು ಬಾವಿಗಳ ಕೆಲಸ ಆಗಿದೆ ಎಷ್ಟು ಪಂಪ್ ಸೆಟ್‌ಗಳನ್ನು ಕೊಟ್ಟಿದ್ದೀರಿ ಎಂದರೆ ಯಾರೂ ಕೂಡ ಅದನ್ನು ಪರಿಶೀಲನೆ ಮಾಡಲಿಲ್ಲ ಕೇಳಲಿಲ್ಲ. ಲಕ್ಷಗಟ್ಟಲೆ ರೂಪಾಯಿ ಸಾಲ ತಂದಿದ್ದೀರಿ. ಇದು ಸರ್ಕಾರದವರಿಗೂ ತಿಳಿದಿದೆ. ಮಾನ್ಯ ಮಂತ್ರಿವರ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ವಿರೋಧ ಪಕ್ಷದವರೂ ಕೂಡ ಹೇಳುತ್ತಾರೆ, ಕಾಂಗ್ರೆಸ್ ಸರ್ಕಾರ ಬೇಕಾದಷ್ಟು ದುಡ್ಡು ಕೊಟ್ಟಿದೆ. ಆದರೆ ನಿಮ್ಮ ಸಿಬ್ಬಂದಿ ಅವರು ಏನಿದ್ದಾರೆ ಅವರು ಸರಿಯಾಗಿ ಕೆಲಸ ಮಾಡದ ಕಾರಣ ದುಡ್ಡು ಖರ್ಚಾಗದೆ ಹಾಗೆಯೇ ಉಳಿದುಕೊಂಡಿದೆ

ಎಂದು. ಅದು ನಿಜ, ಬೇಕಾದಷ್ಟು ದುಡ್ಡು ಕೊಟ್ಟಿದ್ದೀರಿ, ಬೇಕಾದಷ್ಟು ಕೆಲಸವಾಗಿದೆ. ನಮಗೆ ಸ್ವರಾಜ್ಯ ಬಂದಂದಿನಿಂದ ಬೇಕಾದಷ್ಟು ಕೆಲಸ ಮಾಡಿದ್ದೀರಿ, ರಸ್ತೆ ಆಗಬೇಕು, ಕೆರೆ ಆಗಬೇಕು, ಗೊಬ್ಬರ ಕೊಡಬೇಕು ಇದನ್ನೆಲ್ಲಾ ಸರ್ಕಾರದವರನ್ನು ನಾವು ಕೇಳಬೇಕಾಗಿದೆ.

ಒಬ್ಬ ಮಾನ್ಯ ಸದಸ್ಯರು.—ಸರ್ಕಾರ ಬೇಕಾದಷ್ಟು ಖರ್ಚು ಮಾಡುತ್ತಾ ಇದೆ, ಆದರೆ ಅನುಕೂಲ ಮಾತ್ರ ಆಗಿಲ್ಲ ಎಂದು ಹೇಳುತ್ತಾ ಇದ್ದೇವೆ ಅಷ್ಟೆ.

ಶ್ರೀಮತಿ ನಾಗಮ್ಮ.—ಫಾರೆಸ್ಟ್ ವಿಷಯದಲ್ಲಿ ಒಂದು ಮಾತು ಹೇಳಬಯಸುತ್ತೇನೆ, ಫಾರೆಸ್ಟ್ ಬಹಳವಾಗಿ ದುರುಪಯೋಗವಾಗುತ್ತಾ ಇದೆ. ಆ ರೀತಿ ಮಾಡಬಾರದು ಅದನ್ನು ಕಾಪಾಡಬೇಕೆಂದು ಹೇಳುತ್ತೇನೆ. ಅರಣ್ಯ ಎಂದರೆ ದೇವತೆ ಇದ್ದ ಹಾಗೆ ಮಳೆ ಬೆಳೆ ಚೆನ್ನಾಗಿ ಆಗಬೇಕಾಗಿದ್ದರೆ ಅರಣ್ಯ ಚೆನ್ನಾಗಿ ಇರಬೇಕು. ಮೈಸೂರು ಬೆಂಗಳೂರು ಡಿಸ್ಟ್ರಿಕ್ಟ್‌ಗಳಲ್ಲಿ ಕಾಡಿನಿಂದ ಸೌದೆಗಾಗಿ ಮರಗಳನ್ನು ಕಡಿದು ತರುತ್ತಾ ಇದ್ದಾರೆ ಅದರ ಕಡೆಗೆ ಸರಿಯಾದ ಗಮನ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಹರಿಜನರು, ಷೆಡ್ಯೂಲ್ಡ್ ಕ್ಯಾಸ್ಟ್‌ನವರ ಹೌಸಿಂಗ್‌ಗಾಗಿ 200 ರೂಪಾಯಿನ ಟಿಂಬರ್ ಕೊಡುತ್ತೀರಿ, ಅದನ್ನು 300 ರೂಪಾಯಿನಷ್ಟು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಜಿ. ಹಾಲಪ್ಪ (ಚನ್ನಗಿರಿ).—ಈ ಪ್ರತಿಯೊಂದು ಬೇಡಿಕೆಗಳನ್ನೂ ವಿರೋಧಿಸುತ್ತಾ ನಾಲ್ಕು ಮಾತುಗಳನ್ನು ಹೇಳಬೇಕೆಂದು ಇದ್ದೇನೆ. ನಾವೇನೋ ತಿಳಿದುಕೊಂಡಿದ್ದೆವು ನಮಗೆ ಸ್ವರಾಜ್ಯ ಬಂದರೆ ಕಾಮಧೇನು ಕಲ್ಪವೃಕ್ಷ ಧರೆಗೆ ಇಳಿದು ಬರುತ್ತದೆ ಎಂದು. 1942ನೇ ಇಸವಿಯಿಂದಲೂ ನಾನು ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಭಾಷಣ ಮಾಡುತ್ತಾ ಇದ್ದೆವು ನಮಗೆ ಸ್ವರಾಜ್ಯ ಬಂದಮೇಲೆ ಬೀಸುವ ಕಲ್ಲಿಗೆ ಬಿದುರಿನ ಗೂಟ ತೆಗೆದು ಬಂಗಾರದ ಗೂಟ ಮಾಡಿಸುತ್ತೇವೆ ಎಂದು, ಈಗ ನೋಡಿದರೆ ಬಿದರೂ ಸಹ ಸಿಕ್ಕದ ಹಾಗೆ ಆಗಿದೆ. ಇದೇ ಈಗ ಆಗಿರುವ ಬದಲಾವಣೆ ಬಿಳೀ ಚರ್ಮದವರು ಹೋಗಿ ಬಿಳೀ ಟೋಪಿಗೆಯವರು ಬಂದಿದ್ದಾರೆ ಅಷ್ಟೆ. ಅವರಲ್ಲಿದ್ದ ಅಧಿಕಾರ ದಕ್ಷತೆ ಅವರಲ್ಲಿದ್ದ ನ್ಯಾಯನಿಷ್ಠುರತೆಯನ್ನು ಇವರು ಕಲಿತುಕೊಳ್ಳಲಿಲ್ಲ. ನೀವು ಈ 20 ವರ್ಷದ ಅವಧಿಯಲ್ಲಿ ಮಾಡಿರುವ ಸಾಧನೆ ಎಂದರೆ ಅಂತರರಾಷ್ಟ್ರೀಯ ಭಿಕ್ಷಕರ ಶ್ರೇಣಿಯಲ್ಲಿ ಪ್ರಥಮಸ್ಥಾನ ನಮ್ಮ ದೇಶಕ್ಕೆ ಸಲ್ಲುತ್ತದೆ. ಮತ್ತು ಸಾಲಗಾರರ ದೇಶದಲ್ಲಿ ಪ್ರಥಮಸ್ಥಾನ ನಮ್ಮದಾಗಿದೆ. ನಾಚಿಕೆ ಇಲ್ಲದೆ ಹೇಸಿಕೆ ಇಲ್ಲದೆ ಬಹಳವಾಗಿ ಸಾಧನೆ ಮಾಡಿದ್ದೇವೆ ಅಂತ ಸುಮ್ಮನೆ ಪಟಾಕಿಹೊಡೆಯುತ್ತಾ ಇದ್ದೀರಿ. ಕೆನಡಾ ದೇಶದವರು ನಮ್ಮ ಇಂಡಿಯಾ ದೇಶಕ್ಕೆ ಹತ್ತು ಕೋಟಿ ರೂಪಾಯಿನ ಗೋಧಿಯನ್ನು ಸಾಲವಾಗಿ ಕೊಟ್ಟಿದ್ದಾರೆ. ಈ ಹಣವನ್ನು ಸೋಡಿ ಬಿಟ್ಟಿರುತ್ತಾರೆ. ಇದು ತುಂಬಾ ನಾಚಿಕೆ ಪಟ್ಟುಕೊಳ್ಳಬೇಕಾದ ಪರಿಸ್ಥಿತಿ. ಅವರಿಗೆ ಸಾಲ ನೀವು ಕೊಟ್ಟರೂ ಸರಿ ಕೊಡದಿದ್ದರೂ ಸರಿ. ಆದರೆ ನಮ್ಮ ಹಳ್ಳಿಗಳಲ್ಲಿ ಒಂದು ಗಾದೆ ಇದೆ. ಸಾಲಕೊಟ್ಟ ಸಾಹುಕಾರನು ಸಾಲಿಗನು ಸಾಲವನ್ನು ಕೊಡುವುದಕ್ಕೆ ಅಶಕ್ತನಾದಾಗ ''ನೀನು ನನ್ನ ಉಡಿದಾರವನ್ನು ಹಾಕಿಕೋ ನಾನು ಸಾಲ ಬಿಟ್ಟುಬಿಡುತ್ತೇನೆ'' ಎಂದು ಹೇಳತಕ್ಕ ವಾಡಿಕೆ ಇದೆ. ಅಂದರೆ ಸಾಲ ಮಾಡಿರತಕ್ಕವನು ಅವನ ತಂದೆಗೆ ಮಗನಾಗದೆ ಸಾಹುಕಾರನಿಗೆ ಮಗನಾದಂತೆ ಆಗುತ್ತದೆ. ಅದಕ್ಕೆ ಯಾರೂ ತಯಾರಿಲ್ಲ. ಅವರು ಮಾಡಿದ ಸಾಲವನ್ನು ಕೊಟ್ಟೇ ಕೊಡುತ್ತಾರೆ. ಆದರೆ ನೀವು ಸ್ವರಾಜ್ಯ ಬಂದ 20 ವರ್ಷಗಳು ಕಳೆದಾಗ್ಯೂ ಇಲ್ಲಿ ಸುಖೀರಾಜ್ಯವನ್ನು ಸ್ಥಾಪನೆ ಮಾಡುತ್ತೇವೆಂದು ಹೇಳುತ್ತಿರುವುದು ಬರೀ ಒಂದು ನಟನೆ—ನಾಟಕ ಅಷ್ಟೆ. ನೀವು ಇಲ್ಲಿ ಹೊಟ್ಟೆಹೊರೆಯುವುದಕ್ಕೆ ಬಂದಿರತಕ್ಕವರು. ನಿಮ್ಮ ಹಣೆಯಲ್ಲೇ ಬರೆದಿಲ್ಲ ಆ ಸುಖೀರಾಜ್ಯವನ್ನು ಸ್ಥಾಪನೆ ಮಾಡುವುದು.

ಇನ್ನು ಕರಪ್ಷನ್ ಬಗ್ಗೆ ಹೇಳುವುದಾದರೆ—ಇಲ್ಲಿ ರಾಜ್ಯಮಟ್ಟದಲ್ಲಿರತಕ್ಕ ಜನರು ಬಹಳ ಕಾಲದಿಂದಲೂ ತಮ್ಮ ಕೆಳಗಿನ ಅಧಿಕಾರಿಗಳನ್ನು ಸಿಕ್ಕಾಪಟ್ಟೆ ಜರಿಯುತ್ತಲೇ ಇದ್ದಾರೆ. ಆದರೆ ಸತ್ಯಕ್ಕೆ ಇದು ಬಹಳ ದೂರವಾದ ಸಂಗತಿ. ಮೊದಲು ಮನೆಯ ಯಜಮಾನ ನೆಟ್ಟಗಿದ್ದರಲ್ಲವೇ ಮನೆಯಲ್ಲಿರತಕ್ಕ ಜನರು ನೆಟ್ಟಗಿರುವುದು ? ಇಲ್ಲಿ ಯಜಮಾನರು ನೆಟ್ಟಗೆ ಯಾವಾಗ ಇರುವುದಿಲ್ಲವೋ ಆಗ ಕೆಳಗಿನವರೂ ಸರಿಯಾಗಿ ಕೆಲಸ ಮಾಡುವುದಿಲ್ಲ. ಹಿಂದೆಯೂ ರಾಜ್ಯದಲ್ಲಿ ಕರಪ್ಷನ್ ಇತ್ತು. ಆದರೆ ಬಹಳ ಕಡಿಮೆ ಮಟ್ಟದಲ್ಲಿತ್ತು. ಈ ದಿವಸ ಅದು ತುಟ್ಟ ತುದಿಯನ್ನು ಮುಟ್ಟಿದೆ. ಇದಕ್ಕೆ ಬಹುಮಟ್ಟಿಗೆ ರಾಜಕಾರಣಿಗಳು ಎಂದರೆ ಇಲ್ಲಿ ರಾಜ್ಯಮಟ್ಟದಲ್ಲಿ ರಾಜ್ಯಾಡಳಿತ ನಡೆಸತಕ್ಕ ಜನರೇ ನಿದ್ದಾರೆ ಅವರು ಕೂತಾಗ ನಿಂತಾಗ ಮತ್ತು ಮಲಗತಕ್ಕ ಕಾಲದಲ್ಲೂ ಕೂಡ ಭ್ರಷ್ಟಾಚಾರದ ವಿಚಾರಗಳೇ ಇವರ ತಲೆಯಲ್ಲಿ ತುಂಬಿರುತ್ತವೆ; ಅದಕ್ಕೆ ಇವರೇ ಕಾರಣರು ಎಂದು ಹೇಳುತ್ತೇನೆ. ಸುಮ್ಮನೆ ಇಲ್ಲಿ ಸದಸ್ಯರ ಕಣ್ಣನ್ನು ಒರೆಸುವುದಕ್ಕಾಗಿ ಮಾತನಾಡುವುದನ್ನು ನಾನು ಒಪ್ಪುವುದಿಲ್ಲ.

(ಶ್ರೀ ಎನ್. ಜಿ. ಹಾಲಪ್ಪ)

ಹಾಗೆ ಇವರು ನಿಸ್ಪೃಹರಾಗಿದ್ದರೆ ಇವರೇಕೆ ಅಂಥ ತಪ್ಪಿತಸ್ಥರ ಬಗ್ಗೆ ಕಠಿಣವಾದ ಕ್ರಮ ತೆಗೆದುಕೊಳ್ಳಲಿಲ್ಲಾ ಎಂದು ಕೇಳುತ್ತೇನೆ. ಇವರು ಇಂಥ ಹಾದಿಯಲ್ಲಿ ನಡೆಯುತ್ತಿರುವಾಗ ಸುಮ್ಮನೆ ಆ ಅಧಿಕಾರಿಗಳ ಮೇಲೆ ಸಿಕ್ಕಾಪಟ್ಟೆ ದೋಷಾರೋಪಣೆ ಮಾಡುತ್ತಿರುವುದನ್ನು ನಾನು ಒಪ್ಪುವುದಿಲ್ಲ. ಪರೋಕ್ಷವಾಗಿ ಇವರೇ ಅದಕ್ಕೆ ಬೆಂಬಲ ನೀಡುತ್ತಿದ್ದಾರೆಂದು ಹೇಳುತ್ತೇನೆ. ಇಷ್ಟು ಕಾಲ ಇದನ್ನು ಸರಿಪಡಿಸದಿದ್ದವರು ಇದನ್ನು ಮುಂದೆ ಕೂಡ ಸರಿಪಡಿಸಲು ಸಾಧ್ಯವಿಲ್ಲ. ಭೂಸುಧಾರಣೆಯ ಬಗ್ಗೆ ಇವರು ಹೇಳುತ್ತಿರುವುದೆಲ್ಲಾ ಒಂದು ದೊಂಬರಾಟ. ಇಲ್ಲಿಯವರೆಗೆ ಇವರು ಎಷ್ಟು ಜನ ಬಡವರಿಗೆ ಜಮೀನನ್ನು ಕೊಟ್ಟಿದ್ದಾರೆ ಹೇಳಲಿ ? ದೇಶದಲ್ಲಿ ಪ್ರಜಾಸತ್ತಾತ್ಮಕ ರಾಜ್ಯಭಾರ ಪ್ರಾರಂಭವಾದ ಮೇಲೆ ಕಳೆದ 20 ವರ್ಷಗಳಿಂದಲೂ ಈ ಆಡಳಿತ ಪಕ್ಷದವರು ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಜಾರಿಗೆ ತರುವುದಾಗಿ ಹೇಳುತ್ತಿದ್ದುದೆಲ್ಲಾ ಬರಿ ಜನರ ಕಣ್ಣಿಗೆ ಮಣ್ಣೆರೆಸುವುದಕ್ಕಾಗಿ ಹೇಳುತ್ತಿದ್ದ ಮಾತುಗಳಷ್ಟೆ. ಅವುಗಳಿಗೆ ಯಾವುದಕ್ಕೂ ಬೆಲೆ ಇಲ್ಲ. ನಾನು ಹೇಳುತ್ತಿರುವುದು ಇಲ್ಲಿ ಪಕ್ಷಗಳ ಮಾತೇ ಬರುವುದಿಲ್ಲ. ಜಮೀನನ್ನು ಒಂದು ವೇಳೆ ಕಾಂಗ್ರೆಸ್ಸಿನವರು ಬಡವರಿಗೆ ಹಂಚುತ್ತಿದ್ದೇವೆಂದು ಹೇಳಿ ಅವರ ಪಕ್ಷದ ಜನರಿಗೇ ಹಂಚಲು ನಾನು ಬೇಡವೆನ್ನುವುದಿಲ್ಲ. ಆದರೆ ಅವರ ಪಕ್ಷದಲ್ಲಿರತಕ್ಕ ಬಡವರಿಗೆ ಆ ಜಮೀನುಗಳನ್ನು ಹಂಚುತ್ತಿದ್ದಾರೆಯೇ ಅದೂ ಇಲ್ಲ. ಅಲ್ಲಿ ಯಾರಿಗೆ ಜಮೀನು ಹೆಚ್ಚಾಗಿದ್ದು ಅಜೀರ್ಣವಾಗಿದೆಯೋ ಅಂಥವರಿಗೇ ಮತ್ತೆ ಜಮೀನನ್ನು ದರಖಾಸ್ತಿನಲ್ಲಿ ಕೊಡುತ್ತಿದ್ದಾರೆ. ಇವರು ನಿಜವಾಗಿಯೂ ಜಮೀನಿಲ್ಲದ ನಿರ್ಗತಿಕರಿಗೆ ಜಮೀನನ್ನು ಕೊಡುತ್ತಿಲ್ಲ. ನನ್ನ ತಾಲ್ಲೂಕಿನಲ್ಲೇ...............

Sri H. N. NANJE GOWDA.—Point of order Sir...........

Mr. CHAIRMAN.—No new points, please. He will Please conclude.

Sri H. N. NANJE GOWDA.—Can the Chair direct a member not to raise any new point ?

Mr. CHAIRMAN.—The Whip has given me a list that the particular member should be given 5 minutes. He must finish within that time. At the end of 5 minutes if new point is taken, I cannot permit. The Hon'ble member will appreciate the difficulty of the Chair also.

I now call upon Sri Doddanna Gowda.

Sri J. P. SARVESH (Serum).—I would like to know whether the discussion will go to tomorrow also. The Whip of the Congress Party said that he will pursuade the members of the Congress Party not to participate in the discussion, and that is why we agreed to sit till 7-00 P.M.

Sri H. SIDDAVEERAPPA.—May I make a submission, Sir ? My respectful submission to the Chair is this. The Treasury Benches also will understand and appreciate the way in which we have also been trying to co-operate with them. In view of the fact that an Vote on Account is given, there cannot be any strict rule with regard to the timings. This Side, one hon'ble member wanted to know whether discussion would be resumed tomorrow also If there is a need, I don't see any reason why it should not be done.

Mr. CHAIRMAN.—The position is, two days were allotted for these Demands. In view of the fact that several members of both sides wanted to speak, the discussion is extended upto 7-00 P.M. the Minister replies tomorrow. Within that time, there are a number of speakers.

SRI H. SIDDAVEERAPPA.—You can take the sense of the House. The *Chair* is here to see that the Debate is regulated looking into the desire of the members. I submit that no hon'ble member, either on this Side or that Side, is interested to hear his own voice. This is an important Demand concerning the revenue of the State and hon'ble members must at least have the satisfaction that they have had their say. We know what attitude the Government would take. We also know the unreal atmosphere in which we are discussing. Nevertheless, we must have our full say. There is no hurry, because we are not going to have the Budget completed by the end of March. There is no reason why we should sit after 6 'O' Clock.

[Mr. Chairman (Sri S. D. KOTHAVALE) in the Chair]

6–00 P.M.

SRI D. M. SIDDAIAH.—Sir, I submit respectfully, that time limit will have to be fixed. This debate should be finished by 7 P.M. Since it is a very important demand, it may be a few minutes this side or that side. But it will have to be finished by 7 P.M.

SRI H. SIDDAVEERAPPA.—It may not be possible to finish it by 7 P.M. I do not see any reason why you should not have discussion to-morrow also. If a few members are left out, you will have to do that.

SRI B. P. GANGADHAR (Tumkur).—This is a matter concernig the entire State. Especially these two subjects, Forest and Revenue are very important subjects. Many Hon'ble members have to express their views freely and they may require more time. Therefore, the time limit should not be imposed. It may not be possible to finish it by 7 P.M. It may be post-poned to to-morrow and we can sit at 8-30 or 9 A.M. and finish it by 12 Noon. In the meanwhile 1½ hours may be given to the Minister to reply.

MR. CHAIRMAN.—I think there was agreement on the part of both the sides that a few minutes might be given to each member whoever wants to participate in the debate and finish the whole thing by 7 P.M. That is why the Chair extended time. There cannot be any more extention. There is limit for anything. Hon'ble Mr. Siddaveerappa will kindly realise that it is not possible to give chance to one and all. Few people will have to participate in the debate. Selection will have to be made by the whips. The whips have given some lists. If everybody wants to participate in the debate, there will be no end. This has to be finished by 7 P.M.

[MR. DEPUTY SPEKER in the Chair]

SRI B. P. GANGADHAR.—Many members are eager to participate in the debate. These are the subjects concerning the entire state on various aspects in respect of land reforms, forest, etc., which are of very great importance and far reaching consequences. I pray for your indulgence that it may be taken up to-morrow. You may kindly have the sense of the House so that we will have a full dressed debate.

Mr. DEPUTY SPEAKER.—I have already appealed to the Hon'ble Members to close it by 7 P.M.

ಶ್ರೀ ಎನ್. ಜಿ. ಹಾಲಪ್ಪ.—ಈಗ ಜಮೀನುಗಳನ್ನು ಹಂಚಿರುವ ರೀತಿ ಬಡವರಿಗೆ ಹಂಚಿದ್ದೇವೆಂದು ಹೇಳುತ್ತಾರೆ. ಅವರು ಹಂಚಿಕೆ ಯಾವ ರೀತಿ ಮಾಡಿದ್ದಾರೆ ಎನ್ನುವುದಕ್ಕೆ ಎರಡು ನಿದರ್ಶನಗಳನ್ನು ಕೊಡಬಲ್ಲೆ. ಅವರ ಪುಡಾರಿಗಳಿಗೇ ಜಮೀನುಗಳನ್ನು ಕೊಟ್ಟಿದ್ದಾರೆ. ನಮ್ಮ ತಾಲ್ಲೂಕಿನ ನಿದರ್ಶನವನ್ನೇ ಕೊಡುತ್ತೇನೆ. ನಮ್ಮ ತಾಲ್ಲೂಕಿನ ಮಾಜಿ ಶಾಸಕರು ಮತ್ತು ಅವರ ಸಂಬಂಧಿಗಳು ಸುಮಾರು 300 ಎಕರೆಯಷ್ಟು ಜಮೀನನ್ನು ಬಗರ್‌ಹುಕುಂ ಸಾಗುಮಾಡಿದ್ದಾರೆಂದು ನಮ್ಮ ಗ್ರಾಮದವರು ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಕಟುವಾಗಿ ಪತ್ರ ಬರೆದರು. ಆಮೇಲೆ ಅಸಿಸ್ಟೆಂಟ್ ಕಮಿಷನರ್ ಒಂದು ಎವಿಕ್ಷನ್ ಆರ್ಡರ್ ಮಾಡಿದರು. ಅವರು ಬಂದು ಮಂತ್ರಿಗಳನ್ನು ನೋಡಿದಮೇಲೆ ಮಾನ್ಯ ರೆವಿನ್ಯೂ ಮಂತ್ರಿಗಳು ಸ್ಟೇ ಕೊಟ್ಟರು. ಈ ರೀತಿ ಬಗರ್‌ಹುಕುಂ ಸಾಗು ಮಾಡಿರುವವರಿಗೆ 30–40 ಎಕರೆ ಜಮೀನು ಇದೆ. ಇವರಿಗೆಲ್ಲಾ ಟಿ. ಟಿ. ಹಾಕಿದ್ದಾರೆ. ಈ ಜನ ನಮ್ಮ ಮಾನ್ಯ ಮುಖ್ಯ ಮಂತ್ರಿಗಳ ಹೆಸರಿನಲ್ಲಿ ಅಲ್ಲಿನ ಅಧಿಕಾರಿಗಳನ್ನು ಹೆದರಿಸಿದ್ದಾರೆ.

ಶ್ರೀ ಬಿ. ರಾಚಯ್ಯ.—ಅವರು ಬಂದು ಸ್ಟೇ ಕೇಳುವಂಥ ಕಾಲದಲ್ಲಿ ಆ ಜಮೀನಿನಲ್ಲಿ ಬೆಳೆ ಇತ್ತು. ಎನ್‌ಕ್ರೋಚ್‌ಮೆಂಟ್ ಮಾಡಿದಂಥ ಕಾಲದಲ್ಲಿ ಬೆಳೆ ಇದ್ದರೆ, ಆ ಬೆಳೆಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶಕೊಡಲು ಕಾನೂನಿನಲ್ಲಿ ಅಳವಡಿಸಿಕೊಂಡಿದ್ದಾರೆ. ಈ ಬೆಳೆಯನ್ನು ತೆಗೆದುಕೊಂಡ ಮೇಲೆ ಎವಿಕ್ಟ್ ಮಾಡಬೇಕೆಂದು ಆರ್ಡರ್ ಮಾಡಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—ಈಗ ಬಹಳವಾಗಿ ಅನ್‌ಆತರೈಜ್ಡ್ ಕಲ್ಟಿವೇಷನ್ ಮಾಡಿದ್ದಾರೆ. ಅದಕ್ಕೆ ಹೊಸದಾಗಿ ಕಾನೂನು ಮಾಡಿಕೊಂಡಿದ್ದಾರೆ. ಆದರೂ ಅನ್‌ಆತರೈಜ್ಡ್ ಕಲ್ಟಿವೇಷನ್ ಇನ್ನೂ ಖಾಯಂ ಮಾಡುತ್ತಿದ್ದಾರೆ. ಆದರೆ ಹೊಸದಾಗಿ ಅನ್‌ಆತರೈಜ್ಡ್ ಕಲ್ಟಿವೇಷನ್ ಮಾಡುತ್ತಿರುವವರಿಗೆ ಪ್ರಾಮಿನೆನ್ಸ್ ಸಿಕ್ಕಿದೆ.

ಶ್ರೀ ಎನ್. ಜಿ. ಹಾಲಪ್ಪ.—ಮಾನ್ಯ ಮಂತ್ರಿಗಳು ಸಮತಾವಾದ ಸಮಾಜವನ್ನು ಜಾರಿಗೆ ತರುತ್ತೇವೆಂದು ಹೇಳಿ ಒಂದು ವರ್ಷವಾಯಿತು. ಆದರೆ ಅವರು ಮಾಡುತ್ತಿರುವುದು ಏನು? ಗೋಮಾಳ ಜಮೀನು ಎಷ್ಟೋ ಎಕರೆಗಳಷ್ಟು ಇದ್ದರೂ ಮತ್ತು ಭದ್ರಾ ಪ್ರಾಜೆಕ್ಟ್ ಕೆಳಗಡೆ ಎಷ್ಟೋ ಜಮೀನು ಇದ್ದರೂ ಅದನ್ನು ಸರಿಯಾಗಿ ಹಂಚುತ್ತಿಲ್ಲ. ಅಲ್ಲಿ ಹರಿಜನರು ಮತ್ತು ಲ್ಯಾಂಡ್‌ಲೆಸ್ ಲೇಬರ್ ದರಖಾಸ್ತು ಅರ್ಜಿಗಳನ್ನು ಕೊಟ್ಟಿದ್ದರೂ ಅವರಿಗೆ ಮಂಜೂರು ಮಾಡುತ್ತಿಲ್ಲ. ಇದರಲ್ಲಿ ಆಡಳಿತ ಪಕ್ಷದವರ ರಾಜಕೀಯವಿದೆಯೆಂದು ಹೇಳಬಹುದು.

ಇನ್ನೊಂದು ಉದಾಹರಣೆ ಹೇಳುತ್ತೇನೆ. ನನ್ನ ತಾಲ್ಲೂಕಿನ ಇನ್ನೊಂದು ಗ್ರಾಮದಲ್ಲಿ ಒಂದು ವಿಚಾರ ನಡೆದಿದೆ. ಅದು ಮಾನ್ಯ ಶ್ರೀ ರಾಚಯ್ಯನವರ ಕಾಲದಲ್ಲಿ ಆದದ್ದಲ್ಲ. ಒಂದು ಗ್ರಾಮದಲ್ಲಿ 32 ಎಕರೆಗಳಷ್ಟು ಗೋಮಾಳದ ಜಮೀನು ಇದೆ ಮತ್ತು 1,100 ಜಾನುವಾರುಗಳಿವೆ. ಅದು ಇನ್‌ಸಫಿಷಿಯೆಂಟ್ ಗೋಮಾಳವಾಗಿದ್ದರೂ ಒಬ್ಬ ಮನುಷ್ಯನಿಗೆ 20 ಎಕರೆ ಜಮೀನು ಕೊಟ್ಟಿದ್ದಾರೆ. ಆತನಿಗೆ 70 ಎಕರೆಗಳಷ್ಟು ಜಮೀನು ಇದೆ. ಇದು ಸೋಷಿಯಾಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿಯ ನಿಯಮವೇ? ದರಖಾಸ್ತು ಹಾಕಿದ ಜನರಿಗೆ ಜಮೀನು ಇಲ್ಲ. ಈ ರೀತಿ ಜಮೀನು ಇದ್ದವರಿಗೇ ಜಮೀನು ಕೊಡುತ್ತಾ ಇದ್ದರೆ ಇದು ಸುಖೀ ರಾಜ್ಯವಾಗುತ್ತದೆಯೇ? ಈ ವಿಚಾರದಲ್ಲಿ ತಕ್ಕ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಇನ್ನೊಂದು ವಿಷಯ. ನಮ್ಮ ತಾಲ್ಲೂಕಿನಲ್ಲಿ ಈ ವರ್ಷ ಬಹಳವಾಗಿ ಕ್ಷಾಮಪರಿಸ್ಥಿತಿ ಇದೆ. ಬಹುಶಃ ಇರ್ರಿಗೇಟೆಡ್ ಏರಿಯಾಗಳನ್ನು ಬಿಟ್ಟರೆ ಉಳಿದ ಪ್ರದೇಶಗಳಲ್ಲಿ ತುಂಬಾ ಕಷ್ಟ ಪರಿಸ್ಥಿತಿ ಇದೆ. ಕಸಬ, ಸಂತೆಬೆನ್ನೂರು ಹೋಬಳಿ, ಮುಂತಾದ ತಾಲ್ಲೂಕುಗಳಲ್ಲಿ ಯಾವ ಅಭಿವೃದ್ಧಿಯೂ ಆಗಿಲ್ಲ. ಕ್ಷಾಮನಿವಾರಣೆಗೆ ಬೇಕಾದ ರಿಲೀಫ್ ಕಾಮಗಾರಿಗಳು ಅಲ್ಲಿ ಯಾವುದೂ ನಡೆದಿಲ್ಲ. ಮಾನ್ಯ ಸಚಿವರು ಈ ಬಗ್ಗೆ ತಕ್ಕ ನಿಗಾ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

† ಶ್ರೀ ಎಂ. ದೊಡ್ಡನಗೌಡ್ (ಸಿರಗುಪ್ಪ).—ಸ್ವಾಮಿ, ಮಾನ್ಯ ರೆವಿನ್ಯೂ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸಮರ್ಥಿಸುತ್ತಾ ನಾನು ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಬಳ್ಳಾರಿ ಜಿಲ್ಲೆಯ ತುಂಗಭದ್ರಾ ಪ್ರಾಜೆಕ್ಟಿನ ಅಯಕಟ್ಟಿನ ಪ್ರದೇಶವಾಗಿದ್ದು ಅಲ್ಲಿ ಸುಮಾರು 50 ಲಕ್ಷ ರೂಪಾಯಿಗಳ ಲ್ಯಾಂಡ್ ರೆವಿನ್ಯೂ ಬಾಕಿ ಇರುತ್ತದೆ. ಅದರಲ್ಲಿ 20 ಸಾವಿರ ರೂಪಾಯಿಗಳು ಡ್ರೈಕಂ ವೆಟ್ ಭೂಮಿಗೆ ಸಂಬಂಧಪಟ್ಟಿದ್ದು. ಆ ಜಮೀನು ಸಾಗು ಮಾಡಲಿ, ಮಾಡದೆ ಇರಲಿ ಆ ಜಮೀನಿಗೆ ಸರ್ಕಾರದವರು ಲ್ಯಾಂಡ್ ರೆವಿನ್ಯೂ ಮಾತ್ರ ಲೆವಿ ಮಾಡುತ್ತಾರೆ. ಈಗ ಸುಮಾರು 3 ವರ್ಷಗಳಿಂದ ಆ ಡ್ರೈಕಂವೆಟ್ ಲ್ಯಾಂಡನ್ನು ರೈತರು ಸಾಗು

ಮಾಡಿಲ್ಲ. ಆದರೂ ಸಹ ಸರ್ಕಾರದವರು ಆ ಭೂಮಿಗೆ ಲ್ಯಾಂಡ್ ರೆವಿನ್ಯೂ ಹಾಕಿದ್ದಾರೆ. ಇದರಿಂದ ಆ ಪ್ರದೇಶದ ರೈತರಿಗೆ ಅನ್ಯಾಯವಾಗಿರುತ್ತದೆ. ಡ್ರೈಕಂವೆಟ್ ಏರಿಯಾಕ್ಕೆ ನೀರು ಪೂರೈಕೆ ಆಗದೇ ಇದ್ದರೂ ಸಹ ಲ್ಯಾಂಡ್ ರೆವಿನ್ಯೂ ಲೆವಿ ಮಾಡುತ್ತಿದ್ದಾರೆ. ಇದು ಸರಿಯಲ್ಲ. ಈ ಕಂದಾಯ ವಸೂಲು ಮಾಡತಕ್ಕ ಸಂದರ್ಭದಲ್ಲಿ ರೆವಿನ್ಯೂ ಆಫೀಸರು ರೈತರ ಹತ್ತಿರ ಬಂದು ಅವರಿಗೆ ಹೆಚ್ಚು ತೊಂದರೆಯನ್ನು ಕೊಟ್ಟು ರಾಕ್ಷಸೀ ಕೃತ್ಯವನ್ನು ಮಾಡುತ್ತಿದ್ದಾರೆ. ಈ ರೀತಿ ರೆವಿನ್ಯೂ ಆಫೀಸರುಗಳು ಮಾಡತಕ್ಕದ್ದನ್ನು ತೀರಾ ಖಂಡಿಸಬೇಕಾಗುತ್ತದೆ. ಇವೊತ್ತು ರೈತರ ಮೇಲೆ ಕಂದಾಯದ ಬಾಕಿ ಎಷ್ಟೇ ಇರಲಿ ಅವರಿಗೆ ಇಷ್ಟು ಕಂದಾಯ ನಿಮ್ಮದು ಬಾಕಿ ಇದೆ ಎಂದು ಡಿಮ್ಯಾಂಡ್ ನೋಟೀಸ್ ಕೊಟ್ಟು ಅವರಿಗೆ ಕಾಲಾವಕಾಶ ಕೊಟ್ಟು ಅನಂತರ ಕಂದಾಯವನ್ನು ವಸೂಲು ಮಾಡತಕ್ಕ ಒಂದು ಪದ್ಧತಿ ಇರಬೇಕು. ಈಗ ಕಂದಾಯವನ್ನು ವಸೂಲು ಮಾಡುವಾಗ ರೈತರಿಗೆ ಯಾವ ನೋಟೀಸ್, ಡಿಮ್ಯಾಂಡ್ ವಗೈರೆ ಏನೂ ಕೊಡದೆ ರೆವಿನ್ಯೂ ಆಫೀಸರುಗಳು ಏಕದಂ ರೈತರ ಮನೆಗಳ ಹತ್ತಿರ ಹೋಗಿ ಅವರ ಸಾಮಾನು ವಗೈರೆಗಳನ್ನೆಲ್ಲಾ ಹೊರಗಡೆ ಹಾಕಿ, ಮನೆಗಳನ್ನು ಜಫ್ತಿ ಮಾಡಿ ರೈತರಿಗೆ ತೊಂದರೆ ಕೊಡುತ್ತಿದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲಿ ರೈತರಿಂದ ಸರ್ಕಾರಕ್ಕೆ ಬರಬೇಕಾದ ಕಂದಾಯದ ಬಾಕಿ ಇದೆ. ಇರಲಿ. ಅದನ್ನು ವಸೂಲು ಮಾಡುವುದಕ್ಕೆ ಒಂದು ಕ್ರಮ ಬೇಡವೆ ? ಮೊದಲು ಡಿಮ್ಯಾಂಡ್ ನೋಟೀಸ್ ಕೊಟ್ಟು, ಕಾಲಾವಕಾಶ ಕೊಟ್ಟು ಅನಂತರ ಕಂದಾಯವನ್ನು ವಸೂಲು ಮಾಡಬೇಕು. ಆತರಹ ನೂರರಲ್ಲಿ ಒಬ್ಬರಿಗೂ ಸಹ ಮಾಡಿಲ್ಲ. ಅದಕ್ಕೋಸ್ಕರ ನಾನು ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಡೆಪ್ಯುಟಿ ಕಮೀಷನರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿ ಅವರ ಒಂದು ಸಲಹೆ ಪ್ರಕಾರ ಕಂದಾಯವನ್ನು ವಸೂಲು ಮಾಡುವಂತಹ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕು. ಈ ವಿಷಯದಲ್ಲಿ ಪಟೇಲರು ಮತ್ತು ಶಾನುಭೋಗರಿಗೆ ತಿಳಿಸಿದ್ದರೂ ಸಹ ಅದರಿಂದ ಯಾವ ಪರಿಣಾಮವೂ ಸಹ ಉಂಟಾಗಿಲ್ಲ. ಡ್ರೈಕಂವೆಟ್ ಪ್ರದೇಶದ ಜಮೀನಿನಲ್ಲಿ ಬೆಳೆ ಆಗದೆ ಇದ್ದರೂ ಸಹ ರೈತರಿಂದ ಕಡ್ಡಾಯವಾಗಿ ಕಂದಾಯವನ್ನು ಕೊಡಲೇಬೇಕೆಂದು ವಸೂಲು ಮಾಡುತ್ತಿರುವುದು ಆ ಪ್ರದೇಶದ ರೈತರಿಗೆ ಒಂದು ಕ್ಷೋಭೆ ಬಂದಿದೆ. ರೈತರನ್ನು ಎದುರು ಹಾಕಿಕೊಂಡು ಅವರಿಗೆ ತೊಂದರೆ ಕೊಟ್ಟರೆ ಯಾವ ಸರ್ಕಾರವೂ ಉಳಿಯುವುದಿಲ್ಲ. ಈ ದೃಷ್ಟಿಯಿಂದ ಸರ್ಕಾರದವರು ಸಂಬಂಧಪಟ್ಟ ಅಧಿಕಾರಗಳ ಮೇಲೆ ಕ್ರಮ ತೆಗೆದು ಕೊಳ್ಳಬೇಕು. ಶ್ರೀಮಾನ್ ಅಲ್ಲಂ ಕರಿಬಸಪ್ಪನವರು ಬಳ್ಳಾರಿ ತಹಶೀಲ್ದಾರರ ಬಗ್ಗೆ ಮುಖ್ಯ ಮಂತ್ರಿಗಳಿಗೂ ಮತ್ತು ರೆವಿನ್ಯೂ ಮಂತ್ರಿಗಳಿಗೂ ದೂರು ಕೊಟ್ಟಿದ್ದಾರೆ. ಅವರೂ ಆ ಬಗ್ಗೆ ಯಾವ ವಿಚಾರಣೆಯನ್ನೂ ಮಾಡಿಲ್ಲ. ಇವೊತ್ತು ಮುಖ್ಯವಾಗಿ ಈ ಕಂದಾಯವನ್ನು ವಸೂಲು ಮಾಡತಕ್ಕ ವಿಷಯದಲ್ಲಿ ನಡೆಯುತ್ತಾ ಇರತಕ್ಕ ಕಿರುಕುಳ ಮತ್ತು ಅನ್ಯಾಯದ ಬಗ್ಗೆ ತಾಲ್ಲೂಕ್ ಬೋರ್ಡ್ ಅಧ್ಯಕ್ಷರಾಗಲೀ, ಶಾಸನಸಭಾಸದಸ್ಯರಾಗಲೀ ಸರ್ಕಾರದ ಮುಂದೆ ಒಂದು ಮನವಿಯನ್ನು ತಂದರೆ ಅದನ್ನು ಸರ್ಕಾರದವರು ಪರಿಶೀಲಿಸದೆ ಹೋದರೆ ನಾವು ಈ ಶಾಸನ ಸಭೆಯಲ್ಲಿ ಏತಕ್ಕೆ ಇರಬೇಕು ಎನ್ನುವ ಪ್ರಶ್ನೆ ಬರುತ್ತದೆ. ನಾವು ಸರ್ಕಾರಕ್ಕೆ ದೂರು ಕೊಟ್ಟ ಮೇಲೆ ಅದನ್ನು ತನಿಖೆಮಾಡಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಹಾಗೆ ಮಾಡಿದರೆ ರೆವಿನ್ಯೂ ಆಫೀಸರುಗಳು ಕ್ರಮವಾಗಿ ಕೆಲಸ ಮಾಡುತ್ತಾರೆ. ಆ ರೀತಿ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳದೇ ಹೋದರೆ ಸರ್ಕಾರದ ಮೇಲೆ ಯಾವ ಪಕ್ಷದವರೇ ಆಗಲೀ ಆ ಪಕ್ಷದವರ ವಿಶ್ವಾಸ ಉಳಿಯುವುದು ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ನಮ್ಮ ತಾಲ್ಲೂಕಿನಲ್ಲಿ ಒಂದು ಕಮಿಟಿಯನ್ನು ನೇಮಕಮಾಡಿ ಡ್ರೈ-ಕಂ-ವೆಟ್ ಭೂಮಿಯ ಮೇಲೆ ಯಾವ ಕಂದಾಯವನ್ನು ವಸೂಲು ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕು. ಈಗಾಗಲೇ ಸಾಗು ಆಗುವ ಮತ್ತು ಸಾಗು ಆಗದೇ ಇರುವ ಪ್ರದೇಶಕ್ಕೆ ಸರ್ಕಾರದವರು ಸಾಕಷ್ಟು ಸಹಾಯ ಸವಲತ್ತುಗಳನ್ನು ಕೊಟ್ಟು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಸರ್ಕಾರದಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಇನ್ನು ಪೋಲೀಸ್ ಪಟೇಲರ ವಿಷಯದಲ್ಲಿ ಹೇಳುವುದಾದರೆ ಲ್ಯಾಂಡ್‌ರೆವಿನ್ಯೂ ವಸೂಲಿ ಮತ್ತು ಪಂಚಾಯಿತಿ ಸೆಕ್ರೆಟರಿ ಎರಡಕ್ಕೂ ಪೋಲೀಸ್ ಪಟೇಲರನ್ನೇ ನೇಮಕ ಮಾಡುವ ಉದ್ದೇಶವಿದೆಯೆಂದು ಗೊತ್ತಾಗಿದೆ. ಅವರ ನೇಮಕದಲ್ಲಿಯಾದ ಅಕ್ರಮವೂ ನಡೆಯದಂತೆ ಸರ್ಕಾರದವರು ನೋಡಿ ಕೊಳ್ಳ ಬೇಕು.

Assignment of lands for the landlords. 10 ವರ್ಷಗಳ ಅವಧಿಯಲ್ಲಿ ಬಡ ಹರಿಜನರ ಭೂಮಿಯನ್ನು ಮತ್ತೊಬ್ಬರು ಅವರ ಹೆಸರಿಗೆ ಅಸೈನ್‌ಮೆಂಟ್ ಮಾಡಿಸಿಕೊಂಡು ಬರೆಸಿ ಕೊಳ್ಳುತ್ತಿದ್ದಾರೆ. ನಮ್ಮ ಬಳ್ಳಾರಿ ಜಿಲ್ಲೆ ಮದ್ರಾಸ್ ರಾಜ್ಯದಲ್ಲಿರುವ ಕಾಲಕ್ಕೆ ಹರಿಜನರ ಜಮೀನುಗಳನ್ನು ಮಾರಾಟಮಾಡುವ ವಿಷಯದಲ್ಲಿ ಕೆಲವು ಷರತ್ತುಗಳನ್ನು ಹಾಕಿದ್ದರು. ಜಮೀನ್ದಾರರ ಹೆಸರಿಗೆ ಪಟ್ಟಾ ಆಗಿದ್ದರೂಕೂಡ ಆ ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಬೇಕಾಗಿದ್ದರೆ,

(ಶ್ರೀ ಎಂ. ದೊಡ್ಡನಗೌಡ್)

ತಮ್ಮ ಓನರ್‌ಷಿಪ್ ರೈಟ್ಸನ್ನು ಬೇರೆಯವರಿಗೆ ಮಾರಾಟ ಮಾಡಬೇಕಾಗಿದ್ದರೆ ಕೆಲವು ಷರತ್ತುಗಳನ್ನು ಹಾಕಿದ್ದರು. ಅದೇರೀತಿ ಹರಿಜನರ ಜಮೀನುಗಳ ಮಾರಾಟದ ವಿಷಯದಲ್ಲಿ ನಮ್ಮ ಸರ್ಕಾರದವರು ಕೆಲವು ಷರತ್ತುಗಳನ್ನು ಹಾಕಬೇಕು. ಇಲ್ಲದೇ ಇದ್ದರೆ ಹರಿಜನರು ಅನ್ಯಾಯವಾಗಿ ತಮ್ಮ ಜಮೀನುಗಳನ್ನು ಕಳೆದುಕೊಳ್ಳುತ್ತಾರೆ. ಎರಡು ಸಾವಿರ ಮೂರು ಸಾವಿರ ರೂಪಾಯಿಗಳ ಬೆಲೆಬಾಳತಕ್ಕಂಥ ಹರಿಜನರ ಜಮೀನುಗಳನ್ನು 200–300 ರೂಪಾಯಿಗಳಿಗೆ ಕೆಲವು ಜನರು ಕೊಂಡುಕೊಂಡಿದ್ದಾರೆ. ಈ ವಿಚಾರವನ್ನು ನಾನು ಮಾನ್ಯ ಸಚಿವರ ಗಮನಕ್ಕೂ ತಂದಿದ್ದೇನೆ. ಬಳ್ಳಾರಿ ಜಿಲ್ಲೆಯ ಡೆಪ್ಯುಟಿಕಮೀಷನರು ಈ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದರಿಂದ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಜನಗಳಿಗೆ ತೊಂದರೆಯಾಗಿದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಬಾಕಿ ರೈತರ ಜಮೀನು ಸಂಬಂಧದಲ್ಲಿ ಪೆಂಡಿಂಗ್ ಇರತಕ್ಕ ಅಸೈನ್‌ಮೆಂಟ್ ಆಫ್ ಲ್ಯಾಂಡ್ಸ್ ಫ಼ರ್ ದಿ ಲ್ಯಾಂಡ್ ಲಾರ್ಡ್ಸ್, ಪಟ್ಟಾವಗೈರೆಗಳನ್ನು ತೀವ್ರವಾಗಿ ಮಾಡಿಕೊಡುವುದಕ್ಕೆ ಸರ್ಕಾರದವರು ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಅರಣ್ಯದ ವಿಷಯದಲ್ಲಿ ಹೇಳುವುದಾದರೆ ಬಳ್ಳಾರಿ ಜಿಲ್ಲೆಯಲ್ಲಿ ಹರಿಯತಕ್ಕ ವೇದಾವತಿ ನದಿಯ ಎಡ ಮತ್ತು ಬಲದಂಡೆಯಲ್ಲಿ ಸಾವಿರಾರು ಎಕರೆ ಫಾರೆಸ್ಟ್ ಬೆಳೆಸುವುದಕ್ಕೆ ಉಪಯೋಗಿಸುತ್ತಿದ್ದಾರೆ. ಆ ಭೂಮಿಯನ್ನು ಇರಿಗೇಟ್ ಮಾಡಿದರೆ, ಅಲ್ಲಿ ಯಥೇಚ್ಛವಾಗಿ ನೀರು ಸಿಕ್ಕುವುದರಿಂದ ಸುಮಾರು 8-10 ಸಾವಿರ ಎಕರೆ ಪ್ರದೇಶದಲ್ಲಿ ನೀರಾವರಿ ಬೆಳೆಗಳನ್ನು ಬೆಳೆಸಬಹುದು. ಈಗಿನ ಆಹಾರದ ಅಭಾವದ ಪರಿಸ್ಥಿತಿಯಲ್ಲಿ ಅದರಿಂದ ಎಷ್ಟೋ ಆಹಾರವನ್ನು ಉತ್ಪಾದನೆ ಮಾಡಬಹುದು. ಅಂಥಾದ್ದು ಇವೊತ್ತಿನದಿವಸ ವ್ಯರ್ಥ ಆಗುತ್ತಿದೆ. ಅದರಿಂದ ದೇಶಕ್ಕೆ ಹಾನಿಯಾಗುತ್ತಿದೆ. ಈ ದೃಷ್ಟಿಯಿಂದ ಮಾನ್ಯಮಂತ್ರಿಗಳು ವೇದಾವತಿ ನದಿಯ ಎಡ ಮತ್ತು ಬಲ ದಂಡೆಗಳಲ್ಲಿರತಕ್ಕ ಜಮೀನನ್ನು ವ್ಯವಸಾಯಕ್ಕೆ ಬಿಡುಗಡೆ ಮಾಡುವ ವಿಷಯದಲ್ಲಿ ಪುನರಾಲೋಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ಇವೊತ್ತು ತುಂಗಭದ್ರಾ ಪ್ರಾಜೆಕ್ಟಿನಿಂದ ರೈತರಿಗೆ ಈಗ ಹತ್ತಾರು ವರ್ಷಗಳಿಂದ ನೀರು ಕೊಡುತ್ತಿದ್ದಾರೆ. ಆದರೆ ತುಂಗಭದ್ರಾ ಯೋಜನೆಗೆ ಸಂಬಂಧಪಟ್ಟಹಾಗೆ ಯಾವ ಯಾವ ಜಮೀನನ್ನು ಸರ್ಕಾರದವರು ಸ್ವಾಧೀನಪಡಿಸಿಕೊಂಡರೋ, ಅಕ್ವೈರ್ ಮಾಡಿಕೊಂಡರೋ ಆ ಜಮೀನಿಗೆ ಇನ್ನೂ ಪರಿಹಾರ ಧನವನ್ನು ಕೊಟ್ಟಿಲ್ಲ. ಈ ಬಗ್ಗೆ ಕೂಡಲೇ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶಾಸನ ಸಭಾಸದ್ಯರಾಗಲೀ ಅಥವಾ ಜವಾಬ್ದಾರಿಯುತವಾದ ಬೇರೆಯಾವ ಜನರೇ ಆಗಲೀ ಸರ್ಕಾರದ ಗಮನಕ್ಕೆ ಕೆಲವು ವಿಷಯಗಳನ್ನು ತಂದರೆ, ಡೆಪ್ಯುಟಿ ಕಮೀಷನರಾಗಲೀ ಅಥವಾ ಯಾವ ಅಧಿಕಾರಿಗಳಾಗಲೀ ಅದಕ್ಕೆ ಸಂಬಂಧಪಟ್ಟ ವಿಷಯವನ್ನು ಕೇಳಿದರೆ ಜವಾಬು ಕೊಡುವುದಿಲ್ಲ. ಸರ್ಕಾರದವರು ಜವಾಬ್ದಾರಿಯುತವಾದ ಜನಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಜವಾಬು ಕೊಡದೇ ಹೋದರೆ ಆ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ತೊಂದರೆಯಾಗುತ್ತದೆ ಅದಕ್ಕಾಗಿ ಯಾವುದೇ ವಿಚಾರವಾಗಲೀ ಆಯಾ ಕ್ಷೇತ್ರದ ಜವಾಬ್ದಾರಿಯುತವಾದ ಜನಗಳು ಆಯಾ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಕೇಳಿದರೆ ಸಕ್ರಮವಾದ ಜವಾಬು ಕೊಡಬೇಕೆಂದು ಸರ್ಕಾರದವರು ಅಧಿಕಾರಿಗಳಿಗೆ ಆದೇಶವನ್ನು ಕೊಡಬೇಕೆಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶಕೊಟ್ಟದ್ದಕ್ಕಾಗಿ ಅವರಿಗೆ ವಂಧಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಂ. ಜಾಲಿಸಟ್ಟಿ (ಭಟ್‌ಕಲ್).—ಸ್ವಾಮಿ, ಮಾನ್ಯ ರೆವಿನ್ಯೂ ಹಾಗೂ ಅರಣ್ಯ ಶಾಖೆಯ ಸಚಿವರು ಈ ಸಭೆಯಮುಂದೆ ತಂದಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ನಾನು ನಾಲ್ಕು ಸಲಹೆಗಳನ್ನು ಕೊಡಬೇಕೆಂದು ಅಪೇಕ್ಷೆ ಮಾಡುತ್ತೇನೆ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯದಪ್ರಶ್ನೆ ಜೀವಾಳದ ಪ್ರಶ್ನೆ. ಅಲ್ಲಿಯ ಜನಗಳ ಅಳಿವು ಮತ್ತು ಉಳಿವಿನ ಪ್ರಶ್ನೆಯಾಗಿದೆ. ನಮ್ಮ ಜಿಲ್ಲೆಯಲ್ಲಿ ಸಾದಾರಣವಾಗಿ ಶೇಕಡಾ 81ರಷ್ಟು ಅರಣ್ಯಉಂಟು. ಇಡೀ ಹಿಂದೂಸ್ಥಾನದಲ್ಲಿ ಯಾವುದೇ ಜಿಲ್ಲೆಯಲ್ಲಿ ನಮ್ಮ ಜಿಲ್ಲೆಯಲ್ಲಿರುವಷ್ಟು ಅರಣ್ಯವಿಲ್ಲ. ನಮ್ಮ ಜಿಲ್ಲೆ ಆಹಾರದ ಮಟ್ಟಿಗೆಮಾತ್ರ ಬೇರೆ ಜಿಲ್ಲೆಯನ್ನು ಅವಲಂಬಿಸಬೇಕಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಸಾಗುವಳಿ ಮಾಡುವುದಕ್ಕೆ ಲಾಯಕ್ಕಾಗಿರುವಂತಹ ಜಮೀನನ್ನು ಬಡ ರೈತರಿಗೆ ಸಾಗಿಗೆ ಕೊಟ್ಟರೆ ಆಹಾರದಲ್ಲಿ ಸ್ವಾವಲಂಬಿಯಾಗುವುದಕ್ಕೆ ಬರುತ್ತದೆ. ಆದರೆ ಸರ್ಕಾರದವರು ಜಮೀನನ್ನು ಕೊಡುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಸುಮಾರು 20ಲಕ್ಷ ಎಕರೆಗಳಷ್ಟು ಅರಣ್ಯವುಂಟು. ಇದರಲ್ಲಿ ಕನ್ನಿಷ್ಟಪಕ್ಷ ಎರಡುಲಕ್ಷ ಎಕರೆ ಜಮೀನನ್ನು ಬಡ ರೈತರಿಗೆ ಸಾಗಿಗೆ ಕೊಡಿ ಎಂದು ಹೇಳಿದರೂಕೂಡ ಅದನ್ನು ಸರ್ಕಾರದವರು

ಕೊಟ್ಟಿಲ್ಲ. ರಾಜ್ಯಪಾಲರು ನಮ್ಮ ಜಿಲ್ಲೆಗೆ ಬಂದಾಗ ಈ ಬಗ್ಗೆ ಅವರಿಗೆ ನಮ್ಮ ಮನವಿಯನ್ನು ಕೊಟ್ಟಿದ್ದೇವೆ. ನಮ್ಮ ಅರ್ಥಸಚಿವರೂ ಕೂಡ ಒಂದು ಲಕ್ಷ ಎಕರೆ ಜಮೀನನ್ನು ನಾವು ಸಾಗಿಗೆ ಕೊಡುವುದಕ್ಕೆ ತಯಾರಾಗಿದ್ದೇವೆ ಎಂದು ಹೇಳಿದ್ದಾರೆ.

ನಮ್ಮಲ್ಲಿ ಕೆಲವು ಜಮೀನುಗಳನ್ನು ಸಾಗುವಳಿಗೆ ಕೊಡಬೇಕೆಂಬ ಕಾರಣಕ್ಕಾಗಿ ಕೆಲವು ಭಾಗಗಳನ್ನು 'ನೋಟಿಫೈಡ್ ಏರಿಯಾ' ಎಂದು ಮಾಡಿದ್ದಾರೆ. ಆದರೆ ಈ ಏರಿಯಾದಲ್ಲಿರುವ ಜಮೀನುಗಳು ರೈತರಿಗೆ ಅನುಕೂಲವಾಗುವಂಥ ಸ್ಥಳದಲ್ಲಿ ಇಲ್ಲ. ಒಂದೊಂದು ಕಡೆ ಎರಡು ಮೂರು ಎಕರೆಗಳಷ್ಟು ಮಾತ್ರ ಇದೆ. ಎರಡು ಮೂರು ಎಕರೇ ಮಾತ್ರ ಇರುವ ಕಡೆಗಳಲ್ಲಿ ಸಾಗುವಳಿಗೆ ಕೊಟ್ಟರೆ ರೈತರು ಅಂತಹ ಕಾಡಿನಮಧ್ಯೆ ಹೋಗಿ ಇರುವುದಕ್ಕೆ ಇಷ್ಟಪಡುವುದಿಲ್ಲ. 10-15 ಕುಟುಂಬಗಳು ಇರುವುದಕ್ಕೆ ಅನುಕೂಲವಾದಂಥ ಕಡೆ ಜಮೀನು ಕೊಟ್ಟರೆ ಅವರು ಹೋಗಿ ನೆಲೆಸುವುದಕ್ಕೆ ಅನುಕೂಲವಾಗುತ್ತದೆ. ಜಮೀನು ಇಲ್ಲದವರು ಮತ್ತು ಅನಕ್ಷರಸ್ಥರು ಕಾಡಿನ ಮಧ್ಯೆ ಹೋಗಿ ಕೆಲವು ಕಾಲ ಸಾಗುವಳಿ ಮಾಡಿಕೊಂಡಿದ್ದು ಪುನಃ ಬಿಟ್ಟು ಬಂದುಬಿಡುತ್ತಾರೆ. ಪುನಃ ಅದು ಕಾಡಾಗುತ್ತಿದೆ. ಮೂಲ ಸರ್ವೆ ಅಂಡ್ ಸೆಟಲ್‌ಮೆಂಟ್ ಕಾಲಕ್ಕೆ ನಮ್ಮ ಜಿಲ್ಲೆಯಲ್ಲಿ 50 ಪರ್‌ಸೆಂಟ್ ಕಾಡು ಇತ್ತು, ಇನ್ನುಳಿದ 50 ಪರ್‌ಸೆಂಟ್ ಸಾಗುವಳಿ ಆಗುತ್ತಿತ್ತು. ಒಂದು ಕಾಲದಲ್ಲಿ ಸಾಗುವಳಿಗೆ ಯೋಗ್ಯವಾಗಿದ್ದ ಪ್ರದೇಶಗಳಲ್ಲಿ ಇವತ್ತು ಮತ್ತೆ ಕಾಡು ಬೆಳೆದುಬಿಟ್ಟಿರುವುದರಿಂದ, ಅಂತಹ ಪ್ರದೇಶವನ್ನು ಸಾಗುವಳಿಗೆ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಮತ್ತು ಇದರಿಂದ ನಮ್ಮ ರಾಜ್ಯದಲ್ಲಿ ಆಹಾರದ ಮಟ್ಟಿಗೆ ಸ್ವಾವಲಂಬಿಗಳಾಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಮೂಲ ಸರ್ವೆ ಅಂಡ್ ಸೆಟಲ್‌ಮೆಂಟ್ ಪ್ರಕಾರ ಯಾವ ಜಮೀನು ಸಾಗುವಳಿ ಆಗುತ್ತಿತ್ತೋ ಅಂತಹ ಜಮೀನುಗಳನ್ನು ಸಾಗುವಳಿಗೆ ಕೊಡಬೇಕೆಂದು ನಮ್ಮ ಜಿಲ್ಲೆಯವರ ಕಡೆಯಿಂದ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಕಡೆ ಸಮುದ್ರ ಕರಾವಳಿ ಪ್ರದೇಶವಿದೆ. ಕ್ಯಾಸುರಿನಾ ಪ್ಲಾನ್‌ಟೇಷನ್‌ಗಾಗಿ ಕರಾವಳಿಯ ಕೆಲವು ಭಾಗವನ್ನು ರಿಜರ್ವ್ ಮಾಡಿಟ್ಟಿದ್ದಾರೆ. ಈ ರೀತಿ ರಿಜರ್ವ್ ಮಾಡಿಟ್ಟಿರುವ ಭೂಮಿ ವ್ಯವಸಾಯಕ್ಕೆ ಯೋಗ್ಯವಾಗಿರುವುದರಿಂದ ಸಮುದ್ರ ಪಕ್ಕದಲ್ಲಿಯೇ ವಾಸಮಾಡುತ್ತಿರುವ ಮೀನುಗಾರರಿಗೆ ಕೊಟ್ಟಿದ್ದೇ ಆದರೆ ಅವರಿಗೆ ಬಹಳ ಅನುಕೂಲವಾಗುತ್ತದೆ. ಮತ್ತು ಈ ಜಮೀನುಗಳಲ್ಲಿ ಗೊಡಂಬಿಯನ್ನು ಉತ್ತಮ ರೀತಿಯಿಂದ ಬೆಳೆಯಬಹುದು. ಅಲ್ಲದೆ ಹೆಚ್ಚು ಗೊಡಂಬಿಯನ್ನು ಬೆಳೆದು ಹೊರದೇಶಗಳಿಗೆ ಕಳಿಸಿದರೆ ಫಾರಿನ್ ಎಕ್ಸ್‌ಛೇಂಜ್ ಸಿಗುತ್ತದೆ. ಆದ್ದರಿಂದ ಕ್ಯಾಸುರಿನಾ ಪ್ಲಾನ್‌ಟೇಷನ್‌ಗಾಗಿ ರಿಜರ್ವ್ ಮಾಡಿಟ್ಟಿರುವ ಭೂಮಿಯನ್ನು ಗೋಡಂಬಿ ಪ್ಲಾನ್‌ಟೇಷನ್ ಆಗಿ ಪರಿವರ್ತಿಸಿ ಮೀನುಗಾರರಿಗೆ ಒಂದೊಂದು ಎಕರೆಯಂತೆ ಹಂಚಿದರೆ ಅವರು ಗೊಡಂಬಿ ಬೆಳೆಯುವುದಕ್ಕೆ ಅನುಕೂಲವಾಗುವುದಲ್ಲದೆ ಅಲ್ಲಿಯೇ ವಾಸಮಾಡುವುದಕ್ಕೂ ಅನುಕೂಲವಾಗುತ್ತದೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಕಡೆ ರಿಜರ್ವ್ ಫಾರೆಸ್ಟ್ ಏರಿಯಾದಲ್ಲಿ ಕೆಲವು ಭಾಗವು ವ್ಯವಸಾಯಕ್ಕೆ ಬಹಳ ಯೋಗ್ಯವಾಗಿರುವುದರಿಂದ, ಆ ಜಮೀನನ್ನು ರೈತರಿಗೆ ಕೊಡಲಿಕ್ಕೆ ಮುಂದೆ ಬರಬೇಕು. ಈ ಜಮೀನುಗಳನ್ನು ಸಾಗುವಳಿಗೆ ಕೊಡಬೇಕೆಂದು ಸಾವಿರಾರು ಜನರು ಅರ್ಜಿ ಹಾಕಿಕೊಂಡಿದ್ದಾರೆ. ಈ ಅರ್ಜಿಗಳೆಲ್ಲಾ ತಹಸೀಲ್‌ದಾರರ ಕಛೇರಿಯಲ್ಲಿ ತೀರ್ಮಾನವಾಗದೆ ಬಿದ್ದಿವೆ. ಕೆಲವು ಜಮೀನುಗಳು ಮಂಜೂರಾದರೂ ಸಹ ನಾಲ್ಕೈದು ವರ್ಷಗಳಾದರೂ ಸಹ ಸಾಗುವಳಿಗೆ ಕೊಡುತ್ತಿಲ್ಲ. ಏಕೆಂದರೆ ಕಾಡಿನಲ್ಲಿರುವ ಮರಗಳನ್ನು ಕಡಿಯದೆ ಇರುವುದರಿಂದ ವ್ಯವಸಾಯ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಆದಷ್ಟು ಬೇಗ ಇಂತಹ ಜಮೀನುಗಳನ್ನು ಜನರಿಗೆ ಸಿಗುವಂತೆ ಸರ್ಕಾರದವರು ಅನುಕೂಲ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅರಣ್ಯ ಬೇಡ ಎಂದು ಯಾರೂ ಹೇಳುವುದಿಲ್ಲ. ಅರಣ್ಯ ಇರಲೇಬೇಕು. ಆದರೆ ಎಲ್ಲಿ ಕಾಡು ಹೆಚ್ಚಾಗಿ ಬೆಳೆಯುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಕಂದಕ ಇರುವ ಕಡೆಗಳಲ್ಲಿ ಹೆಚ್ಚು ಕಾಡು ಬೆಳೆಯುತ್ತದೆಯೇ ಹೊರತು ಮೈದಾನ ಪ್ರದೇಶಗಳಲ್ಲಿ ಕಾಡು ಬೆಳೆಯುವುದಿಲ್ಲ. ಚೆಲುವು ಮರಗಳು ಬೆಳೆಯತಕ್ಕಂಥ ಭಾಗವನ್ನು ಬಿಟ್ಟು ಉಳಿದ ಭಾಗವನ್ನು ಅರಣ್ಯ ಇಲಾಖೆಯಿಂದ ರೆವಿನ್ಯೂ ಇಲಾಖೆಗೆ ಬದಲಾಯಿಸಿ ಸಾಗುವಳಿಗೆ ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಮೈನರ್ ಫಾರೆಸ್ಟನ್ನು ದನಕರುಗಳಿಗೆ ಬೇಕಾಗುವಂಥ ಮೇವನ್ನು ಬೆಳೆಯುವುದಕ್ಕೆ ಸರ್ಕಾರದವರು ಬಿಟ್ಟಿದ್ದರು. ಈಗ ಈ ಪ್ರದೇಶದಲ್ಲಿ ನೀಲಗಿರಿ ಗಿಡಗಳನ್ನು ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನೀಲಗಿರಿ ಗಿಡಗಳು ಬೆಳೆಯುವ ಪ್ರದೇಶದಲ್ಲಿ ಸೊಪ್ಪು ಬೆಳೆಯುವುದಿಲ್ಲ ಮತ್ತು ಮಳೆಗಾಲದಲ್ಲಿ ನೀಲಗಿರಿಗಿಡಗಳ ಮೇಲೆ ಬಿದ್ದ ನೀರು ಹರಿದು ಹೋಗತಕ್ಕಂಥ ಪ್ರದೇಶಗಳಲ್ಲೂ ಸಹ ಹುಲ್ಲು ಬೆಳೆಯುವುದಿಲ್ಲವೆಂದು ರೈತರು ಹೇಳುತ್ತಿದ್ದಾರೆ. ಆದ್ದರಿಂದ ಕೆಲವು ರಿಜರ್ವ್ ಏರಿಯಾದಲ್ಲಿ ಮಾತ್ರ ಇಂತಹ ಗಿಡಗಳನ್ನು ಬೆಳೆಸುವ

(ಶ್ರೀ ಎಂ. ಎಂ. ಜಾಲಿಸಟ್ಟಿ)

ದಕ್ಕೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ದನಕರುಗಳಿಗೆ ಬೇಕಾಗುವಂತೆ ಸೊಪ್ಪನ್ನು ಮತ್ತು ಮೇವನ್ನು ಬೆಳೆಯುವುದಕ್ಕೆ ತೊಂದರೆಯಾಗುತ್ತದೆ. ನಮ್ಮ ಕಡೆ ಇರತಕ್ಕಂಥ ಕೆಲವು ಫಾರೆಸ್ಟ್ ಏರಿಯಾದಲ್ಲಿ ಔಷಧಗಳಿಗೆ ಬೇಕಾಗುವಂಥ ಗಿಡಮೂಲಿಕೆಗಳನ್ನು ಬೆಳೆಸುವುದಕ್ಕೆ ಏರ್ಪಾಡು ಮಾಡಿದರೆ ಬಹಳ ಚೆಲುವಾದೀತೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಹಾರ್ಡ್‌ಬೋರ್ಡ್, ಚಿಪ್‌ಬೋರ್ಡ್ ತಯಾರು ಮಾಡುವಂಥ ಮತ್ತು ಇನ್ನಿತರ ಸಾಮಾನುಗಳನ್ನು ತಯಾರು ಮಾಡುವಂಥ ಕೆಲವು ಕಾರ್ಖಾನೆಗಳನ್ನು ನಮ್ಮ ಕಡೆ ಸ್ಥಾಪನೆ ಮಾಡುವುದರ ಕಡೆಗೆ ಸರ್ಕಾರದವರು ಲಕ್ಷ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇಡೀ ರಾಜ್ಯವನ್ನು ತೆಗೆದು ಕೊಂಡರೆ ನಮ್ಮ ಜಿಲ್ಲೆಯ ಕಾಡಿನಿಂದ ಬರತಕ್ಕ ಉತ್ಪನ್ನ ಬೇರೆ ಯಾವ ಕಡೆಯಿಂದಲ್ಲೂ ಬರುತ್ತಿಲ್ಲ. ಫಾರೆಸ್ಟ್‌ನ ಒಟ್ಟು ಆದಾಯದ ಅರ್ಧಕ್ಕಿಂತ ಹೆಚ್ಚು ಭಾಗ ನಮ್ಮ ಜಿಲ್ಲೆಯಿಂದ ಸರ್ಕಾರಕ್ಕೆ ಬರುತ್ತಿದೆ. ನಮ್ಮ ಕಡೆ ಸಾಗುವಳಿಗೆ ಇರತಕ್ಕಂಥ ಜಮೀನು ಬಹಳ ಕಡಿಮೆ ಇರುವುದರಿಂದ ತಾಲ್ಲೂಕ್ ಬೋರ್ಡ್‌ಗಳಿಗೆ ಮತ್ತು ಗ್ರಾಮಪಂಚಾಯಿತಿಗಳಿಗೆ ಹೆಚ್ಚು ವರಮಾನ ಬರುತ್ತಿಲ್ಲ ವಾದ್ದರಿಂದ ಫಾರೆಸ್ಟ್‌ನಿಂದ ಬರುವ ಆದಾಯದಲ್ಲಿ ಶೇಕಡ 15 ರಷ್ಟನ್ನಾದರೂ ಗ್ರಾಂಟ್ ರೂಪದಲ್ಲಿ ತಾಲ್ಲೂಕ್ ಬೋರ್ಡ್‌ಗಳಿಗೆ ಮತ್ತು ಗ್ರಾಮಪಂಚಾಯಿತಿಗಳಿಗೆ ಕೊಡಬೇಕೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ರೆವಿನ್ಯೂ ಬಗ್ಗೆ ಮಾತನಾಡುವುದಾದರೆ, ಭೂ ಸುಧಾರಣಾ ಕಾಯಿದೆಯನ್ನು ಆದಷ್ಟು ಬೇಗ ಜಾರಿಗೆ ತಂದು ಯಾರು ಸಾಗುವಳಿ ಮಾಡುತ್ತಾರೋ ಅವರೇ ಭೂ ಮಾಲೀಕನಾಗುವಂತೆ ಬೇಕಾದ ಏರ್ಪಾಡುಗಳನ್ನು ಸರ್ಕಾರದವರು ಮಾಡಬೇಕು. ಇಲ್ಲದಿದ್ದರೆ ಆ ಜಮೀನಿನ ಎಲ್ಲಾ ಸವಲತ್ತುಗಳನ್ನೂ ಬೇರೆಯವರು ಪಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಮೊನ್ನೆ ಈ ವಿಚಾರದಲ್ಲಿ ಕೇಂದ್ರದ ಮಂತ್ರಿಗಳಾದ ಶ್ರೀ ಗುರುಪಾದಸ್ವಾಮಿಯವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ: ಏನೆಂದರೆ ಎಲ್ಲಾ ಸವಲತ್ತುಗಳನ್ನೂ ಆಬ್‌ಸೆಂಟಿ ಲ್ಯಾಂಡ್ ಲಾರ್ಡ್ಸ್ ಪಡೆದುಕೊಳ್ಳುತ್ತಿರುವುದರಿಂದ ರೈತರಿಗೆ ಬೇಕಾಗುವ ಪಂಪ್‌ಸೆಟ್ಟು ಮುಂತಾದ ಸವಲತ್ತುಗಳನ್ನು ಸಹಕಾರ ಸಂಘಗಳ ಮೂಲಕ ಪಡೆದುಕೊಳ್ಳುವುದು ಕಷ್ಟವಾಗುತ್ತಿದೆ ಎಂದು. ಆದ್ದರಿಂದ ಆದಷ್ಟು ಜಾಗ್ರತೆ ಯಾರು ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೋ ಅವರೇ ಭೂ ಮಾಲೀಕರಾಗುವಂತೆ ಕಾನೂನನ್ನು ಅಮಲ್‌ನಲ್ಲಿ ತರಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಅಬ್‌ಸೆಂಟಿ ಲ್ಯಾಂಡ್ ಲಾರ್ಡ್ಸ್‌ಗಳು ಸ್ವಂತ ಸಾಗುವಳಿಗೆ ಬೇಕಾದರೆ ತಮ್ಮ ಜಮೀನಿನಲ್ಲಿ ಸ್ವಲ್ಪ ಭಾಗವನ್ನು ಇಟ್ಟುಕೊಳ್ಳಬಹುದೆಂದು ಭೂ ಸ್ವಾಧೀನ ಕಾಯಿದೆಯ ಕಲಮಿನಲ್ಲಿ ಬೆರಳು ಮಾಡಿ ತೋರಿಸಿದ್ದೀರಿ. ಆದರೆ ಈ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ನನ್ನ ಸಲಹೆಯೆಂದರೆ ಈ ಕಲಮನ್ನು ಕಿತ್ತುಹಾಕಿ ಭೂ ಮಾಲಿಕರಿಗೆ ಆ ಜಮೀನಿನ ಬಗ್ಗೆ ಪರಿಹಾರಧನವನ್ನಾದರೂ ಕೊಟ್ಟರೆ ಅವರು ಆ ಹಣದಿಂದ ಬೇರೆ ಒಂದು ಉದ್ಯೋಗ ನೋಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ಸಲಹೆ ಕೊಡಲಿಕ್ಕೆ ಬಯಸುತ್ತೇನೆ.

ಇನ್ನು ತುಂಡು ಭೂಮಿ ಕಾಯಿದೆ ಬೊಂಬಾಯಿ ಪ್ರಾಂತ್ಯದಲ್ಲಿ ಇತ್ತು. ನಮ್ಮ ಮೈಸೂರು ರಾಜ್ಯದಲ್ಲಿ ಈ ಆಕ್ಟ್‌ನ್ನು 1966ನೇ ಇಸವಿಯಲ್ಲಿ ಪಾಸ್ ಮಾಡಿದರೂ ಕೂಡ ಇನ್ನೂ ಅಮಲ್‌ಗೆ ಬಂದಿಲ್ಲ. ಸರ್ಕಾರದವರು ಅದರ ರೂಲ್ಸನ್ನು ಆದಷ್ಟು ಬೇಗ ತಯಾರಿಸಿ ಅಮಲ್‌ನಲ್ಲಿ ತರಬೇಕೆಂದು ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ. ಆರ್. ಹಾಲಸ್ವಾಮಿ (ಜಗಳೂರು).—ಮಾನ್ಯ ಸಭಾಪತಿಯವರೇ, ಮಾನ್ಯ ರೆವಿನ್ಯೂ ಸಚಿವರು ಮಂಡಿಸಿರತಕ್ಕಂಥ ರೆವಿನ್ಯೂ ಡಿಮ್ಯಾಂಡ್‌ಗಳನ್ನು ಅನುಮೋದಿಸುತ್ತಾ ಕೆಲವಾರು ವಿಷಯಗಳನ್ನು ಹೇಳಬಯಸುತ್ತೇನೆ. ಈಗ ನಮ್ಮ ದೇಶದಲ್ಲಿ ಸುಮಾರು 35 ಸಾವಿರ ಮುಜರಾಯಿ ಸಂಸ್ಥೆಗಳಿವೆ. ಕಾನೂನಿನಲ್ಲಿ ಈ ಸಂಸ್ಥೆಗಳ ಬಗ್ಗೆ ಏಕರೂಪತೆ ಇರುವುದರಿಂದ, ಅದರಲ್ಲೂ ಹಳೆಯ ಮೈಸೂರಿನಲ್ಲಿರತಕ್ಕಂಥ ಮುಜರಾಯಿ ಸಂಸ್ಥೆಗಳವರಿಗೆ ಬಹಳ ತೊಂದರೆಯಾಗುತ್ತಿದೆ ಎನ್ನುವುದನ್ನು ಸರ್ಕಾರದವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಯಾವ ಒಂದು ಚಿಕ್ಕಪುಟ್ಟ ಅಭಿವೃದ್ಧಿ ಕಾರ್ಯಗಳನ್ನು ಮುಜರಾಯಿ ಸಂಸ್ಥೆಯವರು ಕೈಕೊಳ್ಳಬೇಕಾದರೂ ಮೇಲಿನ ಅಧಿಕಾರಿಗಳ ಅಪ್ಪಣೆ ಪಡೆದು ನಂತರ ಮಾಡಬೇಕಾಗಿದೆ. ಇದರಿಂದ ಸಣ್ಣಪುಟ್ಟ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಲು ಬಹಳ ತೊಂದರೆಯಾಗುತ್ತಿದೆ.

6-30 P.M.

ಈ ಒಂದು ಸಂಸ್ಥೆಗಳ ಆಶ್ರಯದಲ್ಲಿ ಏನು ಒಂದು ಅಧಿಕವಾದ ಉತ್ಪನ್ನವನ್ನು ಪಡೆಯುತ್ತಿದ್ದಾರೆ, ಆ ಒಂದು ವರಮಾನವನ್ನು ಅಭಿವೃದ್ಧಿಕಾರ್ಯಗಳಾದ ಶಾಲಾ ಕಾಲೇಜುಗಳನ್ನು ಮಾಡುವುದಕ್ಕಾಗಲಿ, ಆಸ್ಪತ್ರೆಗಳನ್ನು ಪ್ರಾರಂಭಿಸುವುದಕ್ಕಾಗಲಿ ಉಪಯೋಗಿಸಬೇಕಾದರೆ ಈ ಒಂದು ಕಾನೂನಿನ ಅಡಚಣೆಯಿಂದ ಹಳೆಯ ಮೈಸೂರಿನಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ, ಮದ್ರಾಸ್ ಕರ್ಣಾಟಕದಲ್ಲಿ, ಹೈದರಾಬಾದ್ ಕರ್ಣಾಟಕದಲ್ಲಿ ಈ ಅನುಕೂಲ ಇದೆ. ಆದ್ದರಿಂದ ಇದೇ ಬಜೆಟ್ ಸೆಷನಿನಲ್ಲಿ ಆ ರಿಲಿಜಿಯಸ್ ಅಂಡ್ ಚಾರಿಟೆಬಲ್ ಇನ್‌ಸ್ಟಿಟ್ಯೂಷನ್‌ಗಳ ಬಿಲ್ಲನ್ನು ಜಾರಿಗೆ ತರಬೇಕೆಂದು ಸರ್ಕಾರದವರನ್ನು ಒತ್ತಾಯ ಮಾಡಿ ಮನವಿಮಾಡಿಕೊಳ್ಳುತ್ತೇನೆ. ಮತ್ತು ಈ ಮುಜರಾಯಿ ಸಂಸ್ಥೆಗಳಿಂದ ಸುಮಾರು ಮೂರು ಲಕ್ಷ ವರಮಾನ ಬರುತ್ತಿರುವುದು, ಈ ಯೂನಿಫಾರ್ಮ್ ಬಿಲ್ಲನ್ನು ತಂದರೆ, ಇದು ಇನ್ನೂ 8 ಲಕ್ಷಕ್ಕೆ ಏರಬಹುದು ಎಂಬುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಮುಜರಾಯಿ ಸಂಸ್ಥೆಗೆ ಒಂದು ಲಕ್ಷ 14 ಸಾವಿರದಷ್ಟು ಜಮೀನು ಇದೆ. ಸುಮಾರು ಮೂರು ಲಕ್ಷದಷ್ಟು ವರಮಾನ ಬರುತ್ತಿದೆ. ಈ ಒಂದು ಜಮೀನನ್ನು ಮಾರಾಟಮಾಡಿ, ಉತ್ತಮವಾದ ಪ್ರದೇಶಗಳಲ್ಲಿ ಕಟ್ಟಡಗಳನ್ನು ಕಟ್ಟಿಸಿ ಖಾಯಂ ಆಗಿ ವರಮಾನ ಬರುವಂತೆ ಸರ್ಕಾರದವರು ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ. ನಮ್ಮ ಮುಜರಾಯಿ ಸಂಸ್ಥೆಗಳಲ್ಲಿ ಒಂದಾದಂತಹ ಶ್ರೀ ಮಹದೇಶ್ವರ ದೇವಸ್ಥಾನದಲ್ಲಿ ಲಕ್ಷಾಂತರ ಜನರು, ಅದರಲ್ಲೂ ನಮ್ಮ ರಾಜ್ಯದವರಲ್ಲದೆ, ಆಂಧ್ರ ಮದ್ರಾಸ್ ಮುಂತಾದ ಕಡೆಗಳಿಂದ, ಯಾತ್ರಿಕರು ಬರುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಅಲ್ಲಿ ಯಾತ್ರಿಕರಿಗೆ ಸರಿಯಾದ ಸೌಲಭ್ಯವಾದ ನೀರು. ವಸತಿ ಸಾಕಷ್ಟು ಇಲ್ಲದಿರುವುದರಿಂದ ಯಾತ್ರಿಕರಿಗೆ ಬಹಳ ತೊಂದರೆಯಾಗಿದೆ. ಈಗ ಅಲ್ಲಿ ಏನು ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಿದ್ದಾರೆ, ಅದನ್ನು ಕೂಡಲೇ ಕಾರ್ಯಗತ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇದನ್ನು ಮಾಡುವುದಕ್ಕೋಸ್ಕರ ಒಂದು ಲೋಕೋಪಯೋಗಿ ಇಲಾಖೆಯ ಸಬ್ ಡಿವಿಜನ್ ತೆಗೆದರೆ ಬಹಳ ಒಳ್ಳೆಯದು, ಇದನ್ನು ಕೂಡಲೇ ಮಾಡಬೇಕು. ಇದಕ್ಕೆ ಏನಾದರೂ ಕಾನೂನಿನ ಅಡಚಣೆ ಇದ್ದರೂ, ಅದನ್ನು ಮನ್ನಾಮಾಡಿ ಆದಷ್ಟು ಜಾಗ್ರತೆ ಆ ಮಾಸ್ಟರ್ ಪ್ಲಾನನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರದವರಲ್ಲಿ ಹೇಳಬಯಸುತ್ತೇನೆ. ನಮ್ಮ ಚಿತ್ರದುರ್ಗದಲ್ಲಿ ನಾಯಕನಹಟ್ಟಿ ಎಂಬ ಒಂದು ಪ್ರಸಿದ್ಧವಾದ ಕ್ಷೇತ್ರ ಇದೆ. ಇಲ್ಲಿಯೂ ಕೂಡ 50—60 ಸಾವಿರ ಜನರು ಯಾತ್ರಿಕರು ಬರುತ್ತಾರೆ. ಅಲ್ಲಿ ಬೇಕಾದಷ್ಟು ವರಮಾನವೂ ಬರುತ್ತದೆ. ಆದರೂ ಬರುವ ಯಾತ್ರಿಕರಿಗೆ ಯಾವ ತರದ ಸೌಲಭ್ಯವೂ ಇಲ್ಲವೆಂದು ಹೇಳಬೇಕಾಗಿದೆ. ಆದ್ದರಿಂದ ಸರ್ಕಾರದವರು ಈ ಕಡೆ ಗಮನ ಕೊಟ್ಟು ಇಲ್ಲಿ ಬೇಕಾದ ವಸತಿ ಸೌಕರ್ಯ ಹಾಗೂ ಇನ್ನಿತರ ಸೌಕರ್ಯಗಳನ್ನು ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ. ಈಗ ಅನೇಕ ಮುಜರಾಯಿ ಸಂಸ್ಥೆಗಳಿಂದ ಈ ಕೂದಲು ಸಂಗ್ರಹ ಮಾಡಿದ್ದನ್ನು ಟ್ರೇಡ್ ಕಾರ್ಪೊರೇಶನ್ ಮುಖಾಂತರ ಮಾರಾಟ ಮಾಡುತ್ತಿದ್ದಾರೆ. ಅದರಿಂದ ಈ ಡಾಲರ್ ಅರ್ನಿಂಗ ಸಾಧಾರಣ ಒಂದು ಟನ್ನಿಗೆ 8 ಲಕ್ಷ ರೂಪಾಯಿಯಷ್ಟು ವರಮಾನ ಬರುತ್ತಿದೆಯೆಂದು ಕೇಳಿದ್ದೇನೆ. ಅದೇ ರೀತಿಯಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಬರತಕ್ಕ ಕೂದಲುಗಳನ್ನು ಮಾರತಕ್ಕ ವ್ಯವಸ್ಥೆ ಇಲ್ಲ. ನಾಯಕನಹಟ್ಟಿಯಲ್ಲಿ ಕೂಡ ಬೇಕಾದಷ್ಟು ಕೂದಲು ಬರುತ್ತವೆ. ಅದನ್ನು ಕೂಡ ಈ ಟ್ರೇಡ್ ಕಾರ್ಪೊರೇಶನ್ ಮುಖಾಂತರ ಮಾರಾಟ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ತಿರುಮಲೈಯಲ್ಲಿ ಕಟ್ಟಿಸಿರುವಂತೆ ಮಲ್ಟಿ ಸ್ಟೋರಿಡ್ ಕಟ್ಟಡಗಳನ್ನು ಶ್ರೀ ಶೈಲದಲ್ಲಿಯೂ ಕಟ್ಟಿ ಲಕ್ಷಾಂತರ ಜನರಿಗೆ ಇದರಿಂದ ಅನುಕೂಲವಾದ ಸೌಲಭ್ಯಗಳನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಚಿತ್ರದುರ್ಗ ಜಿಲ್ಲೆಯ ರೆವೆನ್ಯೂ ಅಧಿಕಾರಿಗಳ ಸೀನಿಯಾರಿಟಿ ಲಿಸ್ಟಿನಲ್ಲಿ ಬಹಳ ಅನ್ಯಾಯವಾಗಿದೆ ಎಂದು ಕೇಳಿದ್ದೇನೆ. ಇದರ ಮೇಲೆ ಅನೇಕ ರಿಟ್ ಅರ್ಜಿಗಳು ಹೋಗಿವೆ. ಇದನ್ನು ಕೂಡ ಮಾನ್ಯ ಮಂತ್ರಿಯವರು ತೀವ್ರ ಗಮನಕೊಟ್ಟು, ಆದಷ್ಟು ಜಾಗ್ರತೆ ಇಡೀ ರಾಜ್ಯದ ಸೀನಿಯಾರಿಟಿ ಲಿಸ್ಟನ್ನು ಮಾಡುವಂತೆ ಒಂದು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮತ್ತು ಇದೇ ರೀತಿಯಲ್ಲಿ ರೆವೆನ್ಯೂ ಕೆಲಸದಲ್ಲಿರತಕ್ಕ ಅಧಿಕಾರಿಗಳಿಗೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಏನಾದರೂ ಪ್ರೊಬೇಷನರ್ಸ್‌ಗೆ ಕಾಲ್‌ಫಾರ್ ಮಾಡುವಾಗ, ಅದಕ್ಕೆ ಅರ್ಜಿ ಕಳಿಸುವ ಒಂದು ಅವಕಾಶವಿತ್ತು. ಅದನ್ನು ಈಗ ತೆಗೆದು ಹಾಕಿದ್ದಾರೆಂದು ಕಾಣುತ್ತದೆ. ಅದನ್ನು ಕೂಡ ಪುನಃ ಮಾಡಬೇಕು, ಮತ್ತು ಒಂದು ಅವಕಾಶ ಮಾಡಿಕೊಡಬೇಕು. ಈ ಬಗ್ಗೆ ಹೈಕೋರ್ಟಿನಲ್ಲಿ ರಿಟ್ ಕೂಡ ಬಿದ್ದಿದೆ. ಮತ್ತು ಸಬ್‌ರಿಜಿಸ್ಟ್ರಾರ ಹುದ್ದೆಗಳು 30—40 ಖಾಲಿ ಬಿದ್ದಿವೆ. ಅಲ್ಲಿ ಸೀನಿಯಾರಿಟಿ ಮುಖಾಂತರ ತೆಗೆದುಕೊಳ್ಳುವ ಬದಲು ಪ್ರೊಬೇಷನರನ್ನು ತೆಗೆದುಕೊಂಡರೆ ಬಹಳ ಒಳ್ಳೆಯದು

(ಶ್ರೀ ಜೆ. ಆರ್. ಹಾಲಸ್ವಾಮಿ)

ಮತ್ತು ಇದರಿಂದ ಯುವಕರಿಗೆ ಮುಂದೆ ಬರುವುದಕ್ಕೆ ಒಂದು ಅವಕಾಶ ಸಿಗುತ್ತದೆ ಇದನ್ನು ಪಬ್ಲಿಕ್ ಸರ್ವೀಸ್ ಕಮೀಷನ್ನಿನವರು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮತ್ತು ಕಂದಾಯದ ಬಗ್ಗೆ ಈಗಾಗಲೇ ಬಜೆಟ್ ಭಾಷಣದಲ್ಲಿ ಹೇಳಿದ್ದೇನೆ. ಈಗಿರುವ ಪದ್ಧತಿ ಮುಂದುವರಿಯಬೇಕು. ಸರ್ಕಾರದವರು ಮನಸ್ಸುಮಾಡುವುದಾದರೆ, ಒಂದೆರಡು ಎಕರೆ ಇರುವಂತಹ ರೈತರಿಗೆ ವಿನಾಯಿತಿ ಕೊಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ. ಮತ್ತು ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಹೇಳಿದ ರೀತಿಯಲ್ಲಿ ಫಾರೆಸ್ಟ್ ಲ್ಯಾಂಡುಗಳನ್ನು ಬೇಸಾಯಕ್ಕೋಸ್ಕರ ವಿಲೇವಾರಿ ಮಾಡುವುದನ್ನು ನಿಲ್ಲಿಸಬೇಕು. ಇದರಿಂದ ಮಲೆನಾಡಿನಲ್ಲಿ, ಬೇರೆ ಕಡೆಗಳಲ್ಲಿ ಮಳೆ ಬಂದರೂ, ಅಲ್ಲಿ ಬರುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಯವರು ಈ ಅರಣ್ಯಗಳನ್ನು ಕಾಪಾಡಿ, ಇನ್ನೂ ಹೆಚ್ಚು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು.

ಮತ್ತು ಪೋಲೀಸ್ ಪಟೇಲರ ಬಗ್ಗೆ ಬಹಳ ವಿಧವಾದ ಕಾಂಪಿಟೇಶನ್ ನಡೆಯುತ್ತಿದೆ. ಪೋಲೀಸ್ ಪಟೇಲರಾಗಿದ್ದರೆ ಏನು ಬೇಕಾದರೂ ಮಾಡಬಹುದು ಎಂಬ ಒಂದು ಮನೋಭಾವನೆ ಬಂದಿದೆ. ಇದರಲ್ಲಿ ಸುಮಾರು ತರದಲ್ಲಿ ಲಂಚ ನಡೆಯುತ್ತಿದೆ. ಪ್ರೊಬೇಷನರ್ಸಿಗೆ ಎಷ್ಟು ಮಟ್ಟಿಗೆ ಕಾತುರತೆಯಿಂದ ಇದ್ದಾರೋ, ಇದಕ್ಕೂ ಅಷ್ಟೇ ಮಟ್ಟಿನ ಕಾತುರತೆಯನ್ನು ತೋರಿಸಿ ಜನರು ಹೊಡೆದಾಡುತ್ತಿದ್ದಾರೆ. ಇದನ್ನು ಸರ್ಕಾರದವರು ತೀವ್ರವಾಗಿ ಆಲೋಚಿಸಿ, ಪುನಃ ಪರಿಶೀಲಿಸಬೇಕು, ಇಲ್ಲದಿದ್ದರೆ, ಯೋಗ್ಯರಾದಂಥವರನ್ನು, ಆ ಹಳ್ಳಿಯ ಜನರಿಂದ ವಿಚಾರಿಸಿಕೊಂಡು ಸರಿಯಾದ ವ್ಯಕ್ತಿಗಳನ್ನು ಆರಿಸಬೇಕು, ಇಲ್ಲದಿದ್ದರೆ ಬಹಳ ಅನ್ಯಾಯವಾಗುತ್ತದೆ ಎಂಬುದನ್ನು ಸರ್ಕಾರದವರು ಮನಗಾಣಬೇಕು. ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ನಾಲ್ಕು ತಾಲೂಕುಗಳಾದ ಜಗಳೂರು, ಮೊಳಕಾಲ್ಮೂರು, ಚಳ್ಳಕೆರೆ ಮತ್ತು ಹಿರಿಯೂರು ಪದೇ ಪದೇ ಅಭಾವಕ್ಕೆ ಈಡಾಗುವ ಪ್ರದೇಶ. ಅದಕ್ಕೆ ಅಲ್ಲಿ ಒಂದು ಶಾಶ್ವತ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಹಿಂದೆ ಮಾನ್ಯ ಉಪಸಚಿವರಾಗಿದ್ದ ಶ್ರೀ ಬೋರಯ್ಯನವರು ಮತ್ತು ಕೊಂಡಜ್ಜಿ ಬಸಪ್ಪನವರು ಎಲ್ಲಾ ಅಲ್ಲಿಯ ಜಿಲ್ಲಾ ಪರಿಷತ್ತಿನವರೊಡನೆ ಸೇರಿ ವಿಚಾರ ವಿನಿಮಯಮಾಡಿ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದು ಏನೂ ಕಾರ್ಯಗತವಾಗಿಲ್ಲ, ಇನ್ನೂ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ಕೈಗೊಂಡಿಲ್ಲ. ಆದ್ದರಿಂದ ಆ ನಾಲ್ಕು ತಾಲ್ಲೂಕುಗಳಲ್ಲಿ ಕೂಡಲೇ ಒಂದು ಶಾಶ್ವತ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಸರ್ಕಾರದವರಲ್ಲಿ ಮನವಿಮಾಡಿಕೊಂಡು, ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಹಾಗೂ ಅರಣ್ಯ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಸೂಚನೆಗಳನ್ನು ನೀಡಬಯಸುತ್ತೇನೆ.

ಕಳೆದ ವಿಧಾನಸಭಾಧಿವೇಶನದಲ್ಲಿ ಚುನಾವಣೆಗಳಾದನಂತರ ಕಂದಾಯವನ್ನು ವಜಾ ಮಾಡುವುದಾಗಿ ಸರಕಾರದವರು ಘೋಷಿಸಿದುದರಿಂದ ರೈತರೆಲ್ಲರೂ ಒಂದು ವಿಧವಾದ ತೃಪ್ತಿಪಡೆದಿದ್ದರು. ನಮ್ಮ ರಾಜ್ಯದಲ್ಲೂ ಮಳೆಬೆಳೆಗಳಿಲ್ಲದೆ ಕ್ಷಾಮ ಡಾಮರಗಳಿಗೆ ತುತ್ತಾಗಿ ಕಳೆದ ಎರಡು ಮೂರು ವರ್ಷಗಳಿಂದಲೂ ರೈತ ಸಾಮಾನ್ಯವಾಗಿ ಎಲ್ಲೂ ಕಂದಾಯವನ್ನು ಕೊಟ್ಟಿಲ್ಲ. ಇದಕ್ಕಾಗಿ ಕಂದಾಯದ ವಸೂಲಾತಿ ಕಾರ್ಯಕ್ರಮವನ್ನೂ ಸರಕಾರದವರು ಕೈಗೊಂಡಿಲ್ಲ. ಆದರೆ ಸರಕಾರಿ ಅಧಿಕಾರಿಗಳು ತಮ್ಮ ಕಡೆ ಇರುವ ವಾಸ್ತವವಾದ ವಿಚಾರಗಳನ್ನು ರೈತನಿಗೆ ಹೇಳದೇ ಈ ರೀತಿಯಾಗಿ ಮೋಸ ಮಾಡಿದ್ದಾರೆ. ಏಕೆಂದರೆ ಕಂದಾಯ ವಜಾ ಮಾಡುವುದಿಲ್ಲ, ಇರುವ ರೀತಿಯಲ್ಲೇ ಕಂದಾಯ ಕೊಡಬಹುದು ಎಂದು ಹೇಳಿದ್ದರೆ ರೈತರು ಬುದ್ಧಿವಂತರಾಗಿ ಪಾವತಿ ಮಾಡುತ್ತಿದ್ದರು. ಆದರೆ ಕಂದಾಯವನ್ನು ಈಗಿರುವ ರೀತಿಯಲ್ಲಿ ನಾವು ವಸೂಲು ಮಾಡುವುದಿಲ್ಲ ಎಂದು ಹೇಳುವುದನ್ನು ಬರವಣಿಗೆಯ ರೂಪದಲ್ಲಿ ಹೇಳಿದ್ದರೆ ಅದನ್ನಾದರೂ ಯಾವ ಸನ್ನಿವೇಶದಲ್ಲಿ ಮಾಡುತ್ತಾರೆಂದೂ ಹೇಳಲಿಲ್ಲ, ಮತ್ತು ಇವೊತ್ತು ಕಂದಾಯವನ್ನು ಮತ್ತೆ ಹೇರುತ್ತೇವೆ ಎಂದು ಸರಕಾರ ನಡೆಯತಕ್ಕ ರೀತಿ ಮತ್ತು ಆಡತಕ್ಕ ಮಾತು ಇವುಗಳಲ್ಲಿ ಎಷ್ಟು ವ್ಯತ್ಯಾಸಗಳಾದವು ಎನ್ನುವುದನ್ನು ನೋಡಬಹುದು. ರೈತರು ಕೂಡ ಸರಕಾರದವರು ಕಂದಾಯ ವಜಾ ಮಾಡುತ್ತಾರೆಂದೂ ನಂಬಿದ್ದರು. ಆದರೆ ಇಂದು ಇದರ ಬಗ್ಗೆ ಬೇರೆ ರೀತಿಯಾಗಿ ಹೇಳುತ್ತಿರುವುದರಿಂದ ಇದನ್ನು ಸ್ವಲ್ಪ

ಸೂಕ್ಷ್ಮವಾಗಿ ಯೋಚನೆ ಮಾಡಬೇಕಾಗಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಡಿ. ಎಂ. ಸಿದ್ಧಯ್ಯ ನವರು ಇಲ್ಲಿ ಮಾತನಾಡುತ್ತಾ, ಸರಕಾರದವರು ಆಡಿದ ಮಾತನ್ನು ಉಳಿಸಿಕೊಳ್ಳತಕ್ಕ ಧೈರ್ಯ ವನ್ನು ಹಾಗೂ ಅವರ ಪ್ರಾಮಾಣಿಕತೆಯನ್ನು ಉಳಿಸಿಕೊಳ್ಳಬೇಕು, ಇಲ್ಲವೇ ಹೋದರೆ ರೈತರ ಮೇಲೆ ಈಗ ಹಾಕಿರುವ ಕಂದಾಯವನ್ನು ವಸೂಲು ಮಾಡದಂತೆ ಅಧಿಕಾರಿಗಳಿಗೆ ತಿಳಿಸಿ ಸರಿಪಡಿಸಬಹುದು. ಆದರೆ ಇಂದು ಸರಕಾರ ಮಾಡಿರುವ ಪುನರ್‌ವಿಮರ್ಶಿತ ಕಂದಾಯ ಎಂದು ಏನು ವಿಧಿಸಿದ್ದಾರೆ ಅದನ್ನು ಯಾವ ನೀತಿ ನಿಯಮಗಳನ್ನು ಅನುಸರಿಸಿ ಒಂದು ಕಡೆ ಒಂದಕ್ಕೆ ಹತ್ತರಷ್ಟು, ಒಂದು ಕಡೆ ಒಂದಕ್ಕೆ ಆರರಷ್ಟು, ಮತ್ತೆ ಒಂದು ಕಡೆ ಒಂದಕ್ಕೆ ಇಪ್ಪತ್ತರಷ್ಟು ಕಂದಾಯವನ್ನು ಏರಿಸಿದ್ದಾರೆ! ಮನಸ್ಸಿಗೆ ಬಂದಹಾಗೆ ಕಂದಾಯವನ್ನು ಹೊರಿಸುವುದಾದರೆ ಯಾವ ರೈತ ತಾನೇ ಇಷ್ಟು ಹೆಚ್ಚು ಹೊರೆ ತಡೆಯಲು ಸಾಧ್ಯ ಎನ್ನುವುದನ್ನು ಯಾರೂ ಯೋಚನೆ ಮಾಡಿಲ್ಲ. ಸೆಟಲ್‌ಮೆಂಟು ಮಾಡಬೇಕು ಎಂದು ಜಮೀನಿನ ಮೇಲೆ ಇದ್ದ ಕಂದಾಯವನ್ನು ದ್ವಿಗುಣಪಡಿಸಿ ಹಾಗೂ ಯಾವ ನೀತಿ ನಿಯಮವಿಲ್ಲದೆ ಮಾಡಿರುವುದರಿಂದ ಯಾವ ರೈತನಿಗೂ ಸರಿಯಾದ ನ್ಯಾಯ ದೊರಕಿಲ್ಲ. ಒಂದು ಕಡೆಯಲ್ಲಿ ಎಂಟು ರೂಪಾಯಿಗಳಷ್ಟು ಇದ್ದ ಕಂದಾಯವನ್ನು ಎಂಬತ್ತು ರೂಪಾಯಿಗಳವರೆಗೆ ಕಂದಾಯ ಕೊಡಬೇಕೆಂದು ಮಾಡಿದ್ದಾರೆ. ಇಷ್ಟು ಹೆಚ್ಚು ಕಂದಾಯ ಹೊರಿಸಿರುವುದನ್ನು ರೈತ ಕೊಡುವುದಕ್ಕಾಗದೇ ಕಳೆದ ಮೂರು ವರ್ಷಗ ಳಿಂದಲೂ ಬಾಕಿಯಾಗಿಯೇ ಉಳಿದು ಬರುತ್ತಿದೆ. ರೈತರ ಮೇಲೆ ಇಷ್ಟು ಹೆಚ್ಚು ಕಂದಾಯ ಹೊರಿಸಿದರೆ ಅವರಿಂದ ವಸೂಲು ಮಾಡುವುದೂ ಸಾಧ್ಯವಿಲ್ಲ ಮತ್ತು ಈಗ ವಿಧಿಸಿರುವಂತೆ ಹೆಚ್ಚು ಕಂದಾಯವನ್ನು ವಿಧಿಸಿದರೆ ಯಾವ ರೈತನೂ ಅವನ ಜಮೀನನ್ನು ಉಳಿಸುವುದಕ್ಕೆ ಸಾಧ್ಯವಿಲ್ಲ ಮತ್ತು ರೈತ ತನ್ನ ಮನೆ ಮಠ ಇತ್ಯಾದಿಗಳನ್ನೆಲ್ಲಾ ಕಳೆದುಕೊಂಡು ಬೀದಿಯ ಭಿಕಾರಿಯಾಗುವ ಸ್ಥಿತಿ ಬಂದಿದೆ. ಯಾರಾದರೂ ಇದರಿಂದ ಸಂತೋಷಪಡುತ್ತಾರೆ ಎಂದು ತಿಳಿದುಕೊಂಡಿದ್ದರೆ ಅದಕ್ಕಿಂತ ತಪ್ಪು ಮಾರ್ಗ ಬೇರೊಂದು ಇಲ್ಲ ಎಂದು ಇಲ್ಲಿ ಸ್ಪಷ್ಟವಾಗಿ ತಿಳಿಸಬಯಸುತ್ತೇನೆ. ನೀವು ಹೇಳಬಹುದು, ರೈತ ಇಂದು ಅವನ ಜಮೀನಿನಲ್ಲಿ ಅವನಿಗೆ ಬೇಕಾದಷ್ಟು ಉತ್ಪನ್ನಗಳನ್ನು ಹಿಂದಿಗಿಂತಲೂ ಹೆಚ್ಚು ಉತ್ಪತ್ತಿ ಮಾಡುತ್ತಿದ್ದಾನೆ ಎಂದು. ಆದರೆ ಇಂದು ರೈತನ ಸಾಲದ ಹೊರೆ ಎಷ್ಟು ಹೆಚ್ಚಾಗಿದೆ ಎನ್ನುವುದರ ಕಡೆಗೆ ನಿಮಗೆ ಸರಿಯಾದ ನಿಜಾಂಶ ತಿಳಿದಿಲ್ಲ. ರೈತ ತನ್ನ ಸಾಲದ ಹೊರೆಯನ್ನು ಹೆಚ್ಚು ಮಾಡಿಕೊಂಡಿರುವುದು ಒಂದೇ ಅಲ್ಲ, ಅವನು ತನ್ನಲ್ಲಿರುವ ಬೆಳೆಯಲ್ಲಿ ಇಂತಿಷ್ಟು ದವಸವನ್ನು ಲೆವಿಯಾಗಿ ಕೊಡಬೇಕು ಎಂದು ಮಾಡಿದ್ದಾರೆ. ಅವನು ಕಡಿಮೆಯಾಗಿ ಬೆಳೆದಿದ್ದರೂ ಕೊಡಬೇಕು ಹೆಚ್ಚಾಗಿದ್ದರೂ ಕೊಡಬೇಕು. ಹೀಗಿರುವಾಗ ಸರ್ಕಾರ ಅವನಿಗೆ ಬೇಕಾದ ವಸ್ತುಗ ಳನ್ನು ಸಬ್‌ಸಿಡೈಸ್ ಮಾಡಿ ಕೊಡುತ್ತಿದ್ದೀರಾ? ಎಷ್ಟು ಫರ್ಟಿಲೈಸರ್ಸ್‌ಗಳನ್ನು ರೈತನಿಗಾಗಿ ಕೊಡುತ್ತಿದ್ದೀರಿ? ಮತ್ತು ಅವನಿಗೆ ಅಗತ್ಯವಾದ ಇನ್ನಾವ ಸೌಕರ್ಯಗಳು, ಎಂದರೆ, ಎತ್ತುಗಳು ಅಥವಾ ಟ್ರಾಕ್ಟರುಗಳನ್ನು ಕೊಡುತ್ತಿದ್ದೀರಿ ಎಂದರೆ ಯಾವುದೂ ಇಲ್ಲ. ಹೀಗಿರುವಾಗ, ಸರ್ಕಾರ ನಿಜವಾಗಿಯೂ ಈ ಸಮಸ್ಯೆ ಬಹಳ ಗಾಢವಾಗಿದೆ ಎಂಬುದನ್ನರಿತುಕೊಳ್ಳಬೇಕು. ಈಗ ಪುನರ್ವಿ ಮರ್ಶಿತವಾಗಿ ಹೇಳುತ್ತಿರುವ ಕಂದಾಯವನ್ನು ಈಗಿನ ಸ್ಥಿತಿಯಲ್ಲಿ ರೈತ ಹೊರಲಾರದಂತಹ ಸ್ಥಿತಿಗೆ ಬಂದಿದ್ದಾನೆ. ಒಂದು ವಿಧವಾಗಿ ಹಳ್ಳಿಗಳಲ್ಲಿರುವ ಶ್ಯಾನುಭೋಗರು ರೈತರಿಗೆ ಕಿರುಕುಳ ಗಳನ್ನು ಕೊಟ್ಟು ತೊಂದರೆಯಾಗುತ್ತಿದೆ. ಅಲ್ಲದೆ ರೆವೆನ್ಯೂ ಇಲಾಖೆ ನಿಜವಾಗಿಯೂ ಇದರ ಕಡೆಗೆ ಲಕ್ಷ್ಯ ಕೊಡುತ್ತಿಲ್ಲ. ಇಂದು ಈ ದೇಶದಲ್ಲಿ ಯಾವ ತರಹದ ಸುಧಾರಣೆಯೂ ಆಗಿಲ್ಲ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಇಂದು ನಮ್ಮ ತಾಲ್ಲೂಕು ಆಫೀಸಿನಲ್ಲಿ ಯಾವುದೋ ಒಂದು ಓಬಿರಾಯನ ಕಾಲದ ಪದ್ಧತಿ ಹಿಂದೆ ಏನಿತ್ತೋ ಅದೇ ಈಗಲೂ ನಡೆಯುತ್ತಿದೆ. ಇಂದು ಎಲ್ಲೆಲ್ಲೂ ಸೆಕ್ರೆಟೇರಿಯಟ್ಟುಗಳಲ್ಲಿ ಯಾವ ರೀತಿಯಾಗಿ ಆಡಳಿತ ನಡೆಯುತ್ತಿದೆ ಅಂತಹ ಟ್ರೇನಿಂಗು ಪಡೆದಂತಹ ಅಧಿಕಾರಿಗಳು ತಾಲ್ಲೂಕು ಆಫೀಸುಗಳಲ್ಲಿ ಇಲ್ಲ. ತಾಲ್ಲೂಕು ಆಫೀಸುಗಳಲ್ಲಿ ಸುಧಾರಿತ ವಾದ ಒಂದು ಆಡಳಿತ ಪದ್ಧತಿಯನ್ನು ತರಬೇಕಾದರೆ ತರಬೇತಿ ಹೊಂದಿದಂತಹ ಅಧಿಕಾರಿಗಳನ್ನು ಇಲ್ಲಿ ಹಾಕಿದರೆ ಇಲ್ಲಿನ ಕೆಲಸ ಕಾರ್ಯಗಳು ಚೆನ್ನಾಗಿ ಆಗುತ್ತದೆ. ಆದುದರಿಂದ ತಾಲ್ಲೂಕು ಆಫೀಸುಗಳ ಆಡಳಿತವನ್ನು ಮೂಲತಃ ಸುಧಾರಣೆ ಮಾಡಬೇಕು ಇಲ್ಲದಿದ್ದರೆ ನಿಜವಾಗಿಯೂ ಕೆಲವು ಊರುಗಳ ಲ್ಲಿರುವ ತಾಲ್ಲೂಕು ಆಫೀಸುಗಳನ್ನು ನೋಡಿದರೆ ಅಲ್ಲಿ ನಡೆಯುವ ರೀತಿನೀತಿಗಳಿಂದ ಬಡಜನತೆಗೆ ಏನೂ ಅನುಕೂಲಗಳು ಆಗುತ್ತಿಲ್ಲ. ಉದಾಹರಣೆಯಾಗಿ ಒಬ್ಬ ರೈತ ತನ್ನ ಜಮೀನನ್ನು ಒಬ್ಬರಿಗೆ ಮಾರುತ್ತಾನೆ. ಇದಕ್ಕಾಗಿ ಅವನ ಜಮೀನಿನ ಖಾತೆಯನ್ನು ಬದಲಾವಣೆ ಮಾಡಲು ಖಾತಾ ವರ್ಗಾವಣೆ ಫೀಜನ್ನು ಕೊಟ್ಟು ತಾಲ್ಲೂಕು ಆಫೀಸಿಗೆ ಬಂದು ಖಾತೆ ಬದಲಾವಣೆ ಮಾಡಬೇಕೆಂದು ಇಲ್ಲಿ ಅಧಿಕಾರಿಗಳನ್ನು ಕೇಳಿದಾಗ ಅವನಿಗೆ ಇಲ್ಲದ ಕಷ್ಟಗಳಾಗುತ್ತಿವೆ. ಇದರ ಜವಾಬುದಾರಿಯನ್ನು ಯಾರೂ ಸರಿಯಾಗಿ ವಹಿಸಿಕೊಂಡು ಬಡ ರೈತನಿಗೆ ಸಹಾಯ ಮಾಡುವುದೇ ಇಲ್ಲ. ಇದರಿಂದಾಗಿ ಎಷ್ಟೋ ಜಮೀನಿನ ಖಾತೆಗಳೇ ಹಳ್ಳಿಗಳಲ್ಲಿ ಆಗುತ್ತಿಲ್ಲ. ಇದರ ಬಗ್ಗೆ ಸರ್ಕಾರ ಕೂಡ ಇಲ್ಲಿಯವರೆಗೆ

(ಶ್ರೀ ಎಂ. ಮಲ್ಲಪ್ಪ)

ಎಷ್ಟು ಖಾತಾ ಟ್ರಾನ್ಸ್‌ಫರು ಕೇಸುಗಳು ಪೆಂಡಿಂಗ್‌ನಲ್ಲಿವೆ ಎನ್ನುವುದರ ಕಡೆಗೇ ಗಮನ ಕೊಡುತ್ತಿಲ್ಲ. ದಕ್ಷತೆ ಹಾಗೂ ಪ್ರಾಮಾಣಿಕತೆಗೆ ಹೆಸರಾಗಿದ್ದ ಸರ್ಕಾರದಲ್ಲಿ ಇಂದು ಅದು ಬಹಳ ಕಡಿಮೆಯಾಗಿದೆ. ಕಂದಾಯ ಮಂತ್ರಿಗಳು ಇದರ ಬಗ್ಗೆ ಸ್ವಲ್ಪ ಹೆಚ್ಚು ನಿಗಾ ಕೊಡಬೇಕೆಂದು ಮತ್ತು ತಾಲ್ಲೂಕು ಅಫೀಸುಗಳನ್ನು ಸುಧಾರಿತವಾದ ರೀತಿಯಲ್ಲಿ ಸುಧಾರಿಸದೇ ಇದ್ದರೆ ಇಲ್ಲಿನ ಆಡಳಿತವೂ ಸುಧಾರಿತವಾಗಲಾರದು ಮತ್ತು ರೈತನಿಗೂ ಅನುಕೂಲವಾಗಲಾರದು. ಇದಕ್ಕಾಗಿ ಇಲ್ಲಿ ಒಂದು ಸುಧಾರಿತವಾದ ಆಡಳಿತವನ್ನು ಪ್ರಯೋಗಮಾಡಬೇಕೆಂದು ನಾನು ಹೇಳುತ್ತೇನೆ. ಅಲ್ಲದೆ ಈಗ ಪುನರ್ವಿಮರ್ಶಿತವಾದ ಕಂದಾಯ ಕೆಲವು ಕಡೆಗಳಲ್ಲಿ ಬಹಳ ಹೆಚ್ಚಾಗಿದೆ. ಒಂದಕ್ಕೆ ಹತ್ತರಷ್ಟು ಹೆಚ್ಚಾಗಿದೆ. ಕಂದಾಯವನ್ನು ವಸೂಲಿ ಮಾಡತಕ್ಕ ಜವಾಬುದಾರಿ ತಾಲ್ಲೂಕು ಆಫೀಸಿನಲ್ಲಿರುವ ತಹಶೀಲುದಾರರಿಗೆ ಸೇರಿದ್ದು. ಆದರೆ ಇಂದು ಯಾವ ಕೆಲಸವನ್ನು ತಾಲ್ಲೂಕುಗಳಲ್ಲಿ ಮಾಡಬೇಕಾದರೂ ಅವನ್ನೆಲ್ಲಾ ತಾಲ್ಲೂಕಿನಲ್ಲಿರುವ ತಹಶೀಲುದಾರರುಗಳ ಮೇಲೆಯೇ ಹೆಚ್ಚಾಗಿ ಹೊರಿಸುತ್ತಿದ್ದಾರೆ. ಈಗ ಲೆವಿ ವಸೂಲಿಯನ್ನೂ ಅವರೇ ಮಾಡಬೇಕು, ಫ್ಯಾಮಿನ್ ರಿಲೀಫ್ ವರ್ಕ್ಸ್‌ಗಳನ್ನು ಅವರೇ ಮಾಡಬೇಕು, ಹೀಗೆ ಅವರ ಮೇಲೆಯೇ ಎಲ್ಲ ಜವಾಬುದಾರಿಗಳನ್ನೂ ಹೊರಿಸಿದರೆ ಅವರಿಗೆ ಕೆಲಸ ಮಾಡುವುದು ಕಷ್ಟವಾಗುತ್ತದೆ. ಮುಖ್ಯವಾಗಿ ಎಲ್ಲಿ ಹೆಚ್ಚು ಕೆಲಸಗಳನ್ನು ತಹಶೀಲುದಾರರುಗಳ ಮೇಲೆ ಹೊರಿಸುತ್ತೀರೋ ಅಂತಹ ಕಡೆಗಳಲ್ಲಿ ಅವರಿಗೆ ಅದಕ್ಕೆ ತಕ್ಕಂತೆ ಸಿಬ್ಬಂದಿಗಳನ್ನು ಸರ್ಕಾರ ಒದಗಿಸಿಕೊಡಬೇಕಾದುದು ಬಹಳ ಮುಖ್ಯ. ಇಲ್ಲದೆ ಹೋದರೆ ಕಷ್ಟವಾಗುತ್ತದೆ. ತಹಶೀಲುದಾರರಾಗಿ ಬರುವವರು ಆಯಾ ಪ್ರದೇಶಗಳಲ್ಲಿರುವ ರೈತರನ್ನು ಅರಿತುಕೊಳ್ಳುವಂತಹ ಕಾಲ ಸನ್ನಿಹಿತವಾಗುತ್ತಿದೆ. ಉದಾಹರಣೆಯಾಗಿ ನಮ್ಮ ಕಡೂರು ತಾಲ್ಲೂಕು ಆಫೀಸಿನಲ್ಲಿರುವ ಒಬ್ಬರು ತಹಶೀಲುದಾರರನ್ನೇ ತೆಗೆದುಕೊಳ್ಳೋಣ. ಒಂದು ಲಕ್ಷ ಅರವತ್ತು ಸಾವಿರ ಜನಸಂಖ್ಯೆ ಇರುವ ಈ ತಾಲ್ಲೂಕಿನಲ್ಲಿ ಸುಮಾರು 70 ಮೈಲಿಗಳಷ್ಟು ದೂರ ಇವರು ಸಂಚಾರ ಮಾಡಬೇಕು. ಇವರಿಗೆ ಎಲ್ಲ ಕೆಲಸಗಳನ್ನೂ ಮಾಡಬೇಕು ಎಂದರೆ ಯಾವ ಕೆಲಸವನ್ನಾದರೂ ತಾನೇ ಅವರು ದಕ್ಷತೆಯಿಂದ ಹಾಗೂ ಪ್ರಾಮಾಣಿಕವಾಗಿ ಮಾಡುವುದಕ್ಕಾಗುತ್ತದೆಯೇ? ಇವರಿಂದ ಎಲ್ಲ ಕೆಲಸಗಳನ್ನೂ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಇದಕ್ಕಾಗಿ ನನ್ನ ಸಲಹೆ, ದೊಡ್ಡ ದೊಡ್ಡ ತಾಲ್ಲೂಕುಗಳು ಎಲ್ಲಿ ಇವೆಯೋ ಅಂತಹ ಕಡೆಗಳಲ್ಲಿ ಸರಿಯಾದ ಹಾಗೂ ಸಾಕಷ್ಟು ಸಿಬ್ಬಂದಿ ವರ್ಗದವರನ್ನು ಒದಗಿಸಿ ಕೊಡಬೇಕು. ಹಾಗೆ ಮಾಡುವುದರಿಂದ ಖಾತೆ ಬದಲಾವಣೆಗಳು ಪಹಣಿ ಪತ್ರಗಳನ್ನು ಬರೆಯುವುದು ಮತ್ತು ಇತರ ಕಾಗದ ಪತ್ರಗಳನ್ನು ಚೆಕ್ ಮಾಡುವಂಥ ಅಧಿಕಾರಿಗಳೂ ಇದ್ದರೆ ಅವರು ತಮ್ಮ ಕಾರ್ಯವನ್ನು ನಿಷ್ಠೆಯಿಂದ ಮಾಡಲು ಅವಕಾಶವಾಗುತ್ತದೆ. ಇದಕ್ಕೋಸ್ಕರ ಎಲ್ಲ ತಾಲ್ಲೂಕುಗಳಲ್ಲೂ ಖಾತೆ ವರ್ಗಾವಣೆ ಮತ್ತು ಇತರ ಕೆಲಸಗಳಿಗಾಗಿ ಹೆಚ್ಚು ಸಿಬ್ಬಂದಿ ಇರುವಂತೆ ದೊಡ್ಡ ತಾಲ್ಲೂಕುಗಳಲ್ಲಿ ಮಾಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಸ್ಟ್ಯಾಂಪುಗಳ ಬಗ್ಗೆ ಅನೇಕ ಭಾಷಣಕಾರರು ಈಗಾಗಲೇ ಹೇಳಿದ್ದಾರೆ. ಸ್ಟ್ಯಾಂಪುಗಳು ಸರಿಯಾಗಿ ಎಲ್ಲ ಕಡೆಗಳಲ್ಲಿಯೂ ಸರಬರಾಜು ಆಗುತ್ತಿಲ್ಲ. ಇದಕ್ಕೆ ಕಾರಣ ಸ್ಟ್ಯಾಂಪು ಕಾಗದಗಳ ಕೊರತೆಯೇ ಆಗಿದೆ. ಅಲ್ಲದೆ ಇದು ಡಿಸ್ಟ್ರಿಕ್ಟ್ ಆಫೀಸಿನಿಂದ ತಾಲ್ಲೂಕು ಆಫೀಸುವರೆಗೆ ಬರಬೇಕು ಅನಂತರ ಇದು ಸ್ಟ್ಯಾಂಪು ವೆಂಡರುಗಳಿಗೆ ಹಂಚಿಕೆಯಾಗಬೇಕು. ಇದರ ಬಗ್ಗೆ ನಾನು ಸರ್ಕಾರಕ್ಕೆ ಒಂದು ಸಲಹೆ ಮಾಡುತ್ತಿದ್ದೇನೆ. ತಾಲ್ಲೂಕು ಆಫೀಸಿನಲ್ಲಿರುವ ಒಬ್ಬ ಗುಮಾಸ್ತರನ್ನೇ ಸ್ಟ್ಯಾಂಪು ಕಾಗದಗಳ ವಿತರಣೆಗಾಗಿ ನೇಮಕಮಾಡಿ ಅವರಿಂದ ಎಲ್ಲ ಜನರೂ ಅಲ್ಲಿಗೇ ಹೋಗಿ ತೆಗೆದುಕೊಳ್ಳುವ ವ್ಯವಸ್ಥೆ ಮಾಡಿದರೆ ಬಹಳ ಅನುಕೂಲವಾಗುತ್ತದೆ ಮತ್ತು ಸ್ಟ್ಯಾಂಪು ವೆಂಡರುಗಳು ಈಗ ಬ್ಲಾಕ್ ಮಾರ್ಕೆಟ್ಟು ಮಾಡುವ ಹಾಗೆ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ನ್ಯಾಯವಾದ ಬೆಲೆಯ ಸ್ಟ್ಯಾಂಪುಗಳು ಎಲ್ಲ ಜನರಿಗೂ ಎಲ್ಲ ಕಾಲದಲ್ಲೂ ಸಿಗಲು ಅನುಕೂಲವಾಗುತ್ತದೆ ಇಂತಹ ಒಂದು ಸೌಕರ್ಯವನ್ನು ಎಲ್ಲ ತಾಲ್ಲೂಕು ಆಫೀಸುಗಳಲ್ಲಿಯೂ ಮಾಡುವುದು ಅಗತ್ಯ ಎಂದು ಈ ಸಮಯದಲ್ಲಿ ಹೇಳುತ್ತೇನೆ.

ಅರಣ್ಯದ ವಿಷಯದಲ್ಲಿ ಹೇಳುವುದಾದರೆ, ನಮ್ಮ ದೇಶದಲ್ಲಿರುವ ಅರಣ್ಯ ಸಂಪತ್ತು ಸಂಪೂರ್ಣವಾಗಿ ನಾಶವಾಗುತ್ತಿದೆ. ತಾವು ಇನ್ನೂ ಇದನ್ನು ಉಳಿಸಿಕೊಂಡು ಮರಗಳನ್ನು ಇಲ್ಲಿ ಬೆಳೆಸಬೇಕು ಎಂದು ಇದಕ್ಕಾಗಿ ದುಡ್ಡು ಖರ್ಚು ಮಾಡುತ್ತಿದ್ದರೂ ಮರಗಳು ಮಾತ್ರ ಇಲ್ಲಿ ಬೆಳೆಯುತ್ತಿಲ್ಲ. ಅರಣ್ಯ ಇಲಾಖೆಯಲ್ಲಿ ಮರಗಳನ್ನು ಬೆಳೆಸುವುದಕ್ಕಾಗಿಯೇ ಹೆಚ್ಚು ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿದ್ದಾರೆ; ಮತ್ತು ಮರಗಳನ್ನು ಹರಾಜು ಮಾಡುವಾಗ ಡಿಪಾರ್ಟ್‌ಮೆಂಟಿನವರು

ಕೆಟ್ಟ ಮಾಲುಗಳನ್ನು ಮಾತ್ರ ಮಾರುತ್ತಿದ್ದಾರೆ. ಒಳ್ಳೆಯ ಮಾಲುಗಳನ್ನು ಮಾರುತ್ತಿಲ್ಲ ಎನ್ನುವ ದೂರುಗಳು ಅಲ್ಲಲ್ಲಿ ಬರುತ್ತಿವೆ. ಇದಕ್ಕೆ ಇಲಾಖೆಯವರೇ ಕಾರಣ ಎಂತಲೂ ಇದೆ. ನಮ್ಮ ಕಡೂರಿನಲ್ಲೇ ನೋಡಿದರೆ ಹರಾಜು ಮಾಡುವಾಗ ಒಳ್ಳೆಯ ಬೆಲೆಯುಳ್ಳ ಮರಗಳು ಹರಾಜಿನಲ್ಲಿದ್ದರೂ ಅವನ್ನು ತೆಗೆದು ಅಲ್ಲಿಗೆ ಕೀಳುಮಟ್ಟದ ಮರಗಳನ್ನು ಇಟ್ಟು ಹರಾಜು ಹಾಕಿ ಮಾರುತ್ತಿದ್ದಾರೆ. ಆದರೆ ಕೆಲವರು ಮಾಲುಗಳನ್ನು ಬೇಗನೆ ಸಾಗಿಸುತ್ತಾರೆ. ಕೆಲವರು ಸಾಗಿಸುವುದಿಲ್ಲ. ಹರಾಜು ಆದ ಎರಡು ತಿಂಗಳಲ್ಲಿಯೇ ಎಲ್ಲ ಹಣವನ್ನೂ ಕೊಟ್ಟು ಸಾಗಿಸಬೇಕು ಎಂದು ಇದ್ದರೂ ಕೆಲವು ಕಡೆ ಸಾಗಿಸುತ್ತಿಲ್ಲ. ಮಾಲುಗಳನ್ನು ಮಾರುವಾಗ ಕೀಳು ಮಾಲುಗಳನ್ನು ಮಾತ್ರ ಮಾರಿ ಬೇರೆ ರೀತಿಯಾಗಿ ತಾರತಮ್ಯ ತೋರುವಂತೆ ಮಾಡಬಾರದು. ಉತ್ತಮವಾದ ಟಿಂಬರ್ ಎಲ್ಲಿರುವುದೋ ಅವನ್ನು ಹಾಗೇ ಮಾರಬೇಕು. ಹಾಗೆ ಮಾರದೇ ಇದ್ದರೆ ಇದರಿಂದ ನಷ್ಟವಾಗುತ್ತದೆಯೋ ಇಲ್ಲವೇ ಎನ್ನುವುದನ್ನು ಇಲ್ಲಿ ಯೋಚನೆ ಮಾಡಬೇಕು.

ಇನ್ನು ಕಳ್ಳಸಾಗಾಣಿಕೆಯಿಂದ ಮರಗಳನ್ನು ಸಾಗಿಸುತ್ತಾರೆ ಎಂದು ಅಂತಹವರನ್ನು ಹಿಡಿದು ಅವರಿಂದ ಕಳ್ಳ ಮಾಲುಗಳನ್ನು ಇಲಾಖೆಯವರು ಅಲ್ಲಲ್ಲಿ ಹಿಡಿಯುತ್ತಿದ್ದಾರೆ. ಹಾಗೆ ಹಿಡಿದವರನ್ನು ಜಾಮೀನಿನ ಮೇಲೆ ಬಿಟ್ಟುಬಿಡುತ್ತಾರೆ. ಈಚೆಗೆ ತರೀಕೆರೆಯಲ್ಲಿರುವ ಅರಣ್ಯ ಅಧಿಕಾರಿಗಳು ಕಳ್ಳ ಮಾಲನ್ನು ಹಿಡಿದು ಅಲ್ಲಿರುವ ಡಿಪೋಗಳಲ್ಲಿ ಇಟ್ಟು ಅದನ್ನು ಇನ್ನೂ ಡಿಸ್‌ಪೋಸ್ ಮಾಡದೇ ಇರುವುದರಿಂದ ಅವೆಲ್ಲಾ ಕೊಳೆತು ನಾರುತ್ತಿವೆ. ಇದರಿಂದ ಲಕ್ಷಾಂತರ ರೂಪಾಯಿಗಳು ನಷ್ಟವಾಗುತ್ತಿವೆ. ಯಾವ ಮಾಲನ್ನೇ ಆಗಲಿ ಹಿಡಿದ ಮೂರು ತಿಂಗಳೊಳಗಾಗಿ ಅವನ್ನು ಡಿಸ್‌ಪೋಸ್ ಮಾಡಬೇಕು ಎನ್ನುವ ನಿರ್ಣಯ ಮಾಡಿ ಅದನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು. ಇಲ್ಲದೇ ಇದ್ದರೆ ಇದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳ ನಷ್ಟವಾಗುತ್ತದೆ.

ಇನ್ನು ಫ್ಯಾಮಿನ್ ರಿಲೀಫ್‌ವರ್ಕ್ಸ್‌ಗಳಿಗಾಗಿ ಸರ್ಕಾರ ಹಣ ಒದಗಿಸುತ್ತಿದೆ. ನಮ್ಮ ದೇಶದಲ್ಲಿ ಆಗಿಂದಾಗ್ಗೆ ಕ್ಷಾಮಡಾಮರಗಳಿಗೆ ಪ್ರತಿ ವರ್ಷವೂ ಒಂದಲ್ಲ ಒಂದು ಕಡೆ ತುತ್ತಾಗುತ್ತಿರುತ್ತಾರೆ. ಇದಕ್ಕೋಸ್ಕರ ಸರ್ಕಾರ ಒಂದು ಶಾಶ್ವತವಾದ ವ್ಯವಸ್ಥೆಯನ್ನು ಮಾಡಬೇಕು ಮತ್ತು ಫ್ಯಾಮಿನ್ ರಿಲೀಫ್ ವರ್ಕ್ಸ್‌ಗಾಗಿ ಕೊಡುವ ಹಣದ ಬಗ್ಗೆ ಈಗೇನು ರೂಲ್ಸುಗಳಿವೆ ಅದನ್ನು ಸ್ವಲ್ಪ ಸಡಿಲಗೊಳಿಸಬೇಕು. ಇಂದು ದೇಶದಲ್ಲಿರುವ ಗೋಕಟ್ಟೆಗಳು ಎಷ್ಟು ಇವೆ ಮತ್ತು ಎಷ್ಟನ್ನು ಜೀರ್ಣೋದ್ಧಾರ ಮಾಡಿದ್ದೀರಿ ಎನ್ನುವುದರ ಬಗ್ಗೆ ಒಂದು ಪಟ್ಟಿಯನ್ನು ಸರ್ಕಾರದ ಆರ್ಡರು ಪ್ರಕಾರ ಅಲ್ಲಲ್ಲಿ ಮಾಡುತ್ತಿದ್ದಾರೆ. ಆದರೆ ಇಲ್ಲಿ ಕೂಲಿ ಮಾಡುವ ಜನರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ಯಾವ ರೀತಿ ಕೂಲಿ ಕೊಡುತ್ತಾರೋ, ಎಂದರೆ ಗಂಡಾಳಿಗೆ 1–75 ಹೆಣ್ಣಾಳಿಗೆ 1–50 ಮತ್ತು ಚಿಕ್ಕವರಿಗೆ 1–25 ಎಂದು ಇರುವಂತೆ, ಎಲ್ಲ ಕೂಲಿಗಳಿಗೂ ಕೊಡಲೇಬೇಕು. ಒಂದು ಕೈಯಲ್ಲಿ ಕೊಟ್ಟ ಹಾಗೆ ಮಾಡಿ ಇನ್ನೊಂದು ಕೈಯ್ಯಲ್ಲಿ ಅದನ್ನು ಕಿತ್ತುಕೊಳ್ಳುವಂತೆ ಮಾಡಬಾರದು. ನ್ಯಾಯವಾದ ರೀತಿಯಲ್ಲಿ ಕೆಲಸ ಮಾಡಿದ್ದಕ್ಕೆ ತಕ್ಕ ಪ್ರತಿಫಲ ದೊರಕಬೇಕು ಮತ್ತು ಅನುಕೂಲ ಮಾಡಿಕೊಡಬೇಕು ಮತ್ತು ಸಾಕಾದಷ್ಟು ಕೂಲಿಯನ್ನು ಅಲ್ಲಿನ ಸನ್ನಿವೇಶಗಳಿಗನುಸಾರವಾಗಿ ಕೊಟ್ಟು ಜನಕ್ಕೆ ಅನುಕೂಲಮಾಡಿಕೊಡಬೇಕು ಎಂದು ಈ ಸಮಯದಲ್ಲಿ ಸಲಹೆಮಾಡುತ್ತೇನೆ. ಯಾವುದೇ ಆಗಲಿ ಅದಕ್ಕೆ ಒಂದು ಶಾಶ್ವತ ಪರಿಹಾರ ಒದಗಿಸುವುದು ಒಳ್ಳೆಯದು. ಲ್ಯಾಂಡ್ ಟ್ರಿಬ್ಯೂನಲ್ಸ್ ನೇಮಕ ಮಾಡಿದ್ದೇವೆ ಅವರು ಸಮಸ್ಯೆ ಬಗೆಹರಿಸುತ್ತಾರೆ ಎಂದು ಹೇಳುತ್ತೀರಿ. ಪ್ರತಿಯೊಂದು ಜಿಲ್ಲೆಯಲ್ಲಿ ಲ್ಯಾಂಡ್ ಟ್ರಿಬ್ಯೂನಲ್ಸ್ ಇವೆ. ನಮ್ಮ ಜಿಲ್ಲೆಯಲ್ಲಿ ಏಳು ತಾಲ್ಲೂಕುಗಳು ಸೇರಿ 3500 ಕೇಸುಗಳು ಇವೆ. ಇವುಗಳನ್ನು ತೀರ್ಮಾನ ಮಾಡಲಿಕ್ಕೆ ಎಷ್ಟು ವರ್ಷಗಳು ಬೇಕು ಎಂಬುದನ್ನು ವಿಚಾರ ಮಾಡಬೇಕು. ಅಲ್ಲದೆ ಈ ಸ್ಥಳಕ್ಕೆ ಬರಲು 50 60 ಮೈಲಿ ಅಂತರ ದೂರ ಇದೆ. 60—70 ಮೈಲಿ ದೂರ ಹೋಗಿ ಈ ಸಮಸ್ಯೆ ಬಗೆಹರಿಸಬೇಕು ಅಂದರೆ ಎಷ್ಟು ಕಷ್ಟ! ಎರಡು ಸ್ಥಳದಲ್ಲಿ ಕೆಲಸ ಮಾಡಿದರೆ ಜನಗಳಿಗೆ ಅನುಕೂಲವಾಗುತ್ತದೆ. ಚಿಕ್ಕಮಗಳೂರು, ಕಡೂರು, ತರೀಕೆರೆ ಈ ಸ್ಥಳದಲ್ಲಿ ಮಾಡಿದರೆ ಅನುಕೂಲವಾಗುತ್ತದೆ. ಈ ವಿಚಾರದಲ್ಲಿ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆ ಹೈಕೋರ್ಟಿಗೂ ಬರೆದಿದ್ದೇವೆ. ಈ ವಿಚಾರದಲ್ಲಿ ಸರ್ಕಾರ ಸಹಾಯ ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಕೊನೆಯದಾಗಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ).—ಸನ್ಮಾನ್ಯ ಅಧ್ಯಕ್ಷರೇ, ಕಂದಾಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ವಿಷಯಗಳ ಬಗ್ಗೆ ಮಾತನಾಡಬೇಕು ಎಂದು ಅಭಿಪ್ರಾಯ ಇದೆ. ಕಂದಾಯ ಮಂತ್ರಿಗಳು ಹಿಂದೆ ಹೇಳುತ್ತಾ ಇದ್ದರು. ರೈತನು ದೇಶದ ಬೆನ್ನು ಮೂಳೆ ಎಂದು. ಬೆನ್ನು ಮೂಳೆಯಾಗಿರುವ ರೈತನಿಗೆ ಇಂದು ಏನಾಗುತ್ತಿದೆ ಎನ್ನತಕ್ಕಂಥಾದ್ದು ಆ ದೇವರಿಗೇ ಗೊತ್ತು. ನಮ್ಮ ಡಿಸ್ಟ್ರಿಕ್ಟ್‌ನಲ್ಲಿ

(ಶ್ರೀ ಕೆ. ಎಂ. ಪುಟ್ಟಸ್ವಾಮಿ)

ಕೊಂಚ ಹೆಚ್ಚು ಕಡಿಮೆ ಪ್ರತಿಯೊಬ್ಬ ರೈತ ಬಡತನದಲ್ಲಿದ್ದಾನೆ. ಎರಡು ಮೂರು ಎಕರೆ ಜಮೀನು ಇಟ್ಟುಕೊಂಡು ಜೀವನ ನಡೆಸುವುದು ಇವತ್ತಿನ ದಿವಸ ಬಹಳ ಕಷ್ಟ. ಅದರಲ್ಲಿಯೂ ಕ್ಷಾಮಕ್ಕೆ ಒಳಪಟ್ಟಿರತಕ್ಕಂಥಾದ್ದು ನಮ್ಮ ಡಿಸ್ಟ್ರಿಕ್ಟು. ಕಂದಾಯ ಒಂದಕ್ಕೆ ಎರಡರಷ್ಟು ಹಾಕಿದರೂ ರೈತ ಸಂತೋಷದಿಂದ ಕೊಡಲು ತಯಾರಿದ್ದಾನೆ. ಈಗ ಸರಕಾರ ಮಾಡಿದ್ದನ್ನು ನೋಡಿದರೆ ಒಂದು ಕಡೆ ಅಗ್ರಿಕಲ್ಚರಲ್ ಇನ್‌ಕಮ್‌ಟ್ಯಾಕ್ಸ್ ಇನ್ನೊಂದು ಕಡೆ ಕಂದಾಯ ಹೀಗೆ ಆಗಿದೆ. ಇದನ್ನು ನೋಡಿದರೆ ರೈತರಿಗೆ ಬಹಳ ಅನ್ಯಾಯವಾಗುತ್ತಿದೆ. ಒಂದಕ್ಕೆ ಎರಡರಷ್ಟು ಕಂದಾಯ ಬೇಕಾದರೆ ಹಾಕಿ ಆದರೆ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ತೆಗೆಯಬೇಕು ಎಂದು ಕಂದಾಯ ಮಂತ್ರಿಗಳಲ್ಲಿ ಬಿನ್ನವಿಸಿ ಕೊಳ್ಳುತ್ತೇನೆ.

ನಮ್ಮ ದೇಶದಲ್ಲಿ ಅರಣ್ಯ ಸಂಪತ್ತು ಹೇರಳವಾಗಿದೆ. ಪ್ರತಿಯೊಬ್ಬ ಮನುಷ್ಯನು ಅರಣ್ಯ ಸಂಪತ್ತನ್ನು ಬೆಳೆಸಿದರೆ ಅದರಿಂದ ಹೆಚ್ಚು ಮಳೆ ಸುರಿದು ಬೆಳೆ ಹೆಚ್ಚು ಆಗುವುದಕ್ಕೆ ಕಾರಣವಾಗಿದೆ. ಅರಣ್ಯದಲ್ಲಿ ಸುಮಾರಾಗಿ ಗಂಧದ ಮರಗಳನ್ನು ಕಡಿದು ಪ್ರತಿ ದಿನವೂ ಕಳ್ಳತನದಿಂದ ಅದು ಬೊಂಬಾಯಿ ಕಡೆ ಹೋಗುತ್ತದೆ. ಕಂದಾಯ ಮಂತ್ರಿಗಳೂ ಆಗಿರುವ ಅರಣ್ಯ ಮಂತ್ರಿಗಳು ಇದನ್ನು ಕಣ್ಣಿನಿಂದ ನೋಡಿಕೊಂಡು ಇದ್ದರೂ ಇದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಂಡಿಲ್ಲ. ಮೊನ್ನೆ ದಿನ ಶಿವಮೊಗ್ಗದಲ್ಲಿ ಗಂಧದ ಕಟ್ಟಿಗೆಯನ್ನು ರಾತ್ರಿ ಹೊತ್ತಿನಲ್ಲಿ ಲಾರಿ ಲೋಡ್ ಮಾಡಿಸಿ ಕೊಂಡು ಹೋಗುವದನ್ನು ಹಾಗೂ ಕೃತಕ ನೋಟು ಕೊಟ್ಟಂಥ ಸಮಾಚಾರ ಪೇಪರಿನಲ್ಲಿ ನೋಡಿದ್ದೇವೆ. ಮರುದಿನ ಬ್ಯಾಂಕಿಗೆ ಹೋಗಿ ಆ ಖೋಟಾ ನೋಟು ಚಲಾವಣೆ ಮಾಡುವುದಕ್ಕೆ ಹೋದಾಗ್ಗೆ ಅವರನ್ನು ಅರೆಸ್ಟ್ ಮಾಡಿದ್ದಾರೆ. ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡರೇ ಇಲ್ಲವೇ ಎಂದು ಅರ್ಥವಾಗಲಿಲ್ಲ. ಅರಣ್ಯಸಂಪತ್ತನ್ನು ಸರಿಯಾಗಿ ರೂಢಿಸಿದರೆ ರೈತರಿಗೆ ಬೇಕಾದಷ್ಟು ಅನುಕೂಲ ಮಾಡಿ ಕೊಡಬಹುದು. ಆದರೆ ಕೈ ಕೆಳಗೆ ಇರತಕ್ಕಂಥ ಅಧಿಕಾರಿಗಳು ಜಂಗಲ್‌ನಲ್ಲಿ ಹೋಗಿ ಸಾಗವಾನಿ, ಗಂಧದ ಮರಗಳನ್ನು ಲಾರಿಗಳಲ್ಲಿ ಸಾಗಿಸುವುದಕ್ಕೆ ಅವರು ಸಾಮೀಲು ಆಗುತ್ತಾರೆ. ನಾವು ಇದನ್ನು ಕಣ್ಣಾರೆ ಕಂಡಿರತಕ್ಕಂಥಾದ್ದು. ಅರಣ್ಯ ಮಂತ್ರಿಗಳು ಇದಕ್ಕೆ ಸರಿಯಾದ ನಿಗಾ ಕೊಟ್ಟು ಭದ್ರಪಡಿಸಬೇಕು ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಅದು ಅರಣ್ಯ ರೋದನ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಈ ಲಂಚದ ವಿಚಾರ ಹೇಳುವುದಾದರೆ ಇದು ಸುಮಾರು ಶೇಕದಾರರಿಂದ ಹಿಡಿದು ಜಿಲ್ಲಾ ಮಟ್ಟದವರೆಗೆ ಹಬ್ಬಿದೆ. ಇದರಿಂದ ರೈತರಿಗೆ ಬಹಳ ಅನ್ಯಾಯ ಮಾಡುತ್ತಿದ್ದೀರಿ. ಸರಕಾರಕ್ಕೆ ಬಡ ಬೋರೇಗೌಡನಿಂದ ಬರತಕ್ಕಂಥ 12 ಕೋಟಿ ರೂಪಾಯಿಗಳನ್ನು ಪೆನ್‌ಷನ್‌ದಾರರಿಗೂ ಅಧಿಕಾರಿಗಳಿಗೂ ಹೆಚ್ಚು ತುಟ್ಟಿ ಭತ್ಯ ಕೊಟ್ಟು ಅವರನ್ನು ಅಕಾಮಡೇಟ್ ಮಾಡಿದ್ದೀರಿ. ಅವರಿಗೆ ಹೆಚ್ಚು ತುಟ್ಟಿ ಭತ್ಯ ಕೊಡಲಿ ಸಂತೋಷ. ಆದರೆ ಅವರು ನೀತಿವಂತರಾಗಲಿ ರೈತನ ಸೇವೆ ಮಾಡಲಿ, ರೈತನ ಕೆಲಸ ಮಾಡಿ ಕೊಡಬೇಕು ಇದನ್ನು ರೈತರಿಂದ ಜೀವನ ಮಾಡತಕ್ಕಂಥ ಅಧಿಕಾರಿಗಳು ತಿಳಿದುಕೊಳ್ಳಬೇಕು. ಲಂಚರುಷುವತ್ತು ಕಾಲಕ್ರಮೇಣದಲ್ಲಿ ಹೋಗಬೇಕಾಗುತ್ತದೆ ಅಧಿಕಾರ ಇದ್ದರೆ ಲಂಚ ಹತ್ತಿರ ಬರುತ್ತದೆ. ಆದರೆ ಅಧಿಕಾರಿಗಳು ಲಂಚ ಮುಟ್ಟಬಾರದು ಅಂದರೆ ಅವರ ಮಕ್ಕಳಿಗೆ ಒಳ್ಳೆಯದಾಗುತ್ತದೆ, ಅವರಿಗೆ ಒಳ್ಳೇ ಹೆಸರು ಬರುತ್ತದೆ. ಆದುದರಿಂದ ಕಂದಾಯ ಮಂತ್ರಿಗಳು ಶೇಕದಾರರಿಂದ ಹಿಡಿದು ಜಿಲ್ಲಾ ಮಟ್ಟದವರೆಗೆ ಅಧಿಕಾರಿಗಳನ್ನು ಸರಿಯಾಗಿ ಇಟ್ಟುಕೊಳ್ಳಬೇಕು. ಮೊನ್ನೆ ನಮ್ಮ ತಾಲ್ಲೂಕಿನಲ್ಲಿ ಪಂಚಾಯಿತಿ ಇಲೆಕ್ಷನ್ ಬಂತು. ಅಲ್ಲಿಯ ಅಧಿಕಾರಿಗಳು ಮೂರು ನಾಲ್ಕು ಸಾವಿರ ರೂಪಾಯಿ ತೆಗೆದುಕೊಂಡು ಮಾಡಬಾರದ ಕೆಲಸ ಮಾಡಿದರು. ಯಾರು ಅಪ್ಲಿಕೇಷನ್ ಹಾಕಿಕೊಂಡರೂ, ಯಾರೇ ಬರಲಿ; ಅದನ್ನು ಮಾಡುತ್ತೇವೆ, ಹಾಗೆ ಮಾಡುತ್ತೇವೆ ಎಂದು ಅವರು ಹೇಳುತ್ತಾರೆ. ಒಂದು ಕಡೆ ಅವರು ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟರ ಮಾತು ಕೇಳಬೇಕು ಎಂ. ಎಲ್. ಎ. ಮಾತು ಕೇಳಬೇಕು. ಎಂ. ಎಲ್. ಎ. ಹೇಳಿದ ಕೆಲಸ ಮಾಡುತ್ತಾನೆ. ಇಂಥ ಅಕ್ರಮ ಹೆಚ್ಚಾಗಿದೆ. ಇಂಥ ಅಕ್ರಮ ಮಾಡಿದರೂ ಕೂಡ ನಮ್ಮ ಮಂತ್ರಿಗಳು ಅವರಿಗೆ ಪ್ರೊಟೆಕ್ಷನ್ ಕೊಟ್ಟಿದ್ದಾರೆ.

ಶ್ರೀ ಬಿ. ರಾಚಯ್ಯ.—ಈವರೆಗೆ ಲಂಚ ತೆಗೆದುಕೊಂಡ ಬಗ್ಗೆ ಅವರು ನನಗೆ ಕಾಗದ ಬರೆಯಲಿಲ್ಲ. ಬೇರೆ ಅಧಿಕಾರಿಗಳು ಬರೆಯಲಿ. ಅಲ್ಲದೆ ಎಲೆಕ್ಷನ್ ದೂರು ಬಂದಿಲ್ಲ. ಚುನಾವಣೆ ಭಾಷಣ ಮಾಡಿದ ಹಾಗೆ ಇವತ್ತು ಭಾಷಣ ಮಾಡುತ್ತಿದ್ದೀರಿ. ಎಲ್ಲಿ ಮಾಡಿದ್ದಾರೆ ಯಾರು ಮಾಡಿದ್ದಾರೆ ಇದನ್ನು ಹೇಳಿ ಬಿಟ್ಟರೆ ಸಾಕು.

Sri B. P. GANGADHAR.—* * *

Interruption

Mr. DEPUTY SPEAKER.—Order, order; This need not be taken down.

ಶ್ರೀ ಬಿ. ರಾಚಯ್ಯ.—ಅವರು ಏನು ಹೇಳಿದ್ದಾರೆ ಏನು ಆರೋಪಣೆ ಮಾಡಿದ್ದಾರೆ ಅದನ್ನು ಹೇಳುವ ಶಕ್ತಿ ಅವರಿಗೆ ಇದೆ. ಬೇರೆಯವರ ಮೇಲೆ ಡಿಪೆಂಡ್ ಆಗಬೇಕಾಗಿಲ್ಲ. ಅವರಿಗೆ ನಿಮ್ಮಂಥ ಲಾಯರು ಬೇಕಾಗಿಲ್ಲ. ವೈಯಕ್ತಿಕವಾಗಿ ನಾನು ಅವರನ್ನು ಕೇಳಬೇಕಾಗಿದೆ. ರುಜುವಾತು ಮಾಡಿ ಕೊಡುತ್ತೀರಾ?

Sri B. P. GANGADHAR.— * * *

Mr. DEPUTY SPEAKER.—Order, Order, This need not be recommended.

(ಗಲಾಟೆ)

7-00 P.M.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಸ್ವಾಮಿ, ನಮ್ಮ ಕಂದಾಯ ಮಂತ್ರಿಗಳು ರಕ್ಷಣೆ ಕೊಟ್ಟಿಲ್ಲ, ಕೊಡತಕ್ಕವರೂ ಅಲ್ಲ. ಇಲಾಖೆಯಲ್ಲಿ ನಡೆಯುತ್ತಿರುವ ವೈಖರಿಯನ್ನು ಅವರಿಗೆ ತಿಳಿಸುತ್ತೇನೆ, ಬರವಣಿಗೆಯಲ್ಲಿ ಕೂಡ ತಿಳಿಸುತ್ತೇನೆ. ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ತಪ್ಪಿತಸ್ಥರ ಮೇಲೆ ಶಿಕ್ಷೆ ಕ್ರಮ ಕೈಕೊಳ್ಳಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಹಿಂದೆ ಮುಜರಾಯಿ ಇಲಾಖೆಯಲ್ಲಿ ಬಂಗಾರು ತಿರುಪತಿ ಮತ್ತು ಶ್ರೀಶೈಲ ಕ್ಷೇತ್ರ ಈ ಎರಡೂ ಕಡೆಗಳಲ್ಲಿಯೂ ಛತ್ರಗಳನ್ನು ಕಟ್ಟಬೇಕೆಂದು ಅಂದಾಜುಗಳು ತಯಾರಾಗಿದ್ದವು. ಕೆಲಸವನ್ನು ತೆಗೆದುಕೊಳ್ಳಬೇಕಾಗಿತ್ತು. ಇವರ ಪೈಕಿ ಬಂಗಾರು ತಿರುಪತಿಯಲ್ಲಿ ಛತ್ರದ ನಿರ್ಮಾಣವಾಯಿತು ಶ್ರೀಶೈಲ ಕ್ಷೇತ್ರವನ್ನು ಕೇಳುವವರೇ ಇಲ್ಲ. ಮುಜರಾಯಿ ಇಲಾಖೆಯಿಂದ ಬೇಕಾದಷ್ಟು ಹಣವನ್ನು ಬಂಗಾರು ತಿರುಪತಿಯಲ್ಲಿ ಖರ್ಚು ಮಾಡಿದ್ದಾರೆ. ಶ್ರೀಶೈಲ ಕ್ಷೇತ್ರ ಆಂಧ್ರ ಪ್ರದೇಶದಲ್ಲಿದ್ದರೂ ಅಲ್ಲಿಗೆ ಸುಮಾರು ಮೂರೂವರೆ ಲಕ್ಷ ಯಾತ್ರಿಕರು ಪ್ರತಿ ವರ್ಷ ಮೈಸೂರು ರಾಜ್ಯದಿಂದ ಹೋಗುತ್ತಾರೆ. ಅಲ್ಲಿ ಮೈಸೂರಿನ ಒಂದು ಛತ್ರವಿಲ್ಲವೆ ಬಹಳ ತೊಂದರೆಯಾಗಿದೆ. ಬಂಗಾರು ತಿರುಪತಿಯಲ್ಲಿ ಹೇಗೆ ಒಂದು ಛತ್ರವನ್ನು ಕಟ್ಟಿಸಲಾಗಿದೆಯೋ ಅದೇ ರೀತಿ ಶ್ರೀಶೈಲ ಕ್ಷೇತ್ರದಲ್ಲಿಯೂ ಒಂದು ಛತ್ರವನ್ನು ಕಟ್ಟಿಸಿಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

ನಮ್ಮ ಕಂದಾಯ ಮಂತ್ರಿಗಳು ಚಿಕ್ಕಬಳ್ಳಾಪುರಕ್ಕೆ ಬಂದಾಗ ಅವರನ್ನು ಕಾಂಗ್ರೆಸ್ ಆಫೀಸಿಗೆ ಕರೆದುಕೊಂಡು ಹೋಗಿ ಆ ಊರಿನಲ್ಲಿರುವ ಸಬ್‌ರಿಜಿಸ್ಟ್ರಾರ್ ಅವರು ಮಾಡುವ ಅನ್ಯಾಯ, ಅವರು ಬೇಕಾದಷ್ಟು ಲಂಚ ತೆಗೆದುಕೊಳ್ಳುವುದು ಎಲ್ಲವನ್ನೂ ಹೇಳಿ ಅವರನ್ನು ಎಲ್ಲಿಯಾದರೂ ಬೇರೆ ಕಡೆಗೆ ಸಾಗಿಸಿಬಿಡಿ ಎಂದು ಹೇಳಿದೆ. ಇದುವರೆಗೂ ಸಾಗಿಸಿಲ್ಲ. ಆತ ಎಂಥವನು ಎಂದರೆ ಎಷ್ಟೋ ಅಕ್ರಮಗಳನ್ನು ಮಾಡಿ ನಮ್ಮ ಊರಿಗೆ ಬಂದಿದ್ದಾನೆ. ನಮ್ಮ ಊರಿನಲ್ಲಿ ಎಷ್ಟು ಪತ್ರ ರಿಜಿಸ್ಟರ್ ಮಾಡಿಸಬೇಕೋ ಅದಕ್ಕೆ ತಕ್ಕಷ್ಟು ಲಂಚವನ್ನು ಕೊಟ್ಟರೆ ರಿಜಿಸ್ಟರ್ ಮಾಡುತ್ತಾರೆ, ಇಲ್ಲದೆ ಇದ್ದರೆ ಮಾಡುವುದಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ಮಾನ್ಯ ಸದಸ್ಯರಂಥವರು ತಡೆದುಕೊಳ್ಳಬಲ್ಲರು ಎಂದು ನಿಮ್ಮ ಹತ್ತಿರ ಕಳಿಸಿದ್ದಾರೆ. ಅವರನ್ನು ಸರಿಪಡಿಸುತ್ತೀರಿ ಎಂದು ಅಲ್ಲಿಗೆ ಕಳಿಸಿರಬಹುದು.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ನಮ್ಮ ಮಾನ್ಯ ಮಂತ್ರಿಗಳು ಅವರಿಗೆ ಏನು ಶಿಕ್ಷೆ ವಿಧಿಸಬೇಕೋ ಅದನ್ನು ವಿಧಿಸುತ್ತಾರೆಂದು ನಾನು ನಂಬಿದ್ದೇನೆ.

ಮೊನ್ನೆ ತಾನೇ ಮಾನ್ಯ ಸದಸ್ಯರೊಬ್ಬರು ಹೇಳಿದರು, ಮಂತ್ರಿಗಳಲ್ಲಿ ಅನೇಕರು ಹಿಂದೆ ನಾಲ್ಕು ಎಕರೆ ಜಮೀನಿದ್ದವರು ಇವೊತ್ತು ಮೂರು ಲಕ್ಷ ರೂಪಾಯಿ ಆಸ್ತಿ ಮಾಡಿದ್ದಾರೆ ಎಂದು ಪುನಃ ಕೇಳಿದರೆ 8 ಲಕ್ಷ ಆಸ್ತಿ ಮಾಡಿದ್ದಾರೆ ಎಂದು ಹೇಳಿದರು. ಅವರ ಪಕ್ಕದಲ್ಲಿ ಕುಳಿತುಕೊಂಡಿರುವ ಜನರು ವಿಚಾರ ಅವರಿಗೇ ಗೊತ್ತಿದೆ. ರಾಜಮಹಾರಾಜರಿಂದ ದುಡ್ಡು ತೆಗೆದುಕೊಂಡವರು ಅವರ ಪಕ್ಕದಲ್ಲಿದ್ದಾರೆ, ಮೇಯರ್ ಮಾಡುತ್ತೇವೆಂದು ತಿಳಿಸಿ ಬಂಗಲೆಯನ್ನು ಬರೆಸಿಕೊಂಡವರೂ ಆ ಕಡೆಯಲ್ಲಿದ್ದಾರೆ. ಇನ್ನೂ ಎಷ್ಟೋ ಸೊಸೈಟಿಗಳಲ್ಲಿ ಲಕ್ಷಾಂತರ ರೂಪಾಯಿ ಅಕ್ರಮ ಮಾಡಿ ಕಾಂಗ್ರೆಸ್ಸನ್ನು ಬಿಟ್ಟು ವಿರೋಧ ಪಕ್ಷವನ್ನು ಸೇರಿರುವ ಜನರೂ ಎಷ್ಟೋ ಮಂದಿ ಇದ್ದಾರೆ. ಇದನ್ನೆಲ್ಲ ಅವರು ತಿಳಿದುಕೊಂಡು ಟೀಕೆ ಮಾಡುವಾಗ ಬಹಳ ಜವಾಬ್ದಾರಿಯಿಂದ ಮಾಡಬೇಕು ಎಂದು ಹೇಳಿ ನಮ್ಮ ಮಾನ್ಯ ಮಿತ್ರರನ್ನು ನಾನು ಕೇಳಿಕೊಳ್ಳುತ್ತೇನೆ.

*** Matter not recorded as orded by the Chair

ಮಾನ್ಯ ಸಭಾಪತಿಗಳು ಒಂದೆರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ಅವರಿಗೆ ಧನ್ಯವಾಗಳನ್ನರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. DEPUTY SPEAKER.—Now the discussion on this Demand is concluded. The Minister will give reply tomorrow.

Sri H. SIDDAVEERAPPA.—If necessary you may give chance to one or two members.

Sri B. P. GANGADHAR.—The Chair will kindly bear with me.

Mr. DEPUTY SPEAKER.—Tomorrow is not possible.

Sri D. M. SIDDIAH.—It was agreed that the discussion must be over today and the Minister will reply tomorrow. So the Minister will reply tomorrow.

Sri B. P. GANGADHAR.—I request the Chair again. This is an important matter touching the ryot population of this country and it is a serious matter. You may kindly accommodate one or two members.

Mr. DEPUTY SPEAKER.—Tomorrow it is not possible.

Sri B. P. GANGADHAR.—If it is not possible, in protest we will walk out. We do not want to participate.

(The hon'ble members Sri B P. Gangadhar and Sri J. P. Sarwesh left the House)

Mr. DEPUTY SPEAKER.—The Minister will reply tomorrow. The House will now adjourn to meet tomorrow at 1 P.M.

The House adjourned at Ten Minutes past Seven of the Clock to meet again at One of the Clock on Wednesday, the 13th March 1968.